
ಚಿತ್ರ ಕಲಾವಿದ : ಕೆ. ಎನ್. ರಾಮಚಂದ್ರನ್

ಎಂ. ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಸಂಶೋಧನಾ ಪ್ರಬಂಧ



ಮಾರ್ಗದರ್ಶಕರು
ಡಾ. ಎಸ್. ಎಂ. ಅಂಗಡಿ

ಯೋಜಕ
ಟಿ. ಕೆ. ಕೇಶವವರ್ಮ

ವಿಭಾಗ
ನಿಕಾಯ
ವಿಶ್ವವಿದ್ಯಾಲಯ, ಹಂಪಿ
೨೦೧೪

ಚಿತ್ರಕಲಾವಿದ ಕೆ.ಎನ್. ರಾಮಚಂದ್ರನ್ ಅವರ ಕಲೆ ಮತ್ತು ಬದುಕು

ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಸಂಶೋಧನಾ ಪ್ರಬಂಧ

ಯೋಜಕ
ಡಿ.ಕೆ. ಕೀರ್ತಿವರ್ಮ

ಮಾರ್ಗದರ್ಶಕರು
ಡಾ. ನಿಂಗಪ್ಪ ಎಂ. ಅಂಗಡಿ
ಅಧ್ಯಾಪಕರು
ವಾಸ್ತುಶಾಸ್ತ್ರ, ಶಿಲ್ಪಶಾಸ್ತ್ರ ಮತ್ತು ಪ್ರತಿಮಾಶಾಸ್ತ್ರ ಹಾಗೂ ವರ್ಣಚಿತ್ರಕಲೆ ವಿಭಾಗ
ಬನಶಂಕರಿ, ಬಾದಾಮಿ

ಲಲಿತಕಲಾ ನಿಕಾಯ
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ
2013–2014

ಪ್ರಮಾಣ ಪತ್ರ

"ಚಿತ್ರಕಲಾವಿದ ಕೆ.ಎಸ್. ರಾಮಚಂದ್ರನ್ ಅವರ ಕಲೆ ಮತ್ತು ಬದುಕು" ಎಂಬ ಶೀರ್ಷಿಕೆಯ ಕಿರು ಸಂಶೋಧನಾ ಪ್ರಬಂಧವನ್ನು ಡಾ. ಎಸ್. ಎಂ. ಅಂಗಡಿ ಇವರ ಮಾರ್ಗದರ್ಶನದಲ್ಲಿ ಸಿದ್ದಪಡಿಸಿ ಕನ್ನಡ ವಿಶ್ವವಿದ್ಯಾಲಯ ಲಲಿತಕಲಾ ನಿಕಾಯದ ದೃಶ್ಯಕಲಾ ವಿಭಾಗಕ್ಕೆ ಎಂ.ಫಿಲ್ ಪದವಿಗಾಗಿ ಈ ಪ್ರಬಂಧವನ್ನು ಸಲ್ಲಿಸಲಾಗುತ್ತದೆ.

ಪ್ರಸ್ತುತ ಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲಿ ಅಥವಾ ಇತರೇ ಉದ್ದೇಶಗಳಿಗಾಗಲಿ ಬಳಸಿಕೊಂಡಿರುವುದಿಲ್ಲ ಎಂದು ಪ್ರಮಾಣೀಕರಿಸುತ್ತೇನೆ.

Keerthivarma.D.K

ದಿನಾಂಕ :

ಸ್ಥಳ : ಕ.ವಿ.ವಿ, ಹಂಪಿ. ವಿದ್ಯಾರಣ್ಯ

(ಡಿ. ಕೆ. ಕೀರ್ತಿವರ್ಮ)
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ದೃಢೀಕರಣ ಪತ್ರ

ಡಿ. ಕೆ. ಕೀರ್ತಿವರ್ಮ ಇವರು ಬರೆದು ಸಾದರ ಪಡಿಸಿದ **"ಚಿತ್ರ ಕಲಾವಿದ ಕೆ. ಎನ್. ರಾಮಚಂದ್ರನ್"** ಎಂಬ ಶೀರ್ಷಿಕೆಯ ಸಂಶೋಧನ ಪ್ರಬಂಧವು ಮೂಲ ಸಂಶೋಧನ ಕೃತಿಯಾಗಿದ್ದು, ಅವರು ನನ್ನ ಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾಲಯದ ಲಲಿತಕಲಾ ನಿಕಾಯದ ದೃಶ್ಯಕಲೆಗಳ ಅಧ್ಯಯನ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಈ ಮಹಾಪ್ರಬಂಧವನ್ನು ಸಿದ್ಧಪಡಿಸಿದ್ದಾರೆ.

ಪ್ರಸ್ತುತ ಪ್ರಬಂಧ ಇಡಿಯಾಗಿ, ಇಲ್ಲವೆ ಬಿಡಿಯಾಗಿ ಈ ಮೊದಲು ಎಲ್ಲಿಯೂ ಪ್ರಕಟವಾಗಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ದಿನಾಂಕ :
ಸ್ಥಳ : ಕ.ವಿ.ವಿ.ಹಂಪಿ
ವಿದ್ಯಾರಣ್ಯ

ಡಾ. ನಿಂಗಪ್ಪ. ಎಮ್. ಅಂಗಡಿ
ಅಧ್ಯಾಪಕರು
ವಾಸ್ತುಶಾಸ್ತ್ರ ಶಿಲ್ಪಶಾಸ್ತ್ರ ಮತ್ತು
ಪ್ರತಿಮಾಶಾಸ್ತ್ರ ವಿಭಾಗ


ಮುಖ್ಯಸ್ಥರ ದೃಢೀಕರಣ ಪತ್ರ

"**ಕಲಾವಿದ ಕೆ. ಎನ್. ರಾಮಚಂದ್ರನ್ ಅವರ ಕಲೆ ಮತ್ತು ಬದುಕು**" ಎಂಬ ಶೀರ್ಷಿಕೆಯ ಕಿರು ಸಂಶೋಧನ ಪ್ರಬಂಧವನ್ನು ಡಾ. ನಿಂಗಪ್ಪ ಎಂ. ಅಂಗಡಿ ಇವರ ಮಾರ್ಗದರ್ಶನದಲ್ಲಿ ಸಿದ್ದಪಡಿಸಿ ಕನ್ನಡ ವಿಶ್ವವಿದ್ಯಾಲಯ ಲಲಿತಕಲಾ ನಿಕಾಯದ ದೃಶ್ಯಕಲಾ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಈ ಪ್ರಬಂಧವನ್ನು ಡಿ. ಕೆ. ಕೀತಿವರ್ಮ ಅವರು ಸಲ್ಲಿಸುತ್ತಿದ್ದಾರೆ. ದೃಶ್ಯಕಲಾ ವಿಭಾಗದಲ್ಲಿ ಎಂ. ಫಿಲ್ ಅಧ್ಯಯನ ಮಾಡಿರುವ ಇವರು ಈಗ ಸಂಶೋಧನಾ ಪ್ರಬಂಧವನ್ನು ವಿಭಾಗದ ಮೂಲಕ ಅಧ್ಯಯನಾಂಗಕ್ಕೆ ಸಲ್ಲಿಸುತ್ತಿದ್ದಾರೆ.

ದಿನಾಂಕ: ೨೦-೭-೧೪
ಸ್ಥಳ : ಕ.ವಿ.ವಿ. ಹಂಪಿ ವಿದ್ಯಾರಣ್ಯ

ಮುಖ್ಯಸ್ಥರು
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಕಲಾವಿದ : ಕೆ. ಎನ್. ರಾಮಚಂದ್ರನ್



ಪರಿವಿಡಿ

ಚಿತ್ರಕಲಾವಿದ ಕೆ.ಎನ್. ರಾಮಚಂದ್ರನ್ ಅವರ ಕಲೆ ಮತ್ತು ಬದುಕು

ಅಧ್ಯಾಯ – 1

ಅಧ್ಯಯನ ಉದ್ದೇಶ ಸ್ವರೂಪ ಮತ್ತು ವಿಧಾನ

ಅಧ್ಯಾಯ–01

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವಿಧಾನ

'ಕಲೆ' ಎಂಬುದು ಕುಶಲತೆ, ಕೌಶಲ್ಯ, ಶಿಸ್ತು, ನಿರ್ದಿಷ್ಟತೆ ಇತ್ಯಾದಿ ಅರ್ಥವ್ಯಾಪ್ತಿಯಲ್ಲಿ ಗ್ರಹಿಸಬಹುದು. ಕಲೆಯನ್ನು ಚಿತ್ರ ಮತ್ತು ಶಿಲ್ಪಕಲೆಗೆ ಸೀಮಿತಗೊಳಿಸಿ ಯೋಚಿಸದೇ ಅದರಾಚೆಗೆ ಸಮಗ್ರ ವಿಚಾರದ ಚಿಂತನ–ಮಂತನಕ್ಕೆ ದಾರಿಯಾಗಬೇಕು. ಆ ನಿಟ್ಟಿನಲ್ಲಿ ಕಲೆಯನ್ನು ಸದ್ಬಳಕೆ ಮಾಡಬೇಕು. 'ಕಲೆಯ' ಕುರಿತಾಗಿ ನಮ್ಮ ಪ್ರಾಚೀನರಿಂದ ಹಿಡಿದು ಇತ್ತೀಚಿನವರೆಗೂ ಒಂದು ವ್ಯವಸ್ಥಿತ ರೂಪದಲ್ಲಿ ಅಸ್ತಿತ್ವವನ್ನು ಕಂಡುಕೊಂಡು ನಡೆದಿರುತ್ತದೆ. 'ಯಾವುದರಲ್ಲಿ ನಿರ್ಮಾಣ ಪ್ರಕ್ರೀಯೆ ಇದೆಯೋ ಅದೇ ಕಲೆ'[1] ಇದು ಪ್ಲೇಟೋನ ಸಿದ್ದಾಂತ ಇವನ ಪ್ರಕಾರ ಕಲೆ ಆನಂದಾನುಭೂತಿಯನ್ನು ಮತ್ತು ಪ್ರಯೋಜನಕಾರಿಯಾಗಿ ಕೆಲಸ ನಿರ್ವಹಿಸುತ್ತದೆ. ಈ ಆನಂದ ಪ್ರಕ್ರೀಯೆ 'ಕಲೆ'ಯನ್ನು ಹುಟ್ಟು ಹಾಕುವವನ ಮೇಲೆ ಅವಲಂಬನೆಗೊಳ್ಳುತ್ತದೆ. ಇಲ್ಲಿ ನಾನು ಇತರ ಕಲೆ ಮತ್ತು ಕಲಾವಿದರನ್ನು ಬಳಸದೇ ಒಬ್ಬ ಚಿತ್ರಕಾರನ ದೃಷ್ಠಿ ವಿವೇಚನೆಯನ್ನು ಮಾಡಲು ಬಯಸುತ್ತೇನೆ. ಚಿತ್ರಕಾರ ಎಂದರೆ ಯಾರು? ಅವನ ವ್ಯಾಪ್ತಿ ಏನು? ಅವನ ಸಾಮಾಜಿಕ ಜವಾಬ್ದಾರಿ ಎಷ್ಟು? ಎಂಬಿತ್ಯಾದಿ ವಿಷಯಗಳನ್ನು ಅಧ್ಯಯನ ಮಾಡುವುದು ಬಹುಮುಖ್ಯವೆನಿಸುತ್ತದೆ. ಕೇವಲ ಕಲಾತ್ಮಕ ವಿಷಯಕ್ಕೆ ಸೀಮಿತಗೊಳ್ಳದೆ ಸಮಗ್ರ ವೈಚಾರಿಕ ಚಿಂತನೆಯನ್ನು ಮಾಡುವುದು ಪ್ರಸ್ತುತ ವಿಚಾರವಾಗಿದೆ.

'ಕಲೆ' ಮತ್ತು ಅದರ ವ್ಯಾಪ್ತಿ ಬಹಳ ವಿಶಾಲವಾದುದರಿಂದ ಸಮಗ್ರವಾಗಿ ವಿವೇಚಿಸುವುದು ಕಷ್ಟದ ಕೆಲಸವೇ ಸರಿ. ಕಲೆ, ಕಲೆಯ ಪ್ರಾಚೀನತೆ, ಕಲೆಯ ಸ್ವರೂಪ, ಕಲೆಯ ವಿಸ್ತಾರತೆ ಹೀಗೆ ಹಲವಾರು ಬಗೆಯ ದೃಶ್ಯ ಮಂಥನ ಮಾಡುವುದು ಅಷ್ಟು ಸುಲಭದ ಕೆಲಸವಲ್ಲ. 'ಕಲೆ' ತನ್ನಷ್ಟಕ್ಕೆ ತಾನೇ ಬೆಳೆಯುವುದಿಲ್ಲ. ಅದರ ಹಿಂದೆ ಕಲಾವಿದರ ಅವಿರತ ಪ್ರಯತ್ನವಿರುತ್ತದೆ. ಕಲಾವಿದರಿಗೆ ಪ್ರೋತ್ಸಾಹ ಪೋಷಣೆ ಹಾಗೂ ಅಭಿವೃದ್ದಿಯ ಅಗತ್ಯತೆ ಬೇಕಾಗುತ್ತದೆ. ಅಂದಾಗ ಕಲಾವಿದನಿಗೆ ಕೆಲಸ ಮಾಡಲು ಶಕ್ತಿ ಬರುತ್ತದೆ. ಕಲೆಯು ಸೌಂದರ್ಯವನ್ನು ಸೃಷ್ಟಿಸುತ್ತದೆ. ಅದು ಕುರೂಪವನ್ನು ಸುಂದರಗೊಳಿಸುತ್ತದೆ. ಅವ್ಯಕ್ತವನ್ನು ವ್ಯಕ್ತಗೊಳಿಸುತ್ತದೆ.[2] ಕಲೆಯ ಸೌಂದರ್ಯ ಸೃಷ್ಟಿಯ ಹಿಂದೆ ಕಲಾವಿದನ ಪಾತ್ರ ದೊಡ್ಡದು 'ಕಲೆ'ಯ ಕುರಿತಾಗಿ ಪಾಶ್ಚಾತ್ಯ ವಿದ್ವಾಂಸರ ಅಭಿಪ್ರಾಯಗಳು ಭಿನ್ನವಾಗಿವೆ. ಪ್ಲೇಟೋ ಕಲೆಯು ಸತ್ಯದ ಪ್ರತಿಕೃತಿಯಾಗಿದೆ. ಕಲೆಯಲ್ಲಿ ನಾವು ಈಶ್ವರ ನಿರ್ಮಿತ ಪ್ರಕೃತಿಯನ್ನೇ ಪುನಃ ಸ್ಥಾಪಿಸುತ್ತವೆ. ಕಲೆಯು ಪ್ರಕೃತಿಯ ಪುನರ್ ಸೃಷ್ಟಿಯಾಗಿದೆ. ಹೆಗಲ್‌ನು – ಕಲೆಯು ಭೌತಿಕ ಅಸ್ತಿತ್ವದ ಅಭಿವ್ಯಕ್ತಿಯ ಮಾಧ್ಯಮವಾಗಿದೆ. ಕ್ರೋಚೆ–ಕಲೆಯು ಬಾಹ್ಯ ಪ್ರಭಾವಗಳ ಅಭಿವ್ಯಕ್ತಯಾಗಿದೆ. ಸಿಗ್ಮಂಡ್ ಪ್ರಾಯಡ್‌ನು– ಕಲೆಯ ಕಲ್ಪನೆಯ ಸಂಪೂರ್ಣ ಕ್ಷೇತ್ರವು ಅರ್ಧ ಚೇತನ ಮನಸ್ಸಿನ ಪ್ರಕ್ರೀಯೆಯಾಗಿದೆ. ರಸ್ಕಿನ್‌ನು– ಕಲೆಯು ಈಶ್ವರನ ಸೃಷ್ಟಿ ಕುರಿತು ಮನುಷ್ಯನ ಪರಮಾನಂದದ ಅಭಿವ್ಯಕ್ತಿಯು ಹೌದು. ಹರ್ಬರ್ಟ ರೀಡ್– ಕಲೆಯು ಒಂದು ಕ್ರೀಯೆಯಾಗಿದೆ.[3] ಈ ರೀತಿಯ ಕಲೆಯ ಅರ್ಥ ವ್ಯಾಪ್ತಿಯು ಪಾಶ್ಚಾತ್ಯರಲ್ಲಿ ಒಡಮೂಡಿದ್ದರೆ ಭಾರತೀಯ ವಿದ್ವಾಂಸರು ಸಹ ಕಲೆಯ ಕುರಿತಾದ ಅನೇಕ ವಿಚಾರಗಳನ್ನು ಮಂಡಿಸಿದ್ದಾರೆ. ಅಭಿನವಗುಪ್ತನು ಅಭಿವ್ಯಕ್ತಿ ಹಾಗೂ ಧ್ವನಿ ರಸಾನುಭೂತಿಯ ಸ್ವರೂಪ ಕಾವ್ಯ(ಕಲೆ)ದ ಗುರಿಯಾಗಿದೆ. ಕೆ. ಸಿ. ಪಾಂಡೆ ಆಳವಾದ ಪರಿವೀಕ್ಷಣೆ, ಪರಿಗಣನೆ, ಚಿಂತನೆ ಹಾಗೂ ಸ್ಪಷ್ಟ ಹಾಗೂ ಅಭಿವ್ಯಕ್ತಿಯ ಗುಣಲಕ್ಷಣಗಳಿಂದ ಕೂಡಿದ ಮಾನವಿಯ ಪ್ರಕ್ರಿಯೆಯೇ ಕಲೆ. ಜಯಶಂಕರ ಪ್ರಸಾದ ಈಶ್ವರನ ಸೃಜನ ಶಕ್ತಿಯ ಒಂದು ಲಘು ರೂಪವು ನಮ್ಮ ಅವರಿಗೆ ದಕ್ಕುವಂತೆ ಮಾಡುವುದೆ ಕಲೆಯಾಗಿದೆ. ಡಾ. ಜಯನೇಂದ್ರ ಕಲೆಯು ಮುಖ್ಯವಾಗಿ ಜನಕಲ್ಯಾಣಕ್ಕಾಗಿ ಸತ್ಯದ ಸೌಂದರ್ಯಪೂರ್ಣ ಅಭಿವ್ಯಕ್ತಿಯಾಗಿದೆ ಬೋಲೊನಾಥ ತಿವಾರಿ ಒಂದು ಕೃತಿಯ ನಿರ್ಮಾಣಕ್ಕಾಗಿ ಶಾರೀರಿಕ ಹಾಗೂ ಮಾನಸಿಕ ಕೌಶಲ್ಯದ ಪ್ರಯೋಗವೇ ಕಲೆಯಾಗಿದೆ.[4] ಪಾಶ್ಚಿಮಾತ್ಯರು ವೈಜ್ಞಾನಿಕ ಪರಿಕಲ್ಪನೆಯಲ್ಲಿ ವಿವೇಚಿಸಿದರೆ, ಭಾರತೀಯರು ದೈವತ್ವದ ನೆಲೆಯಲ್ಲಿ ಕಲೆಯನ್ನು ಕಂಡವರು.

ಅಧ್ಯಯನದ ಉದ್ದೇಶ :

'ಕಲೆಯ ವ್ಯಾಪ್ತಿ' ವ್ಯಾಪಕವಾದುದಾದರಿಂದ ದೃಶ್ಯಕಲೆಗಳಲ್ಲೆ ಒಂದಾದ 'ಚಿತ್ರಕಲೆ' ಮತ್ತು ಆ ಕ್ಷೇತ್ರದಲ್ಲಿ ಕೆಲಸಮಾಡಿದ ಕಲಾವಿದರನ್ನು ಕುರಿತು ಅಧ್ಯಯನ ಮಾಡುವುದು ಪ್ರಸ್ತುತ ಸಂದರ್ಭದಲ್ಲಿ ಸೂಕ್ತವೆನಿಸುತ್ತದೆ. ಚತ್ರಕಲಾ ಕ್ಷೇತ್ರದಲ್ಲಿ ಕೆಲಸಮಾಡಿದ ಕಲಾವಿದರ ಸಂಖ್ಯೆ ಅಂಕಿ ಅಂಶಗಳಿಂದ ಗುರುತಿಸುವುದು. ಅಷ್ಟು ಸುಲಬದ ಕೆಲಸವಲ್ಲ ಹಾಗೇ ನೋಡಿದರೆ ಇತಿಹಾಸ ಪೂರ್ವ ಹಾಗೂ ಇತಿಹಾಸ ಘಟ್ಟದ ಕಾಲದಲ್ಲಿ ಕಲಾವಿದರ ಸಂಖ್ಯೆಯನ್ನು ವರ್ಗಿಕರಿಸಿ ಅಧ್ಯಯನ ಮಾಡಿದ್ದು ಕಲಾ ಇತಿಹಾಸ ತಿಳಿಸುತ್ತದೆ, ಪ್ರಸ್ತುತ ಸಂದರ್ಭದಲ್ಲಿ ಭಾರತೀಯ ಆಧುನಿಕ ಕಲಾ ಬೆಳವಣಿಗೆಯಲ್ಲಿ ಶ್ರಮಿಸುತ್ತಿರುವ ತಮಿಳುನಾಡು ಮೂಲದ ರೋಮ್ಯಾಂಟಿಕ್ ವರ್ಣ ಸಂಯೋಜನೆಯ, 80 ರ ಅಂಚಿನ್ನಲ್ಲಿರುವ ಪ್ರಸಿದ್ಧ

ಚಿತ್ರಕಲಾವಿದ ಶ್ರೀಯುತ ಕೆ. ಎನ್. ರಾಮಚಂದ್ರನ್‌ರ ಕಲೆ ಮತ್ತು ಬದುಕನ್ನು ಕುರಿತು ಅಧ್ಯಯನ ಮಾಡುವುದು ನನಗೆ ಅಂತ್ಯಂತ ಸಂತೋಷ ದಾಯಕ ವಿಚಾರ. ತಮ್ಮ 60–70 ದಶಕಗಳ ಕಾಲ ಚಿತ್ರಕಲಾ ಕ್ಷೇತ್ರದಲ್ಲಿ ಅವಿರತ ಕೆಲಸ ಮಾಡಿದ್ದಾರೆ. ಅವರು ತಾವೇ ಹೇಳುವಂತೆ ಸುಮಾರು 65 ಸಾವಿರ ಕಲಾ ಕೃತಿಗಳನ್ನು ರಚನೆಮಾಡಿದ್ದಾರೆಂದು ಹೇಳುತ್ತಾರೆ. ಅವುಗಳಲ್ಲಿ ಬ್ಯಾನರ್ ಚಿತ್ರಗಳು, ರೇಖಾ ಚಿತ್ರಗಳು, ವರ್ಣ ಚಿತ್ರಗಳು, ಭಾವ ಚಿತ್ರಗಳು ಹೀಗೆ ವಿವಿಧ ಬಗೆಯ ಅಸಂಖ್ಯಾತ ಚಿತ್ರಗಳನ್ನು ರಚಿಸಿ ದಾಖಲಿಸುದ್ದುಂಟು. ಇವರು ರಚಿಸಿದ ವರ್ಣಚಿತ್ರಗಳನ್ನು ನೋಡುವುದೆ ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತದೆ. ಮೈ ಮನಸ್ಸನ್ನು ಸೌಂದರ್ಯೋಪಾಸನೆ ಮಾಡಿಸುತ್ತವೆ. ಈ ಕಲಾವಿದರು ಎಷ್ಟು ಭಾವುಕರೆಂದರೆ ಅವರ ಪ್ರತಿಯೊಂದು ವರ್ಣ ಚಿತ್ರಗಳಲ್ಲೂ ದಯೇ, ಧರ್ಮ, ಕರುಣೆ, ಶಾಂತಿ, ನೆಮ್ಮದಿ, ಸೌಂದರ್ಯೋಪಾಸನೆ, ಅಲಂಕಾರ ಇತ್ಯಾದಿ ವಿಷಯಗಳನ್ನು ಕಾಣಬಹುದಾಗಿದೆ. ಇಂತಹ ಒಬ್ಬ ಭಾವುಕ ವರ್ಣ ರಂಜಿತ ವ್ಯಕ್ತಿತ್ವದ ಕಲಾವಿದರನ್ನು ಅಧ್ಯಯನ ಮಾಡಲು ಅನುಮತಿ ನೀಡಿದ ಕನ್ನಡ ವಿಶ್ವವಿದ್ಯಾಲಯಕ್ಕೆ ಮೊದಲ ನನ್ನ ಕೃತಜ್ಞತೆ.

ಚಿತ್ರ ಕಲಾವಿದ ಕೆ. ಎನ್. ರಾಮಚಂದ್ರನ್ ಅವರು ಹುಟ್ಟಿ ಬೆಳೆದಿದ್ದು ತಮಿಳುನಾಡಿನ ತಂಜಾವೂರಿನ ಒಂದು ಪುಟ್ಟ ಗ್ರಾಮದಲ್ಲಿ. ತಂಜಾವೂರು ಮರಾಠ ಅರಸರ ಕಾಲದಲ್ಲಿ ಒಂದು ಪ್ರಸಿದ್ಧ ಕಲಾ ಕೇಂದ್ರವಾಗಿತ್ತು. ತಂಜಾವೂರು ಚಿತ್ರಕಲಾ ಶೈಲಿಯೆಂದೇ ಗುರುತಿಸಲ್ಪಡುತ್ತದೆ. ಇಂತಹ ನಾಡಿನಲ್ಲಿ ಹುಟ್ಟಿ ಬೆಳೆದ ರಾಮಚಂದ್ರನ್ ಅವರಿಗೆ ಕನ್ನಡಾಂಬೆ ಆಶ್ರಯ ನೀಡಿ ಪೋಷಿಸಿದ್ದಾಳೆ. ಈ ಕಲಾವಿದರಿಗೆ ತಮಿಳು, ನೆಲ ಜನ್ಮ ನೀಡಿದೆ, ಕನ್ನಡ, ಕರ್ಮ ಫಲ ನೀಡಿದೆ. ಈ ನಾಡು ನೆಲ, ಜಲ, ಭಾಷೆ, ಸಂಸ್ಕೃತಿಯ ಭೇದ ಭಾವಗಳನ್ನು ಲೆಕ್ಕಿಸದೆ ಇವರಿಗೆ ಆಶ್ರಯ ನೀಡಿದೆ. ಇವರೂ ಸಹ ಕನ್ನಡದವರಾಗಿ ತಮ್ಮ ಬದುಕನ್ನು ಬೆಂಗಳೂರಿನಂತಹ ಬೃಹತ್ ನಗರದಲ್ಲಿ ಕಂಡುಕೊಂಡಿದ್ದಾರೆ. ಇಂತಹ ಒಬ್ಬ ಪ್ರತಿಭಾವಂತ ಕಲಾವಿದರನ್ನು ಕುರಿತು ಅದ್ಯಯನ ಮಾಡುವುದು ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ.

ಧರ್ಮವು ಕಲೆಯ ಅಭಿವ್ಯಕ್ತಿಯಲ್ಲಿ ಹಾನಿಕಾರಕವಾಗಿದೆಯೆನ್ನುವ ಪಾಶ್ಚಾತ್ಯ ದರ್ಶನವನ್ನು ರವೀಂದ್ರರು ವಿರೋಧಿಸಿದ್ದಾರೆ. ಎಲ್ಲಿಯವರೆಗೂ ಧರ್ಮ ಆಧಾರಿತ ವಾಗಿರುತ್ತದೆಯೋ ಅಲ್ಲಿಯವರೆಗೆ ಕಲೆ ಕುಂಟಿತವಾಗುತ್ತದೆ. ಹಾಗೂ ಅದರ ಸ್ವತಂತ್ರ ಬೆಳವಣಿಗೆಗೆ ಸಾಧ್ಯವಿಲ್ಲ ಎನ್ನುವುದು ಪಾಶ್ಚಾತ್ಯರ ವಿಚಾರಧಾರೆ ಕಲೆಯ ಮನಶ್ಚೇತನ ಕಾಲದಲ್ಲಿ ಧರ್ಮದಿಂದ ಮುಕ್ತವಾಗಿತ್ತು. ಭಾರತೀಯ ಕಲೆಯು ಧರ್ಮದಿಂದ ಪ್ರೇರಿತವಾಗಿದೆ.[5] ಈ ರೀತಿಯ ನಂಬಿಕೆಗಳನ್ನು ನಮ್ಮ ಕಲಾವಿದರು ಅನುಸರಿಸಿಕೊಂಡೆ ತಮ್ಮ ಬದುಕನ್ನು ಕಳೆಯುತ್ತಿದ್ದಾರೆ. ಇದಕ್ಕೆ ರಾಮಚಂದ್ರನ್‌ರೂ ಸಹ ಹೊರತಲ್ಲ. ಇವರ ಕಲಾ ಪ್ರೇರಣೆಗೆ ತಾವು ಬೆಳೆದ ಪರಿಸರವೆ ಕಾರಣ. ತಂಜಾವೂರು ಕಲಾಕೇಂದ್ರವಾಗಿದ್ದರಿಂದ ಹಾಗೂ ಅಲ್ಲಿನ ಪ್ರಸಿದ್ಧ ದೇವಾಲಯಗಳಲ್ಲಿನ ಧರ್ಮ ಪ್ರತೀಕದ ವರ್ಣ ಚಿತ್ರಗಳಿಂದ ಈ ಕ್ಷೇತ್ರದಲ್ಲಿ ಕೆಲಸಮಾಡಲು ಸ್ಫೂರ್ತಿಯಾಯಿತೆಂದು ಹೇಳಬಹುದು. ಜೊತೆಗೆ ರಾಮಚಂದ್ರನ್‌ರ ಕುಟುಂಬವು ಸಂಗೀತ ಕ್ಷೇತ್ರದಲ್ಲಿ ಕೆಲಸಮಾಡುತ್ತಿದ್ದರಿಂದ ಈ ಪರಿಣಾಮ ಅವರ ಬಾಲ್ಯದಲ್ಲಿ ಕಂಡಿರಲು ಸಾಧ್ಯವಾಗಿರಬಹುದು. ಹೀಗಾಗಿ ಅವರ ಚಿತ್ರಗಳಲ್ಲಿ ಸಂಗಿತ ಪರಂಪರೆಯನ್ನು ಬಿಂಬಿಸುವ ಅಂಶಗಳು ಹೆಚ್ಚಾಗಿ ಕಂಡುಬರುತ್ತವೆ. ರಾಮಚಂದ್ರನ್‌ರು ತಮ್ಮ ಕುಟುಂಬದಲ್ಲಿ ಸಂಗಿತ ಮೇಳೈಸಿದ್ದರೂ ಸಹ ಅವರೊಬ್ಬ ವರ್ಣ ಚಿತ್ರಕಲೆಗೆ ಒಲವು ತೋರಿದ್ದು ಅವಿಸ್ಮರಣೀಯ. ನಮ್ಮ ಹೃದಯದ ಮೂಲಕ ಹೊರ ಜಗತ್ತು ತನ್ನ ಭಿನ್ನ ರೂಪ, ಗ್ರಂಥ ಹಾಗೂ ಧ್ವನಿಗಳನ್ನು ಹೊತ್ತು ಒಳಬರುತ್ತದೆ. ಹೃದಯದ ಕಿಂಡಿಗಳು ಹೆಚ್ಚು ತೆರೆದುಕೊಂಡಷ್ಟು ಹೊರ ಸೃಷ್ಟಿ

ಒಳಪ್ರವೇಶಿಸುತ್ತದೆ.[6] ಬಹುಶಃ ಈ ಮಾತು ಕಲಾವಿದ ರಾಮಚಂದ್ರನ್‌ರ ಬಾಲ್ಯದಲ್ಲಿನ ಅವರ ಕಲಾಬದುಕಿಗೆ ಸಮಂಜಸವೆನಿಸುತ್ತದೆ. ಯಾಕೆಂದರೆ ಇವರ ಕುಟುಂಬ ಊರು ಹಾಗೂ ತಂಜಾವೂರು ಪ್ರದೇಶದ ಕಲಾ ವಾತಾವರಣವು ಇವರ ವೃತ್ತಿ ಬದುಕಿನಲ್ಲಿ ಹಾಸುಹೊಕ್ಕಾಗಿದೆ.

ದೃಶ್ಯಕಲೆಗಳ ಆಸ್ವಾದನೆಗೆ ನಯನೇಂದ್ರಿಯಗಳು ಮಾತ್ರ ಸಾಕು. ಕಣ್ಣಿದ್ದವರು ಯಾರುಬೇಕಾದರೂ ಈ ಕಲೆಗಳನ್ನು ಅನುಭವಿಸಬಲ್ಲರು.[7] ರಾಮಚಂದ್ರನ್‌ರು ತಮ್ಮ ಬಾಲ್ಯದ ಸುತ್ತಲಿನಲ್ಲಿ ಕಂಡುಬರುತ್ತಿದ್ದ ಹಿರಿಯ ಕಲಾವಿದರ ಕಲಾಕೃತಿಗಳನ್ನು ನೋಡುವುದರ ಮೂಲಕ ಹಾಗೂ ಹಳೆಯ ದೇವಸ್ಥಾನಗಳಲ್ಲಿ ಕಂಡು ಬರುವ ಪೌರಾಣೀಕ ದೃಶ್ಯಚಿತ್ರಗಳನ್ನು ನೋಡುವುದರ ಮೂಲಕ ಆ ಚಿತ್ರಗಳಲ್ಲಿನ ರೇಖೆ, ಬಣ್ಣ, ಆಕೃತಿಗಳ ಸಮೂಹ, ಅಲಂಕಾರ ವಿನ್ಯಾಸ ಹೀಗೆ ಹಲವಾರು ದೃಶ್ಯಗಳು ಕಲಾವಿದರ ಮೇಲೆ ಪರಿಣಾಮ ಬೀರಿವೆ. ಅಂಥ ದೃಶ್ಯ ವಿವೇಚನೆಯನ್ನು ಈ ಸಂದರ್ಭದಲ್ಲಿ ವಿವೇಚಿಸಲಾಗಿದೆ. ತಮ್ಮ ಬಾಲ್ಯದ ಬದುಕಿನಿಂದ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಹಂತಕ್ಕೆ ಪ್ರವೇಶ ಪಡೆದು ಆ ಹಂತದಲ್ಲಿ ಕಂಡುಕೊಂಡ ಕಲಾ ಪರಿಸರವು ರಾಮಚಂದ್ರನ್‌ರ ಮೇಲೆ ಸಾಕಷ್ಟು ಪರಿಣಾಮ ಬೀರಿವೆ. ಇದು ಪ್ರತಿಯೊಬ್ಬ ಕಲಾವಿದರ ಬದುಕಿನಲ್ಲಿ ಕಂಡುಬರುವ ಸಂಗತಿಯಾದರೂ ಸಹ ಒಬ್ಬೊಬ್ಬರಲ್ಲಿ ಸಾಕಷ್ಟು ಭಿನ್ನತೆ ಕಂಡುಬರುತ್ತದೆ. ಕಲಾ ಕುಟುಂಬದಲ್ಲಿ ಜನಿಸಿದ ರಾಮಚಂದ್ರನ್‌ರು ತಂದೆ, ತಾಯಿ ಹಾಗೂ ಸಹೋದರ–ಸಹೋದರಿಯರ ಸಹಕಾರ ಮತ್ತು ಪ್ರೋತ್ಸಾಹ ಬಹಳ ದೊಡ್ಡದು. ಅವರ ಸಹಕಾರ ವಿದ್ದುದರಿಂದಲೇ ಈ ಮಟ್ಟದಲ್ಲಿ ಬೆಳೆಯಲು ಸಹಕಾರಿಯಾಯಿತೆಂದು ರಾಮಚಂದ್ರನ್‌ರು ಅಭಿಪ್ರಾಯ ಪಡುತ್ತಾರೆ. ಇಂಥ ಅವಿಸ್ಮರಣೀಯ ಅಂಶಗಳನ್ನು ಅಧ್ಯಯನ ಮಾಡಲಾಗಿದೆ.

ಕಲಾವಿದ ರಾಮಚಂದ್ರನ್‌ರಿಗೆ ಕೇವಲ ಕುಟುಂಬ ವರ್ಗವು ಪ್ರೋತ್ಸಾಹಿಸಿದ್ದಲ್ಲದೇ ಅವರ ಅಪಾರ ಮಿತ್ರಬಳಗವೂ ಕೂಡಾ ಪ್ರೊತ್ಸಾಹಿಸಿದ್ದು ಈ ಹಂತದಲ್ಲಿ ಇವರ ಕಲಾಚಟುವಟಿಕೆಗಳಿಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಅನೇಕ ಮಿತ್ರರು ಸಹಕರಿಸಿದ್ದಾರೆ. ಇಲ್ಲಿ ಒಬ್ಬ ಕಲಾವಿದ ಬೆಳೆಯಬೇಕಾದರೆ ತನ್ನಷ್ಟಕ್ಕೆ ತಾನು ಬೆಳೆಯಲು ಸಹಕಾರಿಯಾಗುವುದಿಲ್ಲ. ಸಮಾಜ ಮುಖಿಯಾಗಿ ಬೆಳೆಯುವ ನಾವು ಪ್ರತಿಯೊಬ್ಬರದು ಸಹಕಾರದ ಅಗತ್ಯತೆ ಇದೆ ಎಂದು ಕಲಾವಿದರು ವ್ಯಕ್ತಪಡಿಸುತ್ತಾರೆ. ಈ ರೀತಿಯ ಅನೇಕ ಪೂರಕ ವಿಚಾರಗಳನ್ನು ವಿವೇಚನೆ ಮಾಡಲಾಗಿದೆ. ದೃಶ್ಯಕಲೆಗಳು ಸ್ಪಷ್ಟವೂ ವೈಯಕ್ತಿಕವೂ ಆಗಿರುತ್ತವೆ. ಕಲಾವಿದ ಇಲ್ಲಿ ತನ್ನ ಸ್ವತಂತ್ರ ಚಿತ್ತವೃತ್ತಿ, ತನ್ನ ಆಲೋಚನೆಗಳಲ್ಲಿಯೇ ಕಲೆಯ ಸೆಲೆ, ಸ್ಫೂರ್ತಿ ಮತ್ತು ನಿಷ್ಪತ್ತಿಗಳನ್ನು ಕಂಡುಕೊಳ್ಳುತ್ತಾನೆ.[8] ಕಲಾವಿದ ರಾಮಚಂದ್ರನ್‌ರು ಬಾಲ್ಯದಲ್ಲಿ ಮತ್ತು ಕಿಶೋರಾವಸ್ಥೆಯಲ್ಲಿ ಕಲಾತ್ಮಕ ವಿಚಾರ, ಲೋಕಾನುಭವ ಮತ್ತು ಅನುಕರಣ ಮಾಡುವುದರೊಂದಿಗೆ ಚಿತ್ರಕಲೆಯನ್ನು ತಮ್ಮ ವೃತ್ತಿ ಬದುಕಿಗೆ ಬಳಸಿಕೊಂಡರು. ಇಂಥ ಪರಿಸರದ ವಿವಿಧ ವೈಪರಿತ್ಯತೆ ಹಾಗೂ ಜೀವನಾನುಭವವನ್ನು ಕುರಿತು ಅಧ್ಯಯನ ಮಾಡುವ ಉದ್ದೇಶ ಹೊಂದಿದೆ.

ಚಿತ್ರಕಲಾ ಕ್ಷೇತ್ರದಲ್ಲಿ ಹಲವಾರು ಹೊಸ ಹೊಸ ಪ್ರಯೋಗಾತ್ಮಕ ಪ್ರಯೋಗಗಳೊಂದಿಗೆ ಚಿರಪರಿಚಿತರಾದ ಅನೇಕ ಕಲಾವಿದರಿದ್ದಾರೆ. ಈ ಕಲಾಕ್ಷೇತ್ರವನ್ನು ಶ್ರೀಮಂತಗೊಳಿಸಿ ತಮ್ಮ ಜೀವನವನ್ನೇ ಮುಡುಪಾಗಿಟ್ಟ ರವಿವರ್ಮ, ಅಮೃತ ಸೇರ್‌ಗಿಲ್, ಕೆ.ಕೆ. ಹೆಬ್ಬಾರ, ಎಸ್.ಎಂ. ಪಂಡಿತ್, ಆರ್.ಎಂ. ಹಡಪದ, ವಾಸುದೇವ ಹೀಗೆ ಅನೇಕ ಕಲಾವಿದರು ಕನ್ನಡ ನೆಲದಲ್ಲಿ ಬದುಕಿ ಅಮರರಾಗಿದ್ದಾರೆ.

ಅಂಥವರ ಸಾಲಿನಲ್ಲಿ ಕೆ.ಎನ್. ರಾಮಚಂದ್ರನ್‌ರೂ ಸಹ ಒಬ್ಬರು. ಇವರು ತಮಿಳುನಾಡು, ಕರ್ನಾಟಕ, ಆಂದ್ರ ಇತ್ಯಾದಿ ಅಕ್ಕ ಪಕ್ಕದ ರಾಜ್ಯಗಳಲ್ಲಿ ಚಿರಪರಿಚಿತರು. ಇಲ್ಲಿ ಯಾವುದೇ ಭಾಷೆ, ಸಂಸ್ಕೃತಿ, ಪ್ರದೇಶ ಎಂದು ಭೇದಭಾವಿಸದೇ ರಾಮಚಂದ್ರನ್‌ರ ಜೀವನ ಮತ್ತು ಸಾಧನೆಯನ್ನು ಅಧ್ಯಯನ ಮಾಡುವುದು ನನ್ನ ಉದ್ದೇಶವಾಗಿದೆ.

ಕಲಾವಿದ ಕೆ.ಎನ್. ರಾಮಚಂದ್ರನ್‌ರು ತಮ್ಮ ಚಿತ್ರ ವೃತ್ತಿಯನ್ನು ಆರಂಭಿಸಿ ನೆಲೆಯನ್ನು ಕಂಡುಕೊಂಡಿದ್ದು ಕನ್ನಡದ ನೆಲದಲ್ಲಿ. ಮೊದಲು ಚಲನಚಿತ್ರಗಳ ಪ್ರಚಾರ ಬ್ಯಾನರ್‌ಗಳನ್ನು ಬರೆಯುವುದರ ಮೂಲಕ ತಮ್ಮ ವೃತ್ತಿಯನ್ನು ಆರಂಭಿಸಿದರು. ದಶಕಗಳ ಕಾಲ ಈ ಬದುಕನ್ನು ಸವಿದವರು. ಚಿತ್ರರಸಿಕರ ಮನಗೆದ್ದರು. ಚಲನಚಿತ್ರದ ನಟ–ನಟಿಯರ ರಂಗು ರಂಗಿನ ಬದುಕನ್ನು ತಮ್ಮ ಕುಂಚದಲ್ಲಿ ಸೆರೆಹಿಡಿದವರು. ಇವರು ಪ್ರಸಿದ್ಧ ಕನ್ನಡ, ತಮಿಳು ಹಾಗೂ ಹಿಂದಿ ನಟ–ನಟಿಯರ ಚಿತ್ರಗಳಿಗೆ ಬಣ್ಣದ ಟಚ್‌ಅಪ್ ಕೊಟ್ಟಿದ್ದಾರೆ. ಅವರ ರಂಗುರಂಗಿನ, ತಳುಕು ಬಳುಕಿನ ಜೀವನವನ್ನು ರೋಮ್ಯಾಂಟಿಕ್ ವರ್ಣಗಳಲ್ಲಿ ಕುಂಚದ ಮೂಲಕ ದೃಶ್ಯೀಕರಿಸಿದ್ದಾರೆ. ಇಂಥ ರಮ್ಯ ಬದುಕಿನ ಚಿತ್ರಕಲಾವಿದರ ಕುರಿತು ಅಧ್ಯಯನ ಮಾಡಲಾಗಿದೆ. ದೃಶ್ಯಕಲೆಯಲ್ಲಿ ಪ್ರೇಕ್ಷಕ ಕಲೆಯನ್ನು ತನಗೆ ತೃಪ್ತಿಯಾಗುವಷ್ಟು ನೋಡುತ್ತಾನೆ. ಆ ಸಮಯವನ್ನು ತನಗೆ ಬೇಕಾದಷ್ಟು ಅವಧಿಗೆ ಹಿಗ್ಗಿಸಿಕೊಳ್ಳಲು ಅಥವಾ ಕುಗ್ಗಿಸಿಕೊಳ್ಳಲು ಸಹೃದಯನಿಗೆ ಅವಕಾಶವಿರುತ್ತದೆ.[9] ರಾಮಚಂದ್ರನ್‌ರ ಕಲಾಕೃತಿಗಳು ಸುಮಾರು 65 ಸಾವಿರಕ್ಕಿಂತಲೂ ಹೆಚ್ಚಿನ ಸಂಖ್ಯೆಗಳಲ್ಲಿ ರಚನೆಗೊಂಡಿವೆ. ಈ ಚಿತ್ರಗಳು ರೇಖಾ ಚಿತ್ರಗಳ ಸ್ವರೂಪದಲ್ಲಿ ಭಾವಚಿತ್ರಗಳ ಸ್ವರೂಪದಲ್ಲಿ ಹಾಗೂ ಸಂಯೋಜನಾ ಚಿತ್ರಗಳ ಸ್ವರೂಪದಲ್ಲಿ ಅನಾವರಣಗೊಂಡಿವೆ. ಇವೆಲ್ಲ. ದೇಶ, ಸಂಸ್ಕೃತಿ ಹಾಗೂ ಸಮಾಜವನ್ನು ಪ್ರತಿನಿಧಿಸುತ್ತವೆ. 80 ರ ವಯೋಮಾನದ ಶ್ರೀಯುತರು ಇಂದು ಸಹ ಉತ್ಸಾಹದ ಚಿಲುಮೆಯಾಗಿ, ಕಲಾಚಟುವಟಿಕೆಯಲ್ಲಿ ತೊಡಗಿಕೊಂಡಿದ್ದಾರೆ. ದೇಶಕ್ಕೆ ಸ್ವಾತಂತ್ರಸಿಗುವ ಮೊದಲು ಹಾಗೂ ನಂತರದ ದಿನಗಳ ಭಾರತೀಯ ಜನರ ಬದುಕನ್ನು ಆಸ್ವಾದಿಸಿದ ಕಲಾವಿದರು ಏಳು ಬೀಳು ಹಾಗೂ ಅಭಿವೃದ್ಧಿಯ ವಿವಿಧ ಹಂತಗಳನ್ನು ಕಂಡವರು. ಈ ಅನುಭವಗಳನ್ನು ತಮ್ಮ ಕಲಾಕೃತಿಗಳ ಮೂಲಕ ಪರಿಚಯಿಸಿದ್ದಾರೆ. ಇಂಥ ವೈವಿಧ್ಯಮಯ ಕಲಾಕೃತಿಗಳನ್ನು ಕುರಿತು ಅಧ್ಯಯನ ಮಾಡುವುದು ಈ ಸಂಶೋಧನೆಯ ಮುಖ್ಯ ಉದ್ದೇಶವಾಗಿದೆ.

ರಾಮಚಂದ್ರನ್‌ರ ಚಿತ್ರಗಳಲ್ಲಿ ವಸ್ತು ಮತ್ತು ವಿಷಯಗಳ ಆಯ್ಕೆ ಬಹುಮುಖ್ಯವಾದುದು. ಇವರು ತಮ್ಮ ಕೃತಿಗಳಲ್ಲಿ ಆಯ್ದುಕೊಂಡ ಪ್ರತಿಮೆಗಳನ್ನು ಹಾಗೂ ಹಿನ್ನೆಲೆಯನ್ನು ಆಯಾ ಸಮಕಾಲಿನ ಕಾಲಘಟ್ಟವನ್ನು ಪರಿಚಯಿಸುತ್ತದೆ. ರಾಮಾಯಣ ಮಹಾಭಾರತದಂತಹ ವಿಷಯಗಳ ಸಂಯೋಜನೆಯಲ್ಲಿ ಇಂಥ ಸಂದರ್ಭವನ್ನು ಕಾಣಬಹುದು. ಇವರು ಹಿಂದಿನ ಆಳರಸರ ರಾಜವೈಭವ ಅವರ ಶೃಂಗಾರ ಬದುಕು, ಯುದ್ಧ ನೀತಿ, ಧರ್ಮ ನೀತಿ ಇತ್ಯಾದಿ ವಿಷಯಗಳನ್ನು ಕಣ್ಣಿಗೆ ಕುಕ್ಕುವಂತೆ ತಮ್ಮ ಕಲಾಕೃತಿಗಳಲ್ಲಿ ಸಂಯೋಜಿಸಿದ್ದಾರೆ. ಇವು ಪ್ರಾಚೀನ ಹಾಗೂ ಸಮಕಾಲೀನ ವಿಚಾರಗಳನ್ನು ಪ್ರತಿನಿಧಿಸುತ್ತವೆ. 'ದೃಶ್ಯಕಲೆಗಳಲ್ಲಿ ರಸಾನುಭವದ ಅಸ್ತಿತ್ವ ಪ್ರದರ್ಶನ ಕಲೆಗಳಂತೆ ಉಂಟಾಗುವುದಿಲ್ಲ. ಇಲ್ಲಿ ಕಲಾನುಭಾವವೆಂದರೆ, ಕಲಾವಿದನ ಕೌಶಲ್ಯ, ಸೌಂದರ್ಯಾನುಭವವೆಂದರೆ ಆ ಕೌಶಲ್ಯದ ಅನುಭೂತಿ.[10] ಇಲ್ಲಿ ಕಲಾನುಭಾವ ಮತ್ತು ಸೌಂದರ್ಯಾನುಭೂತಿಯು ರಾಮಚಂದ್ರನ್‌ರ ಸಂಯೋಜನಾ ಚಿತ್ರಗಳಲ್ಲಿ ಒಡಮೂಡಿವೆ. ಇವರು ನಮ್ಮ ಪೌರಾಣಿಕ ವಿಷಯಗಳ ಚಿತ್ರಗಳನ್ನು ಮಾತ್ರ ರಚಿಸಿಲ್ಲ. ಪ್ರಸ್ತುತ ವಿದ್ಯಮಾನ ಹಾಗೂ

ಜಾನಪದೀಯ ಉತ್ಸವಗಳನ್ನು ಬಿಂಬಿಸುವಂತಹ ಕಲೆಗಳನ್ನು ಸಹ ಚಿತ್ರಿಸಿದ್ದಾರೆ. ಉತ್ತರ ಕರ್ನಾಟಕದ ಡೊಳ್ಳುಕುಣಿತ, ಹಲಗೆ ಮೇಳ, ಶಹನಾಯಿವಾದ, ಕೋಲಾಟ, ಯಕ್ಷಗಾನ ಇತ್ಯಾದಿ ನೃತ್ಯಗಳನ್ನು ಸಹ ತಮ್ಮ ವರ್ಣಗಳಲ್ಲಿ ಸೆರೆಹಿಡಿದಿದ್ದಾರೆ. ಇಂಥ ವಿಶಿಷ್ಟ ಬಗೆಯ ವಿಚಾರಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ. "ಕಲೆಯ ಮೂಲಕ ಆತ್ಮವು ತನ್ನನ್ನು ಪ್ರಕಟಗೊಳಿಸುತ್ತದೆ. ಕಲಾ ಬ್ರಹ್ಮ ಎಲ್ಲೆಲ್ಲಿಯೂ ಆವರಿಸಿಕೊಂಡಿದ್ದಾನೆ ಹಾಗೂ ಪ್ರಕೃತಿಯ ಅಂಗವು ತನ್ನನ್ನು ಅಭಿವ್ಯಕ್ತಗೊಳಿಸಿಕೊಂಡಾಗ ಅದು ಕಲೆ ಎನಿಸಿಕೊಳ್ಳುತ್ತದೆ.[11] ಕಲೆ, ಆತ್ಮ, ಬ್ರಹ್ಮ, ದೇಹ ಮತ್ತು ಮನಸ್ಸು ಇವು ಒಂದನ್ನೊಂದು ಬಿಟ್ಟಿರುವುದಿಲ್ಲ. ಇವೆಲ್ಲವುಗಳ ಸಮೂಹವೇ ಕಲಾಕೃತಿಯ ಸೃಷ್ಟಿ. ರಾಮಚಂದ್ರನ್‌ರು ಬದುಕಿಗಾಗಿ ಪರದಾಡುವ ಜನರ ಕಾರ್ಯ ವೈಖರಿಯನ್ನು ವಿವಿಧ ರೂಪಗಳಲ್ಲಿ ಪ್ರಕಟಪಡಿಸಿದ್ದಾರೆ. ಮಾರಾಟ ಮಾಡುವವರು, ಕುಶಲಕರ್ಮಿಗಳ ಬದುಕಿನ ಚಿತ್ರಗಳನ್ನು ಸಾಕಷ್ಟು ಸಂಖ್ಯೆಗಳಲ್ಲಿ ಚಿತ್ರಿಸಿದ್ದಾರೆ. ದೇವಸ್ಥಾನಗಳ ಮುಂದೆ ಹೂವು ಮಾರುವವರನ್ನು, ಕುಂಕುಮ, ವಿಭೂತಿ, ಅಗರಬತ್ತಿ, ಕರ್ಪೂರ ಇತ್ಯಾದಿ ವಸ್ತುಗಳನ್ನು ಮಾರಾಟ ಮಾಡುವರನ್ನು ಚಿತ್ರಿಸಿದ್ದಾರೆ. ಇವರ ಬದುಕಿನ ವೈವಿಧ್ಯತೆಯನ್ನು ಸಹ ಪರಿಚಯಿಸಿದ್ದಾರೆ. ಈ ಬಗೆಯ ಚಿತ್ರಗಳನ್ನು ಕುರಿತು ಅಧ್ಯಯನ ಮಾಡುವುದು ಅತ್ಯಂತ ಸಂತೋಷವೆನಿಸುತ್ತದೆ.

ಭಾರತ ಬಹು ಸಂಸ್ಕೃತಿಯಿಂದ ಕೂಡಿದ ದೇಶ. ಒಂದೊಂದು ಬಗೆಯ ಜನಾಂಗ, ಒಂದೊಂದು ಬಗೆಯ ಧರ್ಮ ಇಂಥ ಭಿನ್ನತೆ ಇದ್ದರೂ ಸಹ ಭಾರತೀಯತೆಯು ಎಲ್ಲರಲ್ಲೂ ಹಾಸುಕೊಕ್ಕಾಗಿದೆ. ನಮ್ಮಲ್ಲಿ ಕೂಲಿ ಮಾಡುವವರಿಂದ ಹಿಡಿದು ಶ್ರೀಮಂತ ವರ್ಗದವರೆಗೂ ದೇಶದುದಕ್ಕೂ ಸಿಗುತ್ತಾರೆ. ಇಂಥವರನ್ನು ಕಲಾವಿದ ರಾಮಚಂದ್ರನ್‌ರು ತಮ್ಮ ಕುಂಚದಿಂದ ಸೆರೆಹಿಡಿದಿರುವರು. ಸಮುದ್ರ ತೀರದ ದೃಶ್ಯಗಳನ್ನು ಅತ್ಯಂತ ಸುಂದರವಾಗಿ ಚಿತ್ರಿಸಿದ್ದಾರೆ. ಅದರಲ್ಲೂ ಮೀನುಗಾರರ ಸಣ್ಣ ಸಣ್ಣ ಹಡಗುಗಳು, ಸಾಗರದ ದೃಶ್ಯ, ಸಾಗರದ ಅಲೆಗಳು, ಬೋಟುಗಳ ಬಂದರುಗಳು ಇತ್ಯಾದಿ ದೃಶ್ಯಗಳನ್ನು ಚಿತ್ರಿಸಿದ್ದಾರೆ. ಇಂಥ ಚಿತ್ರಗಳನ್ನು ಅಧ್ಯಯನ ಮಾಡಲಾಗಿದೆ. ಎಲ್ಲಕ್ಕಿಂತಲೂ ಇವರು ಕಾಯಿಪಲ್ಲೆ ಮಾರುಕಟ್ಟೆಯ ದೃಶ್ಯಗಳನ್ನು ಅತ್ಯಂತ ಮನೋಹರವಾಗಿ ಚಿತ್ರಿಸಿದ್ದಾರೆ. ತರಕಾರಿ ಮಾರುಕಟ್ಟೆಯ ದೃಶ್ಯ ಮಾರುವವರ ಭಾವಧೃಶ್ಯ ಹಾಗೂ ತರಕಾರಿಗಳ ವೈವಿಧ್ಯಮಯ ನೈಜ ವಿವರಣವನ್ನು ನೋಡಿದರೆ ಸಹೃದಯನು ಭಾವುಕನಾಗುತ್ತಾನೆ. ಅಷ್ಟೊಂದು ತದ್ರೂಪತೆ ಅವರ ಕುಂಚದಲ್ಲಿ ಮೂಡಿವೆ. ಇವುಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.

ಭಾರತದ ಭಾವಚಿತ್ರಕಲಾ ಪರಂಪರೆಗೆ ವಿಶಿಷ್ಟ ಸಂಪ್ರದಾಯವಿದೆ. ಇತಿಹಾಸ ಗುಹಾಚಿತ್ರಗಳಲ್ಲಿ ಮನುಷ್ಯನ ಭಾವಚಿತ್ರಗಳು ಕೌತುಕಮಯ ಪ್ರಾರಂಭವನ್ನು ನಮ್ಮಲ್ಲಿ ಕಂಡಿದ್ದೇವೆ. ಹಾಗೆಯೇ ಪ್ರಾರಂಭದಲ್ಲಿ ಧಾರ್ಮಿಕ, ರಾಜಕೀಯ ನಾಯಕರ ಅಥವಾ ರಾಜಮಹಾರಾಜರುಗಳ ರೂಪಗಳು ಪರಿಪೂರ್ಣ ವಾಸ್ತವತೆಯನ್ನು ಹೊಂದಿವೆ ಎಂದು ಹೇಳಲಾಗದಾದರೂ ಭಾವಚಿತ್ರಗಳಾಗಿವೆ. ಎಂದಂತೂ ಹೇಳಬಹುದು.[12] ಇಂಥ ಪಾರಂಪರಿಕ ಹಿನ್ನೆಲೆಯನ್ನು ಹೊಂದಿರುವ ಭಾವಚಿತ್ರಕಲೆಯು ಕಲಾವಿದನ ಜಿಜ್ಞಾಸೆಯನ್ನು ಮೂಡಿಸುತ್ತದೆ. ಅಂಥ ಜಿಜ್ಞಾಸೆಯಿಂದ ಭಾವಚಿತ್ರರಚನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ರಾಮಚಂದ್ರನ್‌ರು ಸಾಕಷ್ಟು ಭಾವ ಚಿತ್ರಗಳನ್ನು ಸೆರೆಹಿಡಿದಿದ್ದಾರೆ. ಅವರ ವರ್ಣಮಯ ವ್ಯಕ್ತಿತ್ವವನ್ನು ರಮ್ಯ ವರ್ಣಗಳ ಮೂಲಕ ಅಭಿವ್ಯಕ್ತಪಡಿಸಿದ್ದಾರೆ. ಈ ಕುರಿತು ಪ್ರಸ್ತುತ ಅಧ್ಯಯನದಲ್ಲಿ ವಿವೇಚಿಸಲಾಗಿದೆ.

ಬರೀ ತಿಳುವಳಿಕೆಯಿಂದ, ವಿದ್ವತ್‌ನಿಂದ ರಸದ ಆಸ್ವಾದನೆ ಸಾಧ್ಯವಾಗುವುದಿಲ್ಲ. ರಸಗ್ರಹಣದ ಆಸ್ವಾದನೆ ಆಗಬೇಕಾದರೆ ಮನಸ್ಸು ನಿರ್ಮಲವಾಗಬೇಕು. ಪೂರ್ವಾಗ್ರಹಗಳಿರಬಾರದು. ಯಾವ ಪೂರ್ವಾಗ್ರಹಗಳಿದ್ದರೂ ರಸದ ಆಸ್ವಾದನೆ ಆಗುವುದಿಲ್ಲ. ತನ್ಮಯತೆ ಸಾಧ್ಯವಾಗಬೇಕು.[13] ಈ ರಸಪ್ರಜ್ಞೆ ಹಾಗೂ ರಸಸ್ವಾದನೆ ರಾಮಚಂದ್ರನ್‌ರ ದೈವತ್ವದ ಹಾಗೂ ಶೃಂಗಾರ ಚಿತ್ರಗಳಲ್ಲಿ ಕಾಣುತ್ತವೆ. ಇಲ್ಲಿ ಸ್ತ್ರೀ ಪ್ರತಿಮೆಗಳನ್ನು ಶರೀರ ಸೌಷ್ಠವ, ಉಡುಗೆ ತೊಡುಗೆಗಳು ಹಾಗೂ ಆಭರಣಗಳ ವಿನ್ಯಾಸವು ಶೃಂಗಾರಮಯ ಸಂಯೋಜನಾ ಚಿತ್ರಗಳನ್ನು ಕಲಾವಿದ ಕೆ.ಎಸ್. ರಾಮಚಂದ್ರನ್‌ರು ಚಿತ್ರಿಸಿದ್ದಾರೆ. ಆ ಕುರಿತು ಚರ್ಚಿಸಲಾಗಿದೆ. ಸಂಯೋಜನೆಯಲ್ಲಿ ಮನೋವೈಜ್ಞಾನಿಕ ಅಂಶಗಳು ಮಹತ್ತರ ಪರಿಣಾಮ ಬೀರುತ್ತವೆ. ಮಾನಸಿಕವಾದ ಭಾವನೆ ಭ್ರಮೆಗೆ ಕಾರಣವಾಗುತ್ತವೆ.[14] ಬಹುಷ್ಯ ಲೋಕಾನುಭವದಿಂದ ಕಲಾವಿದನಿಗೆ ಇಂಥ ಸಂವೇದನೆಗಳು ಆಳವಾಗಿ ಮನದಲ್ಲಿ ಉದ್ಭವಗೊಂಡು ಹೊರಹಾಕಲು ತವಕಿಸುತ್ತವೆ. ಆ ತವಕ ಎಷ್ಟೊಂದು ತೀವ್ರಗತಿಯಲ್ಲಿರುತ್ತವೆ ಎಂಬುದು ಆಯಾ ಕಲಾವಿದರ ವಿವೇಚನೆ ಮೇಲೆ ಅವಲಂಬಿತವಿರುತ್ತದೆ. ರಾಮಚಂದ್ರನ್‌ರು ಸಹ ಇಂಥ ಸಂವೇದನ ಶೀಲತೆಯಿಂದ ವೈವಿಧ್ಯಮಯ ಕೃತಿಗಳನ್ನು ರಚನೆ ಮಾಡಿದ್ದಾರೆ. ಆ ಕುರಿತು ಅಧ್ಯಯನ ಮಾಡಲಾಗಿದೆ.

ಕಲಾವಿದ ರಾಮಚಂದ್ರನ್‌ರು ಕೇವಲ ಮೂರ್ತರೂಪದ ಚಿತ್ರಗಳನ್ನು ರಚಿಸಿಲ್ಲ. ಅಮೂರ್ತರೂಪದಲ್ಲಿ ಅನೇಕ ಪ್ರಯೋಗಗಳನ್ನು ಮಾಡಿದ್ದಾರೆ. ಮನಸ್ಸಿನಲ್ಲಿ ಏನೋ ಒಂದು ಅನುಭವವಾಗುತ್ತದೆ. ಅದನ್ನು ಶಬ್ದಗಳ ವಿನ್ಯಾಸಗಳಲ್ಲಿ ಬಾಯಿಂದ ಹೇಳಲು ಸಾಧ್ಯವಾಗುವುದಿಲ್ಲ. ಇದೊಂದು ತರಹದ ಅಪ್ರಜ್ಞಾಪೂರಕವಾದ ಮನಸ್ಸಿನ ತುಡಿತ. ಇದನ್ನು Abstract Images ಎಂದು ಕರೆಯುತ್ತಾರೆ. ಇದು ಅಸ್ಪಷ್ಟವಾಗಿರುತ್ತದೆ. ಆದರೆ ಅಸ್ಪಷ್ಟತೆಯಲ್ಲಿ ಅನುಭವದ ತುಡಿತವಿರುತ್ತದೆ.[15] ಈ ಅಸ್ಪಷ್ಟ ತುಡಿದ ಅನುಭವವನ್ನು ಅನೇಕ ವಿಚಾರಗಳ ಮೂಲಕ ರಾಮಚಂದ್ರನ್‌ರು ದೃಶ್ಯೀಕರಿಸಿದ್ದಾರೆ. ಇವು ಎಲ್ಲಾ ವರ್ಗದವರನ್ನು ಹಾಗೂ ಎಲ್ಲಾ ವಿಷಯಗಳನ್ನು ಪ್ರತಿನಿಧಿಸುತ್ತವೆ. ಇಂಥ ವೈವಿಧ್ಯಮಯ ದೃಶ್ಯಗಳನ್ನು ಹಾಗೂ ವೈಚಾರಿಕ ಚಿಂತನೆಗಳನ್ನು ಕುರಿತು ವಿವೇಚಿಸಲಾಗಿದೆ.

ಕಲಾವಿದರಿಗೆ ಶೈಕ್ಷಣಿಕ ಅರ್ಹತೆ ಬೇಕಾ, ಅಥವಾ ಬೇಡವಾ ಎಂಬುದು ಕುತೂಹಲದ ವಿಷಯ. ರವಿವರ್ಮ, ಮೈಸೂರು ಸಂಸ್ಥಾನದಲ್ಲಿನ ಕೇಲವು ಪ್ರಸಿದ್ಧ ಚಿತ್ರಕಾರರ ಶೈಕ್ಷಣಿಕ ಅರ್ಹತೆಯನ್ನು ಗಮನಿಸಿದರೆ ಬಹಳ ಕಡಿಮೆ ಅನಿಸುತ್ತದೆ. ಎಷ್ಟೋ ಕಲಾವಿದರು 'ಇಂಟರ್ ಮಿಡಿಯಟ್' (ಇಗೀನ ಹತ್ತನೆಯ ತರಗತಿ) ಪರೀಕ್ಷೆಯನ್ನು ಬರೆದಿಲ್ಲ. ಅಷ್ಟೇ ಅಲ್ಲ ರಂಗ ಪರದೆಯ ಕಲಾವಿದರು ಶಾಲೆಯ ಕಟ್ಟೆಯನ್ನೇ ಹತ್ತಿರಲಿಲ್ಲ. ಅದರಲ್ಲಿ ವೃತ್ತಿನಿರತ ಕಲಾವಿದರು ಚಿತ್ರಕಲೆಯ ಶಿಕ್ಷಣವನ್ನೇ ಪಡೆದಿಲ್ಲ. ಆದರೂ ಅವರು ಸುಪ್ರಸಿದ್ಧ ಕಲಾಕೃತಿಗಳನ್ನು ನಿರ್ಮಿಸಿದ್ದಾರೆ. ಉತ್ತರ ಕರ್ನಾಟಕದಲ್ಲಿ ಇಂಥ ಕಲಾವಿದರ ಸಂಖ್ಯೆ ಲೆಕ್ಕವಿಲ್ಲದಷ್ಟು ಇದ್ದಾರೆ. ಇವರು ನಾಟಕ ಪರದೆಗಳನ್ನು ರಚಿಸುವುದು ಮತ್ತು ಜನ ಬೇಡಿಕೆಗೆ ತಕ್ಕಂತೆ ದೊಡ್ಡ ದೊಡ್ಡ ಕಟ್‌ಔಟ್ ರಚಿಸುವುದು ಮುಖ್ಯ ಕೆಲಸ. ಸಧ್ಯ ಇವರ ಸಂಖ್ಯೆ ಇಲ್ಲವೆಂದೇ ಹೇಳಬಹುದು. ಇದಕ್ಕೆ ಕಾರಣ ಇಂದಿನ ಕಂಪ್ಯೂಟರ್ ತಂತ್ರಜ್ಞಾನದ ಬಳಕೆ. ಇದರಿಂದ ಈ ಕಲಾವಿದರ ಸಂಖ್ಯೆ ಕ್ಷೀಣಿಸಿತು. ಕೆಲವೊಬ್ಬರು ಈ ವೃತ್ತಿಯನ್ನೇ ಬಿಟ್ಟರು. ಕೇಲವೊಬ್ಬರು ತಂತ್ರಜ್ಞಾನಕ್ಕೆ ಹೊಂದಿಕೊಂಡು ಚಿತ್ರ ಬದುಕಿನಲ್ಲಿ ಕೆಲಸ ಮಾಡುತ್ತಿದ್ದಾರೆ. ಅಂಥ ಕಲಾವಿದರಲ್ಲಿ ಕೆ.ಎಸ್. ರಾಮಚಂದ್ರನ್‌ರು ಒಬ್ಬರು ಎಂದರೆ ತಪ್ಪಾಗಲಾರದು.

ಬಾಗಲಕೋಟ ಜಿಲ್ಲೆಯ ಇಳಕಲ್ ನಗರದಲ್ಲಿ ಸುಮಾರು ಜನ ರಂಗ ಪರದೆಯ ಚಿತ್ರಕಾರರಿದ್ದರು ಇಲ್ಲಿ ರಾಜ್ಯ ಹಾಗೂ ಅಂತರಾಜ್ಯದ ನಾಟಕ ಕಂಪನಿಗಳಿಗೆ ಪರದೆಗಳನ್ನು ಬರೆಯಲಾಗುತ್ತಿತ್ತು. ಸನ್ನೂರ್ ಪೆಂಟರ್, ಕೆ. ಸಿದ್ದರಾಮ ಪೆಂಟರ್, ಬಿ. ತುಕಾರಾಂ ಪೆಂಟರ್, ಧೋತ್ರ ಪೆಂಟರ್, ಕೆ. ಕಾಶೀಮ್ ಇನ್ನೂ ಸುಮಾರು ಕಲಾವಿದರನ್ನು ಹೆಸರಿಸಬಹುದು. ಹುಬ್ಬಳ್ಳಿಯ ಕೆಂಧೂಳಿ ಪೆಂಟರ್, ಹುಮನಾಬಾದ ಪೆಂಟರ್, ನಾಟಕ ಪರದೆ ಹಾಗೂ ವ್ಯಕ್ತಿ ಚಿತ್ರಗಳನ್ನು ಬರೆದು ವಿಖ್ಯಾತರಾಗಿದ್ದಾರೆ. ಇಂಥ ಕಲಾವಿದರೂ ರಾಜ್ಯದುದ್ದಕ್ಕೂ ಸಿಗುತ್ತಾರೆ. ಈ ಪರಂಪರೆಯ ಹಿನ್ನೆಲೆಯನ್ನು ಹೊಂದಿರುವವರು ರಾಮಚಂದ್ರನ್‌ರು.

ಬೆಂಗಳೂರಿನ ಗಂಗಾಧರ, ಮುರಗನ್ ಆರ್ಟ, ಎಸ್. ಪ್ರಹ್ಲಾದ್, ಎಂ.ಬಿ. ಪಾಟೀಲ ಸಾಕಷ್ಟು ಸಂಖ್ಯೆಯಲ್ಲಿ ಪ್ರಚಾರ ಕಲಾವಿದರು ಈ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಇಂಥ ಸಾಲಿಗೆ ರಾಮಚಂದ್ರನ್‌ರು ಸೇರುತ್ತಾರೆ. ಆ ಬಗೆಯ ವಿಚಾರಗಳನ್ನು ಕುರಿತು ಅಧ್ಯಯನ ಮಾಡುವುದು ಅಧ್ಯಯನದ ಉದ್ದೇಶವಾಗಿದೆ. ರಾಮಚಂದ್ರನ್‌ರು ಬೆಂಗಳೂರು ಮತ್ತು ಮುಂಬೈಯಲ್ಲಿ ಸ್ವಂತ ಸ್ಟೂಡಿಯೊ ಒಂದನ್ನು ತೆರೆದು ಆ ಮೂಲಕ ಸಾಕಷ್ಟು ಕಲಾ ಚಟುವಟಿಕೆಗಳನ್ನು ಮಾಡಿದ್ದಾರೆ. ಅಲ್ಲದೆ ಮದ್ರಾಸನಲ್ಲೂ ಸಹ ತಮ್ಮ ಕಲಾ ಕಾರ್ಯವನ್ನು ಕಂಡುಕೊಂಡಿದ್ದಾರೆ. ಯಾವುದೇ ಕಲಾವಿದನಿಗೆ ಸ್ವತಂತ್ರವಾಗಿ ಬೇಳೆಯಲು ಸಾಧ್ಯವಾಗುವುದಿಲ್ಲ. ಸ್ನೇಹಿತರ ಸಹಕಾರ, ಸಮಾಜದ ಪ್ರೇರಕ ಸಂಪರ್ಕ, ಹಿರಿಯ ಕಲಾವಿದರ ಮಾರ್ಗದರ್ಶನ ಹಾಗೂ ಅವರ ಪ್ರಭಾವ, ಪ್ರೇರಣೆ ಇತ್ಯಾದಿ ವಿಷಯಗಳು ಬೇಕಾಗುತ್ತದೆ. ರಾಮಚಂದ್ರನ್‌ರ ಕಲಾ ಬದುಕಿನಲ್ಲಿಯೂ ಸಹ ಸ್ನೇಹಿತರು, ಹೀರಿಯ ಕಲಾವಿದರೂ, ಸಮಾಜದ ಸಹಕಾರ, ಪ್ರಭಾವ ಪ್ರೇರಣೆ ಕಂಡುಬರುತ್ತದೆ. ಆ ಕುರಿತು ಅಧ್ಯಯನ ಮಾಡುವ ಉದ್ದೇಶ ಹೊಂದಿದೆ.

ರಾಮಚಂದ್ರನ್‌ರು ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಕಲಾ ಪ್ರದರ್ಶನಗಳು ಮಾಡಿದ್ದಾರೆ, ಕಲಾ ಶಿಬಿರಗಳಲ್ಲಿ ಪಾಲ್ಗೊಂಡಿದ್ದಾರೆ, ಕಲಾಪ್ರಾತ್ಯಕ್ಷತೆ ನೀಡಿದ್ದಾರೆ. ಅವರ ಕಲಾಕೃತಿಗಳ ರಚನಾ ಶೈಲಿ, ತೈಲ ಹಾಗೂ ಜಲವರ್ಣ (ಪೋಸ್ಟರ್ ಮೇಥೆಡ್)ಗಳಲ್ಲಿನ ಪ್ರಯೋಗಶೀಲತೆ, ವರ್ಣಗಳ ಸಂಯೋಜನೆ ತ್ರಿಮಾನ ವರ್ಣ ಕಲ್ಪನೆ, ಯಥಾ ದರ್ಶನ ಪರಿಕಲ್ಪನೆ, ನೈಜ ಹಾಗೂ ಸಮಕಾಲಿನ ತಂತ್ರಗಾರಿಕೆ ಬಹು ವಿಶಿಷ್ಟವಾದುದು. ಇವರು ಹೆಚ್ಚು ತೈಲ ವರ್ಣ ಮಾಧ್ಯವನ್ನೇ ಕಲಾಕೃತಿ ರಚೆನೆಗೆ ಬಳಸುತ್ತಿದ್ದಾರೆ. ಇವರು ವರ್ಣ ಸಂಯೋಜನೆ ಮಾಡುವುದೇ ನೋಡುಗನ ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತದೆ. ರಾಮಚಂದ್ರನ್‌ರಿಗೆ ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಅನೇಕ ಪ್ರಶಸ್ತಿ ಪುರಸ್ಕಾರಗಳು ಸಂದಿವೆ. ಇಂತಹ ವೈಶಿಷ್ಟ್ಯಪೂರ್ಣ ವ್ಯಕ್ತಿತ್ವ ಹೊಂದಿದ ಹಾಗೂ ವರ್ಣ ರಂಜಿತ ಕಲಾ ಬದುಕನ್ನು ಸವಿದು ಮೇರು ಚಿತ್ರಕಲಾವಿದನ ಕಲೆ ಮತ್ತು ಕಲಾ ಬರಹವನ್ನು ಕುರಿತು ಅಧ್ಯಯನ ಮಾಡುವುದು ಈ ಅಧ್ಯಯನದ ಮುಖ್ಯ ಉದ್ದೇಶ.

ಅಧ್ಯಯನ ಸ್ವರೂಪ :

ಪ್ರಸ್ತುತ ಅಧ್ಯಯನ ಸ್ವರೂಪವು ಆರು ಅಧ್ಯಾಯಗಳಲ್ಲಿ ಹರಡಿಕೊಂಡಿವೆ ಈ ಆರು ಅಧ್ಯಾಯಗಳಲ್ಲಿ ಕಲಾವಿದ ಕೆ.ಎಸ್ ರಾಮಚಂದ್ರನ್‌ರ ಕಲೆ ಮತ್ತು ಬದುಕನ್ನು ಅವರು ರಚಿಸಿದ ಕಲಾಕೃತಿಗಳನ್ನು ಸಂಕ್ಷಿಪ್ತ ಸ್ವರೂಪದ ವಿಚಾರವನ್ನು ಕೊಡಲಾಗಿದೆ.

ಅಧ್ಯಾಯ - ಒಂದು ಇಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವಿಧಾನಗಳನ್ನು ಕುರಿತು ಚರ್ಚಿಸಲಾಗಿದೆ.

ಅಧ್ಯಾಯ – ಎರಡರಲ್ಲಿ ಕಲಾವಿದ ರಾಮಚಂದ್ರನ್‌ರ ಸಾಂಸ್ಕೃತಿಕ ಪರಿಸರ, ಕೌಟುಂಬಿಕ ಹಿನ್ನೆಲೆ, ಬಾಲ್ಯ ಜೀವನ, ಶಿಕ್ಷಣ, ವೃತ್ತಿ ಬದುಕು, ಮಿತ್ರಬಳಗ, ವೈವಾಹಿಕ ಬದುಕು ಮತ್ತು ಪ್ರಸ್ತುತ ಸಂದರ್ಭದ ಚಿತ್ರಣವನ್ನು ಕುರಿತು ವಿವೇಚಿಸಲಾಗಿದೆ.

ಅಧ್ಯಾಯ – ಮೂರಲ್ಲಿ ಕಲಾವಿದ ರಾಮಚಂದ್ರನ್‌ರು ರಚಿಸಿದ ರೇಖಾಚಿತ್ರಗಳನ್ನು, ಭಾವಚಿತ್ರಗಳನ್ನು ಸಂಯೋಜನಾ ಹಾಗೂ ಅಮೂರ್ತ ಚಿತ್ರಗಳನ್ನು ಕುರಿತು ಚರ್ಚಿಸಲಾಗಿದೆ. ಇವರು ಈ ನಾಲ್ಕು ರೀತಿಯ ವರ್ಣ ಚಿತ್ರಗಳಲ್ಲಿ ಸಾಕಷ್ಟು ವೈವಿಧ್ಯಮಯ ವಿಚಾರಗಳನ್ನು ಚಿಂತನ ಮಂಥನವನ್ನು ಮಾಡಿದ್ದಾರೆ. ಆ ಕುರಿತು ಇಲ್ಲಿ ಅಧ್ಯಯನ ಮಾಡಲಾಗಿದೆ.

ಅಧ್ಯಾಯ – ನಾಲ್ಕರಲ್ಲಿ ರಾಮಚಂದ್ರನ್‌ರ ಕಲಾಕೃತಿಗಳಲ್ಲಿ ಕಂಡುಬರುವ ಹಿರಿಯ ಕಲಾವಿದರ ಕಲಾಕೃತಿಗಳ ಪ್ರಭಾವ, ಭಾರತೀಯ ಹಾಗೂ ಪಾಶ್ಚಾತ್ಯ ಸಂಸ್ಕೃತಿಯನ್ನು ಬಿಂಬಿಸುವ ವಿಚಾರಗಳನ್ನು ಮತ್ತು ಇದರಿಂದಾದ ಪ್ರೇರಣೆ, ತಂತ್ರಗಾರಿಕೆ ಮುಂತಾದ ವಿಚಾರಗಳನ್ನು ಕುರಿತು ವಿವೇಚಿಸಿದೆ.

ಅಧ್ಯಾಯ – ಐದರಲ್ಲಿ ಕಲಾವಿದ ರಾಮಚಂದ್ರನ್‌ರಿಗೆ ಸುಮಾರು ಪ್ರಶಸ್ತಿಗಳು, ಪುರಸ್ಕಾರಗಳು ಲಭಿಸಿವೆ. ಇವರು ತಮ್ಮ ಜೀವನದೂದ್ದಕ್ಕೂ ಈ ಕಲಾ ಕ್ಷೇತ್ರದಲ್ಲಿ ಕೇಲಸ ಮಾಡಿದ್ದಾರೆ. ಇದಕ್ಕಾಗಿ ಮಾನ್ಯರಿಗೆ ಸಂದ ಗೌರವವನ್ನು ಕುರಿತು ವಿವರಿಸಲಾಗಿದೆ.

ಅಧ್ಯಾಯ – ಆರು ಸಮಾರೋಪವಾಗಿದ್ದು ಪ್ರಸ್ತುತ ಅಧ್ಯಯನ ಫಲಿತಗಳನ್ನು ಕಂಡುಕೊಳ್ಳಲಾಗಿದೆ.

ಅಧ್ಯಯನದ ವೈಧಾನಿಕತೆ :

ಪ್ರಸ್ತತ ಮಹಾಪ್ರಬಂಧದ ರಚನೆಗೆ ಮುಖ್ಯವಾಗಿ ಎರಡು ರೀತಿಯ ಆಕರಗಳನ್ನು ಬಳಸಿಕೊಳ್ಳಲಾಗಿದೆ. ಅವುಗಳನ್ನು ಈ ಕೇಳಗಿನಂತೆ ಹೆಸರಿಸಿ ವಿವರಿಸಲಾಗಿದೆ.

1. **ಮೂಲ ಆಕರ ಸಾಮಗ್ರಿ** (primery sources)
2. **ಆನುಷಂಗಿಕ ಆಕರ ಸಾಮಾಗ್ರಿ** (secondary sources)

ಈ ಎರಡು ಮೂಲಗಳಿಂದ ವಿಷಯ ಸಂಗ್ರಹ ಮಾಡಲಾಗಿದೆ.

1) **ಮೂಲ ಆಕರ ಸಾಮಗ್ರಿ** (primery sources)

ಪ್ರಸ್ತುತ ಪ್ರಬಂಧ ರಚನೆಗೆ ಮೂಲ ಆಕರ ಸಾಮಗ್ರಿಯಿಂದ ವಿಷಯ ಸಂಗ್ರಹ ಮಾಡುವುದು, ಅತೀ ಮುಖ್ಯವಾದುದು. ಇಲ್ಲಿ ಮೂಲ ಆಕರ ಸಾಮಗ್ರಿಗಳು ಕಲಾವಿದ ಕೆ.ಎನ್ ರಾಮಚಂದ್ರನ್‌ರ ಕಲೆಯ ಜೀವಮಾನ ಸಾಧನೆಯ ವೈವಿಧ್ಯಮಯ ಹಂತಗಳನ್ನು ಪ್ರತ್ಯೇಕವಾಗಿ ಅವರನ್ನು ಕಂಡು ಸಂದರ್ಶನ ಮೂಲಕ, ಚರ್ಚೆಯ ಮೂಲಕ ಅವರು ರಚಿಸಿದ ಕಲಾಕೃತಿಗಳನ್ನು ಸ್ವತಃ ವಿಕ್ಷಿಸಿ ವಿಷಯ ಸಂಗ್ರಹ ಮಾಡಿಕೊಳ್ಳಲಾಯಿತು. ಆ ಮೂಲಕ ಕಲಾವಿದರು ತಮ್ಮ ಕಲಾಕೃತಿಗಳ ರಚನಾ ವಿಧಾನ ಕಲಾಕೃತಿ ರಚನೆಗೆ ಪ್ರೇರಣೆ, ಚಿತ್ರ ರಚನೆಯ ತಂತ್ರಗಾರಿಕೆ ಚಿತ್ರರಚನೆಯ ವೈಯಕ್ತಿಕ ಶೈಲಿ ಹಾಗೂ ಅವರಿಗೆ ಇಷ್ಟವಾದ ಕಲಾ ಮಾಧ್ಯಮ ಇತ್ಯಾದಿ ವಿಷಯಗಳನ್ನು ಅವರಿಂದ ಚರ್ಚಿಸಿ ಪಟ್ಟಿಕೆಗಳನ್ನು ಸಿದ್ಧಪಡಿಸಿ ಪ್ರಸ್ತುತ ಪ್ರಬಂಧವನ್ನು ರಚನೆಮಾಡಲಾಯಿತು.

ಕೇಲವು ಸಂದರ್ಭದಲ್ಲಿ ಕ್ಷೇತ್ರಕಾರ್ಯ ಮಾಡಿ ಇವರ ಕಲಾಕೃತಿಗಳ ಮಾಹಿತಿಯನ್ನು ಸಂಗ್ರಹಿಸಲಾಯಿತು. ಮುಖ್ಯವಾಗಿ ಅ) ಸಂದರ್ಶನ, ಬ) ಛಾಯಾಚಿತ್ರಣ, ಕ) ಸಂಗ್ರಹಿತ ವಿಷಯಗಳ ಪಟ್ಟಿಕೆಗಳನ್ನು ಸಿದ್ಧಪಡಿಸುವುಕೆಯಿಂದ ಮಾಹಿತಿಯನ್ನು ಸಂಗ್ರಹಿಸುವುದು.

ಅ) ಸಂದರ್ಶನ

ಪ್ರಬಂಧ ರಚನೆಗೆ 'ಸಂದರ್ಶನ' ಅತ್ಯಂತ ಪ್ರಮುಖವಾದುದು ಇಲ್ಲಿ 80 ರ ವಯೋವೃದ್ಧರಾದ ಕೆ.ಎನ್. ರಾಮಚಂದ್ರನ್‌ರನ್ನು ಸ್ವತಃ ಕಂಡು ಅವರ ಬಾಲ್ಯ, ಕುಟುಂಬ, ಪರಿಸರ, ಶಿಕ್ಷಣ, ವೈವಾಹಿಕ ಬದುಕು, ವೃತ್ತಿ ಬದುಕು, ಕಲಾಕೃತಿಗಳ ರಚನೆ, ತಂತ್ರಗಾರಿಗೆ, ಪ್ರಭಾವ ಇತ್ಯಾದಿ ವಿಷಯಗಳಗಳನ್ನು ಅಧ್ಯಯನಕ್ಕೆ ಅನುಗುಣವಾಗಿ ಚರ್ಚಿಸಿ, ಚರ್ಚಿತ ವಿಷಯಗಳನ್ನು ಬಳಸಿಕೊಂಡು ವ್ಯವಸ್ಥಿತವಾಗಿ ಪ್ರಬಂಧ ರಚನೆ ಮಾಡಲಾಯಿತು. ಸಂದರ್ಶನ ಎನ್ನುವುದು ಅತ್ಯಂತ ಅಗತ್ಯವಾದುದು ಹಾಗಾಗಿ ಈ ಪ್ರಬಂಧ ಕಟ್ಟುವಲ್ಲಿ ಸಂದರ್ಶನ ಅತ್ಯಂತ ಪ್ರಯೋಜನಕಾರಿಯಾಗಿ ತೋರಿದೆ.

ಬ) ಛಾಯಾಚಿತ್ರಣ

ಅಧ್ಯಯನಕ್ಕೆ 'ಛಾಯಾಚಿತ್ರ'ಣ ಮಾಡುವುದು ಅತ್ಯವಶ್ಯಕ. ಕೇವಲ ಸಂದರ್ಶನ, ಚರ್ಚೆ ಇತ್ಯಾದಿಗಳಿಂದ ವಿಷಯ ಸಂಗ್ರಹಣೆಗೆ ಅತ್ಯಂತ ಪೂರಕವಾದುದು ಛಾಯಾಚಿತ್ರಣ. ಇಲ್ಲಿ ಕೆ.ಎನ್. ರಾಮಚಂದ್ರನ್‌ರ ಕಲೆ ಮತ್ತು ಬದುಕಿಗೆ ಸಂಬಂಧಿಸಿದ ವೈವಿಧ್ಯಮಯ ವಿಷಯಗಳನ್ನು ಛಾಯಾಚಿತ್ರಣ ಮಾಡಿ ಅವಶ್ಯಕ ಛಾಯಾಚಿತ್ರಗಳನ್ನು ಸೆರೆ ಹಿಡಿದು ಮಾಹಿತಿಯನ್ನು ಸಂಗ್ರಹಿಸಲಾಯಿತು. ಇದು ನನ್ನ ಅಧ್ಯಯನಕ್ಕೆ ಬಹಳ ಸಹಕಾರಿಯಾಯಿತು. ಛಾಯಾಚಿತ್ರಗಳಿಂದ ಇನ್ನಷ್ಟು ಗುರುತರ ಅಧ್ಯಯನ ಮಾಡಲು ಉಪಕಾರವಾಯಿತು. ಒಟ್ಟಾರೆ ವಿಷಯ ಸಂಗ್ರಹಣಕ್ಕೆ ಛಾಯಾಚಿತ್ರಗಳು ಮಹತ್ವ ಪೂರಕವಾಗಿವೆ.

ಕ) ಕ್ಷೇತ್ರ ಕಾರ್ಯ ಅನುಭವವೇದ್ಯ, ಚಿತ್ರವೇದ್ಯ ವಿವರಗಳನ್ನು ಅಭ್ಯಾಸಕ್ಕೆ ಟಿಪ್ಪಣಿ ಮಾಡಿಕೊಂಡು ಪ್ರಬಂಧಕ್ಕೆ ಅವಶ್ಯಕವಾದ ವಿಷಯಗಳನ್ನು ಸಂಗ್ರಹಿಸಿಕೊಂಡು ಅಧ್ಯಯನ ಮಾಡಲಾಗಿದೆ.

2) **ಆನುಷಂಗಿಕ ಆಕರ ಸಾಮಗ್ರಿ** (secondary sources)

ಪ್ರಸ್ತುತ ಪ್ರಬಂಧವನ್ನು ರಚನೆ ಮಾಡಲು ಆನುಷಂಗಿಕ ರೂಪದಲ್ಲಿ ವಿಶ್ವಕೋಶಗಳು, ಗ್ಯಾಜೆಟಿಯರ್‌ಗಳು, ಪೌರಾಣೀಕ ಗ್ರಂಥಗಳು, ಪ್ರಕಟಿತ ಹಾಗೂ ಅಪ್ರಕಟಿತ ಸಂಶೋಧನಾ ಪ್ರಬಂಧಗಳು, ಸಂಪಾದನಾ ಗ್ರಂಥಗಳು, ನಿಯತಾ ಕಾಲಿಕೆಗಳು, ವೃತ್ತಿ ಪತ್ರಿಕೆಗಳು, ದೃಶ್ಯಮಾಧ್ಯಮಗಳು, ಅಂತರಜಾಲದ ಬಳಕೆ, ದೃಶ್ಯಕಲೆಗೆ ಸಂಬಂಧಿಸಿದ ಪ್ರಕಟಿತ ಹಾಗೂ ಅಪ್ರಕಟಿತ ಯೋಜನಾ ವರದಿಗಳನ್ನು ಪರಮಾರ್ಶಿಸಿ ಅಧ್ಯಯನಕ್ಕೆ ಸಂಬಂಧಿಸಿದ ವಿಷಯಗಳ ಪಟ್ಟಿಕೆಗಳು ಪ್ರಬಂಧ ರಚನೆಗೆ ಅತ್ಯಂತ ಸಹಕಾರಿಯಾಯಿತು.

ಕಲಾವಿದ ರಾಮಚಂದ್ರನ್‌ರ ಕುರಿತು ಕನ್ನಡ, ತಮಿಳು, ಹಿಂದಿ ಹಾಗೂ ಇಂಗ್ಲೀಷ್ ಪತ್ರಿಕೆಗಳಲ್ಲಿ ಇವರ ಕಲೆ ಮತ್ತು ಬದುಕಿನ ವಿವರಣೆಗಳು ಪ್ರಕಟಗೊಂಡಿವೆ. ಇವುಗಳನ್ನು ಪ್ರಸ್ತುತ ಪ್ರಬಂಧ ರಚನೆಗೆ ಬಳಸಿಕೊಳ್ಳಲಾಗಿದೆ.

ಅಧ್ಯಾಯ ಒಂದರ ಕೊನೆ ಟಿಪ್ಪಣಿಗಳು

1) ಡಾ. ಕಾಶೀನಾಥ ಅಬಂಲಗೆ; ಸೌಂದರ್ಯ ಶಾಸ್ತ್ರ; 2008, ಪುಟ–22
2) ಡಾ. ಕಾಶೀನಾಥ ಅಬಂಲಗೆ; ಸೌಂದರ್ಯ ಶಾಸ್ತ್ರ; 2008, ಪುಟ–18, 19
3) ಡಾ. ಕಾಶೀನಾಥ ಅಬಂಲಗೆ; ಸೌಂದರ್ಯ ಶಾಸ್ತ್ರ; 2008, ಪುಟ–07, 08.
4) ಡಾ. ಕಾಶೀನಾಥ ಅಬಂಲಗೆ; ಸೌಂದರ್ಯ ಶಾಸ್ತ್ರ; 2008, ಪುಟ–08.
5) ಡಾ. ಕಾಶೀನಾಥ ಅಬಂಲಗೆ; ಸೌಂದರ್ಯ ಶಾಸ್ತ್ರ; 2008, ಪುಟ –298
6) ಡಾ. ಕಾಶೀನಾಥ ಅಬಂಲಗೆ; ಸೌಂದರ್ಯ ಶಾಸ್ತ್ರ; 2008, ಪುಟ –299
7) ಡಾ. ಡಿ.ಎ. ಉಪಾಧ್ಯ; ಪಾಶ್ಚಾತ್ಯ ದೃಶ್ಯಕಲೆಗಳು; 2011, ಪುಟ–297
8) ಡಾ. ಡಿ.ಎ. ಉಪಾಧ್ಯ; ಪಾಶ್ಚಾತ್ಯ ದೃಶ್ಯಕಲೆಗಳು; 2011, ಪುಟ –298
9) ಡಾ. ಡಿ.ಎ. ಉಪಾಧ್ಯ; ಪಾಶ್ಚಾತ್ಯ ದೃಶ್ಯಕಲೆಗಳು; 2011, ಪುಟ–196
10) ಡಾ. ಡಿ.ಎ. ಉಪಾಧ್ಯ; ಪಾಶ್ಚಾತ್ಯ ದೃಶ್ಯಕಲೆಗಳು; 2011, ಪುಟ–300
11) ಡಾ. ಕಾಶೀನಾಥ ಅಬಂಲಗೆ; ಸೌಂದರ್ಯ ಶಾಸ್ತ್ರ; 2008, ಪುಟ–296
12) ಕೆ.ವಿ. ಸುಬ್ರಹ್ಮಣ್ಯ; ಮುಖಗಳೊಂದಿಗೆ ಮುಖಾಮುಖಿ; 2004, ಪುಟ–37, 38
13) ಪ್ರೊ. ಎಂ.ಎಚ್. ಕೃಷ್ಣಯ್ಯ (ಸಂ); ಕಲೆ ಮತ್ತು ರಸ ಸ್ವಾದನೆ; 2008, ಪುಟ–11
14) ಪ್ರೊ. ಎಂ.ಎಚ್. ಕೃಷ್ಣಯ್ಯ (ಸಂ); ಕಲೆ ಮತ್ತು ರಸ ಸ್ವಾದನೆ; 2008, ಪುಟ–91
15) ಡಾ. ಡಿ.ಎ. ಉಪಾಧ್ಯ; ಪಾಶ್ಚಾತ್ಯ ದೃಶ್ಯಕಲೆಗಳು; 2011, ಪುಟ–192

ಅಧ್ಯಾಯ – 2

ಜೀವನ ಮತ್ತು ಸಾಂಸ್ಕೃತಿಕ ಪರಿಸರ

ಅ. ಕೌಟುಂಬಿಕ ಹಿನ್ನೆಲೆ

ಬ. ಬಾಲ್ಯ ಜಿವನ

ಕ. ಶಿಕ್ಷಣ

ಡ. ವೃತ್ತಿ ಬದುಕು

ಪ. ಮಿತ್ರ ಬಳಗ

ಅಧ್ಯಾಯ–2

ಕೆ.ಎನ್. ರಾಮಚಂದ್ರನ್ ಅವರ ಜೀವನ ಮತ್ತು ಸಾಂಸ್ಕೃತಿಕ ಪರಿಸರ :

ಕೆ. ಎನ್. ರಾಮಚಂದ್ರನ್‌ರವರು ಮೂಲತಃ ತಮಿಳುನಾಡಿನಿಂದ ಬಂದವರು. ಯಾವುದೇ ಒಬ್ಬ ವ್ಯಕ್ತಿ ಸಮಾಜದಲ್ಲಿ ಪ್ರತಿಭಾವಂತನಾಗಲು ಅವನು ಬೆಳೆದು ಬಂದ ಪರಿಸರ ಸಂಸ್ಕೃತಿ ಕಾರಣವಾಗಿರುತ್ತದೆ. ಭಾಷೆ ಸಂಸ್ಕೃತಿಯ ವೈವಿಧ್ಯತೆಯಿಂದ ಕೂಡಿದ ಈ ಭಾರತ ದೇಶವು ಬಹು ವಿಶೇಷತೆಯನ್ನು ಒಳಗೊಂಡಿದೆ. ಅದರಲ್ಲಿ ತಮಿಳುನಾಡು ಪ್ರದೇಶವು ಚಾರಿತ್ರಿಕ, ಸಾಂಸ್ಕೃತಿಕವಾಗಿ ಸಂಪತ್ಭರಿತ ನಾಡಾಗಿದೆ. ತಮಿಳುನಾಡು ರಾಜ್ಯವು ದೇವಾಲಯಗಳಿಗೆ ಪ್ರಸಿದ್ಧಿ ಪಡೆದಿದೆ. 'ದೇವಾಲಯಗಳ ತೊಟ್ಟಿಲು' ಎಂದು ಕರೆಯಬಹುದು.

ತಮಿಳುನಾಡು ರಾಜ್ಯವು 1639ರಲ್ಲಿ ಸ್ಥಾಪನೆಗೊಂಡಿತು. ಇಂಗ್ಲೇಂಡಿನ ಈಸ್ಟ್ ಇಂಡಿಯಾ ಕಂಪನಿಯು ಬೀಡು ಬಿಟ್ಟಿದ್ದು, ರಾಜಧಾನಿ ಮದರಾಸ್ (ಈಗೀನ ಚೆನ್ನೈ) ನಲ್ಲಿ. ಮೊದಲು ತಮಿಳುನಾಡಿನಲ್ಲಿ ಪಲ್ಲವರು ಕಾಂಚಿಪುರಂನ್ನು ರಾಜಧಾನಿಯಾಗಿ ಮಾಡಿಕೊಂಡು ಆಳ್ವಿಕೆ ಮಾಡಿದ್ದರು. ಮಧುರೈ ಪಾಂಡ್ಯರ ರಾಜಧಾನಿಯಾಗಿತ್ತು. ಉತ್ತರದಲ್ಲಿ ಕರ್ನಾಟಕ ಮತ್ತು ಆಂಧ್ರಪ್ರದೇಶ, ಪೂರ್ವದಲ್ಲಿ ಕೇರಳ

ಪಶ್ಚಿಮದಲ್ಲಿ, ದಕ್ಷಿಣ "ತಮಿಳು" ಇಲ್ಲಿನ ಜನರು ಮಾತನಾಡುವ ಭಾಷೆ, ಹಾಗೆಯೇ ತಮಿಳು ಭಾಷೆಯನ್ನು ಶಾಸ್ತ್ರಿಯ ಭಾಷೆಯಾಗಿ ಗುರುತಿಸಲಾಗಿದೆ.[1]

ಕೆ. ಎನ್. ರಾಮಚಂದ್ರನ್‌ರವರು ಜನಿಸಿದ ಜಿಲ್ಲೆಗೆ ಬಂದರೆ ತಂಜಾವೂರು ಇದರ ಪುರಾತನ ಹೆಸರು "ಟಾಂಜೋರ್". ಕಾವೇರಿ ನದಿಯ ತೀರದಲ್ಲಿದೆ. ಈ ಊರನ್ನು ತಮಿಳುನಾಡಿನ "ಅನ್ನದ ಪಾತ್ರೆ" ಎಂದು ಕರೆಯಲಾಗುತ್ತದೆ. ಈ ಪ್ರದೇಶವನ್ನು "ತಂಜ್" ಎಂಬ ನಾಯಕನ ಹೆಸರಿನಿಂದ ತಂಜಾವೂರು ಎಂಬ ಹೆಸರು ಬಂದಿದೆ.[2] ಐತಿಹಾಸಿಕ ಸ್ಮಾರಕಗಳಿಂದ ಕೂಡಿದ ಪ್ರದೇಶ ಹಾಗೂ ದೇವಾಲಯಗಳಿಂದ ಕೂಡಿದ ಶ್ರೀಮಂತ ಜಿಲ್ಲೆಯಾಗಿದ್ದು "ಬೃಹದೇಶ್ವರ" ಎಂಬ ದೊಡ್ಡ ದೇವಾಲಯ ಇದೆ. ಈ ದೇವಾಲಯದಲ್ಲಿ ಕಾಶಿಯಿಂದ ತಂದ ನಾಲ್ಕು ಮೀಟರ್ ಎತ್ತರದ ಬೃಹತ್ ಶಿವಲಿಂಗವನ್ನು ಸ್ಥಾಪಿಸಲಾಗಿದೆ. ಹಾಗಾಗಿ ಈ ದೇವಾಲಯಕ್ಕೆ ಬೃಹದೇಶ್ವರ ಎಂದು ಕರೆಯುವುದುಂಟು.

ಇಲ್ಲಿನ ಪ್ರಮುಖವಾದ ದೇವಾಲಯಗವೆಂದರೆ 'ಬೃಹದೇಶ್ವರ' ದೇವಾಲಯ ಇದನ್ನು ಚೋಳ ದೊರೆ ನಿರ್ಮಿಸಿದ್ದಾನೆ. ಈ ದೇಗುಲವನ್ನು ಚೋಳರ ವಾಸ್ತುಶಿಲ್ಪದ ಕೈಗನ್ನಡಿಯಂದರೆ ತಪ್ಪಾಗಲಾರದು. 15 ನೇ ಶತಮಾನದ ಕಾಲಘಟ್ಟದಲ್ಲಿ ಮರಾಠ ಮತ್ತು ನಾಯಕ ದೊರೆಗಳು ನಿರ್ಮಿಸಿದ ಅನೇಕ ಅರಮನೆಗಳ ಸಂಕೀರ್ಣವನ್ನು ತಂಜಾವೂರಿನಲ್ಲಿ ಕಾಣಬಹುದು. ಅದಲ್ಲದೆ, ಇಲ್ಲಿನ ಸುಪ್ರಸಿದ್ಧ ವಸ್ತು ಸಂಗ್ರಹಾಲಯದಲ್ಲಿ ಗ್ರಾನೈಟ್ ಶಿಲ್ಪಗಳು, ಕಂಚಿನ ಮೂರ್ತಿಶಿಲ್ಪಗಳನ್ನು ಸಂಗ್ರಹಿಸಲಾಗಿದ್ದು ಇವು 9 ಮತ್ತು 12 ನೇ ಶತಮಾನಕ್ಕೆ ಸೇರಿವೆ. 1779 ರ ಸುಮಾರಿಗೆ ಮರಾಠ ದೊರೆ "ಶರಮೂಜಿ" ಯು ಶವಾಟ್ಸ್ ಚರ್ಚನ್ನು ನಿರ್ಮಿಸಿದ್ದು, ಬ್ರಿಟೀಷ ವ್ಯಾಸರಾಯ ರೇವರೆಂಡ್ ಶವಾಟ್ಸ್ ಪ್ರೀತಿಯ ಮತ್ತು ಭಾತೃತ್ವದ ಪ್ರತೀಕವಾಗಿ ನಿರ್ಮಾಣಗೊಂಡಿದೆ.[3] ತಂಜಾವೂರಿನಲ್ಲಿ ಅನೇಕ ದೇವಾಲಯಗಳು, ಆರ್ಟ ಗ್ಯಾಲರಿಗಳು ಕಂಡುಬರುತ್ತವೆ. ಇದು ಮರಾಠ ಅವಧಿಯಲ್ಲಿ ಪ್ರಸಿದ್ಧ ಕಲಾಕೇಂದ್ರವಾಗಿತ್ತು. ತಂಜಾವೂರು ಶೈಲಿಯೆಂದೇ ಗುರುತಿಸಲ್ಪಡುತ್ತದೆ. ಇಲ್ಲಿ 18 ನೇ ಶತಮಾನದಲ್ಲಿ ತಯಾರಾಗುತ್ತಿದ್ದ ಗಾಜಿನ ಮೇಲಿನ ಚಿತ್ರಗಳು ದೇಶದ ಎಲ್ಲಾ ಪ್ರದೇಶಗಳಲ್ಲಿ ಕಾಣಸಿಗುತ್ತವೆ. ಅವರಲ್ಲಿ ಮಹಾರಾಷ್ಟ್ರ, ಆಂದ್ರ ಪ್ರದೇಶ, ತಮಿಳು ನಾಡು, ಕರ್ನಾಟಕ ಮುಂತಾದ ರಾಜ್ಯಗಳಲ್ಲಿ ಪ್ರಮುಖವಾಗಿ ಕಂಡುಬರುತ್ತವೆ. ಈ ಶೈಲಿಯ ಚಿತ್ರಗಳು ಪ್ರಮುಖ ವ್ಯಾಪರಸ್ಥರ, ಶ್ರೀಮಂತರ ಮಠಮಾನ್ಯಗಳಲ್ಲಿ ಇಂದು ಸಹ ಲಬ್ಯ ಇವೆ. ತಂಜಾವೂರು ಚನ್ನೈನಿಂದ 334 ಕಿ.ಮೀ ಅಂತರದಲ್ಲಿದೆ.

ಕೆ. ಎನ್. ರಾಮಚಂದ್ರನ್ ಅವರ ಹುಟ್ಟುರಾದ ಪೊಟ್ಟುಕೊತ್ತಾಯ್. ಇಲ್ಲಿನ ಪರಿಸರ ತುಂಬಾ ಸುಂದರವಾಗಿತ್ತು. ಎತ್ತ ನೋಡಿದರೂ ಕಡಲ ತೀರದ ದೃಶ್ಯಗಳು ಕಣ್ಣಿಗೆ ಕಟ್ಟುವಂತೆ ಕಂಡುಬರುತ್ತವೆ. ಸುತ್ತ-ಮುತ್ತ ಎತ್ತ ಕಡೆ ನೋಡಿದರೂ ಹಚ್ಚ ಹಸಿರುನಿಂದ ಕೂಡಿಕೊಂಡ ಪ್ರದೇಶವಾಗಿದೆ. ಇಲ್ಲಿ ಭತ್ತ, ತೆಂಗು, ಅರಿಶಿನ, ಹಲಸು, ಮುಂತಾದ ಪದಾರ್ಥಗಳನ್ನು ಬೆಳೆಯುತ್ತಿದ್ದರು. ಅತಿ ಹೆಚ್ಚು ಭತ್ತವನ್ನು ಬೆಳೆಯುತ್ತಿದ್ದರು ಹಾಗೆಯೇ ಪಕ್ಕದ ರಾಜ್ಯಗಳಿಗೆ ಇಲ್ಲಿಂದಲೇ ಭತ್ತ ಮಾರಾಟವಾಗುತ್ತಿತ್ತು. ತೆಂಗು ಕೂಡಾ ಅಷ್ಟೇ ಹೆಚ್ಚು ಪ್ರಮಾಣದಲ್ಲಿ ಬೆಳೆಯುತ್ತಿರುವುದನ್ನು ಈಗಲು ನೋಡಬಹುದು. ಕಡಲ ತೀರದಲ್ಲಿ ಹಡಗುಗಳು ಮೀನುಗಾರರ ವ್ಯಾಪಾರ ವಾಹಿವಾಟುಗಳು ಹೆಚ್ಚು ಹೆಚ್ಚು ನಡೆಯುತ್ತಿವೆ. ಈ ಪ್ರದೇಶದಲ್ಲಿ ಹಲವಾರು ದೇವಾಲಯಗಳನ್ನು ನೋಡಬಹುದಾಗಿದೆ. "ನಾಡಿಯಮ್ಮ" ದೇವಾಲಯ ಇಲ್ಲಿ ಪ್ರಮುಖವಾಗಿದ್ದು ಶಿವನ ದೇವಾಲಯ, ಮುರುಗನ್ ದೇವಾಲಯ ಸುಂದರವಾದ ಕೆತ್ತನೆಗಳಿಂದ ಮೂಡಿಬಂದಿವೆ. ಹಬ್ಬ, ಜಾತ್ರೆ ಹಾಗೂ ಸಂಸ್ಕೃತಿ ಯಿಂದ ಕೂಡಿದ ಊರಾಗಿದೆ. ಇಂತಹ ಊರಲ್ಲಿ ಜನಿಸಿದ ಇವರು ಇಲ್ಲಿಯ ಪರಿಸರ ವತಾವರಣದಲ್ಲಿ ಬೆಳೆದು ಆ ದೃಶ್ಯಗಳನ್ನು ನೋಡು ನೋಡುತ್ತಲೇ ಚಿಕ್ಕ ವಯಸ್ಸಿನಲ್ಲೇ ಚಿತ್ರ ಬರೆಯಲು

ಪ್ರೇರಣೆಯಾಯಿತು ಎಂದು ಹೇಳುತ್ತಾರೆ. ಇವರ ತಂದೆ ತಾಯಿಯವರು ಇವರ ಕಲೆಗೆ ಪ್ರೋತ್ಸಾಹ ಕೊಟ್ಟವರು. ತಂದೆ ಒಂದು ಗಿರವಿ ಅಂಗಡಿ ಇಟ್ಟುಕೊಂಡಿದ್ದರು. ಜೀವನ ನಡೆಸಲು ತೊಂದರೆ ಇಲ್ಲದೆ ಇವರ ಸಾಂಸಾರಿಕ ಬದುಕು ಸುಖಕರವಾಗಿತ್ತು. ತಂದೆಯು ಒಬ್ಬ ಉತ್ತಮ ಸಂಗೀತಗಾರನಾಗಿದ್ದು ಆಗಾಗ ಸಂಗೀತ ಕಛೇರಿಗಳನ್ನು ನಡೆಸುತ್ತಿದ್ದರು. ಅನೇಕ ಸಂಗೀತ ವಿದ್ವಾಂಸರು ಹಾಗೂ ಕಲಾವಿದರು, ಸಾಹಿತಿಗಳು ಹುಟ್ಟಿದಂತೆ ಇಂತಹ ಮಣ್ಣಿನಲ್ಲಿ ರಾಮಚಂದ್ರನ್‌ರವರು ಜನಿಸಿ ಅಲ್ಲಿಯ ಪರಿಸರದಲ್ಲಿನ ಸೌಂದರ್ಯವನ್ನು ಸವಿದು ಅನುಭವಿಸಿ ಬಾಲ್ಯದಲ್ಲಿರುವಾಗಲೇ ಅವರ ಕಲೆಯ ಬಗ್ಗೆ ಆಸಕ್ತಿಯನ್ನು ಬೆಳೆಸಿಕೊಂಡರು. ಆಗಿನ ಗುರುಕುಲ ಪದ್ಧತಿಯ ಶೈಲಿಯಲ್ಲಿ ಪಾಠ ಕಲಿತರು ಅಲ್ಲಿನ ಪರಿಸರ ಇವರಿಗೆ ತುಂಬಾ ಇಷ್ಟ. ನದಿ ದಡದ ಬಯಲಲ್ಲಿ ಸ್ನಾನ ಮಾಡಿ ನಂತರ ಕೆಂಪು ವಸ್ತ್ರಗಳನ್ನು ಧರಿಸಿ ಮಡಿಯಿಂದ ಕುಳಿತು ಮರಳಮೇಲೆ ಬರೆಯುವುದರ ಮೂಲಕ ಇವರು ವಿದ್ಯಾಭ್ಯಾಸವನ್ನು ಕಲಿತರು. ಗುರುಗಳು ಬೋಧಿಸುವಿಕೆಯ ಜೊತೆಗೆ ಸ್ನೇಹಿತರ ಮಧ್ಯೆ ಹಾಲಿಲ್ಲದ ಟೀಯನ್ನು ಕೊಡುತ್ತಿದ್ದರು. ಇವರಿಗೆ ಇಲ್ಲಿನ ಟೀ ಕುಡಿಯಲು ತುಂಬಾ ಇಷ್ಟವಂತೆ. ನಂತರ ಹೈಸ್ಕೂಲಿಗೆ 'ಕುಂಭ ಕೋಣಂ' ಎಂಬಲ್ಲಿ ಸೇರಿದರು. ಇದು ತಂಜಾವೂರು ನಗರದಿಂದ 36 ಕಿ.ಮೀ ದೂರದಲ್ಲಿದೆ. ಇದು ಒಂದು ಆಧ್ಯಾತ್ಮಿಕ ಕೇಂದ್ರ ಹಾಗೂ ತಂಜಾವೂರು ಜಿಲ್ಲೆಯ ಅತಿ ದೊಡ್ಡ ನಗರ ಕುಂಭಕೋಣಂ. ಈ ನಗರದಲ್ಲಿ ಸಾರಂಗ ಪ್ರಾಣಿಗಳು ಹೆಚ್ಚಿದ್ದು, ಕುಂಭೇಶ್ವರರ ನಾಗೇಶ್ವರ್ ಮತ್ತು ಬ್ರಹ್ಮ ದೇವಾಲಯಗಳಿವೆ. ಇಲ್ಲಿನ ದೇವಾಲಯಗಳ ವಾಸ್ತು ಶಿಲ್ಪ, ಕಲೆಗಳು ಅಮೋಘವಾಗಿದೆ. ಮಹಾಮಹಂ ಕೆರೆ ಕುಂಭ ಕೋಣಂನ ಪ್ರತಿಷ್ಠಿತ ಕೆರೆ ಮತ್ತು ಪುಣ್ಯ ಸ್ಥಳವಾಗಿದೆ. ಇಲ್ಲಿ 12 ವರ್ಷಕ್ಕೊಮ್ಮೆ ಮಹಾಮಹಂ ಹಬ್ಬ ನಡೆಯುತ್ತದೆ. ತಮಿಳು ತಿಂಗಳು ಮಾಸದಲ್ಲಿ ಬರುವ ಮಹಾಮಹಂ ಹಬ್ಬದ ದಿನ ಈ ಕೆರೆಯಲ್ಲಿ ಸ್ನಾನ ಮಾಡಿದರೆ ಪಾಪ ನಾಶವಾಗುತ್ತದೆ ಎಂಬ ನಂಬಿಕೆಯಿದೆ. ಇನ್ನೂ ದೇವಾಲಯಗಳಲ್ಲಿ ಬಂದರೆ ದಾರಸುರಂ ಮನೋರಾಸ್ವಾಮಿಮಲೈ, ತಿರುಕಡೈಯಾರ್, ತಿರುನಾಗೇಶ್ವರಂ, ತಿರುವುಳ್ಳವರು ತಿರುಬುವನಂ ಇನ್ನೂ ಅನೇಕ ದೇವಾಲಯಗಳ ಬೀಡು ಈ ಪ್ರದೇಶವಾಗಿದ್ದು.[4] ಇಂತಹ ಪರಿಸರದಲ್ಲಿ ಕೆ. ಎನ್. ರಾಮಚಂದ್ರನ್‌ರವರು ವಿದ್ಯಾಭ್ಯಾಸ ಪಡೆಯಲು ಬಂದವರು. ಆಗ ಅವರಿಗೆ "ಧರ್ಮವೀರಂ ಪಿಳ್ಳೈ" ಎಂಬ ಗುರುಗಳು ಸಿಕ್ಕರು ಅವರ ಮಾರ್ಗದರ್ಶನದಲ್ಲಿ ಚಿತ್ರಕಲೆಯನ್ನು ಕಲಿತರು.

ಅ) ಕೌಟುಂಬಿಕ ಹಿನ್ನೆಲೆ :

ರಾಮಚಂದ್ರನ್‌ರವರು ಒಂದು ಸುಸಂಸ್ಕೃತ ಕುಟುಂಬದಿಂದ ಬಂದವರು. ಇವರ ತಂದೆ ನಿತ್ಯಾನಂದಶೆಟ್ಟಿ ತಾಯಿ ಅವತಾಲಾಚಿಯವರು. ಇವರ ತಂದೆ ಗಿರವಿ ಅಂಗಡಿ ಮಾಲೀಕರಾಗಿ ಕೆಲಸವನ್ನು ನಿರ್ವಹಿಸುತ್ತಿದ್ದರು. ಜೊತೆಗೆ ಸಂಗೀತ ಕಲಿತು ಹಾಡುಗಳನ್ನು ಹಾಡುತ್ತಿದ್ದರು. ಯಾರಾದರೂ ಹಾಡು ಕಲಿಯಬೇಕೆಂದರೆ ಇವರ ಹತ್ತಿರ ಬಂದು ಹಾಡು ಕಲಿತು ಕೊಳ್ಳುತ್ತಿದ್ದರು. ಇವರು ಯಾವುದೇ ಶುಲ್ಕ ಪಡೆಯದೆ ಸಂಗೀತವನ್ನು ಹೇಳಿಕೊಡುತ್ತಿದ್ದರು. ಇವರ ತಾಯಿ ಸಾಂಪ್ರಾದಾಯಿಕವಾಗಿ ಗೃಹಿಣಿಯಾಗಿ ಮನೆಯ ಜವಾಬ್ದಾರಿಯನ್ನು ಹೊತ್ತಿದ್ದರು. ಇವರಿಗೆ ಮೂರು ಜನ ಗಂಡು ಮಕ್ಕಳು, ರಾಮಚಂದ್ರನ್ ಅವರಿಗೆ ಅಕ್ಕ ಅಣ್ಣ ಇದ್ದಾರೆ. ಇವರೊಟ್ಟಿಗೆ ಆಟ, ಪಾಠಗಳನ್ನು ಆಡುತ್ತಾ ಇಂತಹ ಕುಟುಂಬದಿಂದ ಬೆಳೆದು ಬಂದವರು, ಇವರಿಗೆ ತಾಯಿಯೆಂದರೆ ತುಂಬಾ ಪ್ರೀತಿ. ತಾಯಿಯ ಬಳಿಯಲ್ಲಿ ಹೆಚ್ಚುಹೊತ್ತು ಕಳೆಯುತ್ತಿದ್ದರು. ಇವರಿಗೆ ಕಲೆಯೆಂಬುದು ಕುಟುಂಬದಿಂದ ಬಂದುದು. ತಂದೆ ಒಬ್ಬ ಸಂಗೀತಗಾರರು ಇವರು ಸುಪ್ರಸಿದ್ಧ ಕಲಾವಿದರಾಗಿ ಹೊರ ಹೊಮ್ಮಿದ್ದಾರೆ.

- ಮೊದಲನೆಯವರು ಚಿತ್ರಕಲಾ, ಎಂ.ಎ. ಮುಗಿಸಿಕೊಂಡು ವೆಂಕಟ ಇಂಟರ ನ್ಯಾಶನಲ್ ಪಬ್ಲಿಕ್ ಸ್ಕೂಲನಲ್ಲಿ ಪ್ರಿನ್ಸಿಪಲ್ ಆಗಿ ಕೆಲಸ ಮಾಡುತ್ತಿದ್ದಾರೆ.
- ಎರಡನೆಯವರು ಒವಿಯ ಚೆಲ್ವಿ, ಎಂ.ಎಫ್.ಎ, ಮದ್ರಾಸ್ ಸ್ಕೂಲ್ ಆಫ್ ಆರ್ಟ್ ತಮ್ಮ ಅಡ್ವೆಟೈಜಮೆಂಟ್ ಕಂಪನಿಯ ಮಾಲೀಕರಾಗಿದ್ದಾರೆ.
- ಮೂರನೆಯವರು ಎಯಿಲ್ ಅರಸಿ, ಎಂ.ಎ. ಎಂಫಿಲ್ ಮಾಡಿಕೊಂಡು ಸೆಂಟೆನ್ಸ್ ಪಬ್ಲಿಕ್ ಸ್ಕೂಲ್‌ನಲ್ಲಿ ಉಪನ್ಯಾಸಕಿ ಹಾಗೂ ಒಬ್ಬ ಕವಿಯತ್ರಿಯಾಗಿದ್ದಾರೆ.
- ನಾಲ್ಕನೆಯವರು ವೆಟ್ವಿ ಚಲ್ವಿ' ಕರ್ನಾಟಕ ಚಿತ್ರಕಲಾ ಪರಿಷತ್ ಮುಗಿಸಿದ್ದು ಅಡ್ವೆಟೈಜ ಕಂಪನಿಯಲ್ಲಿ ಹಾಗೂ 5 ಬಾರಿ ಅಂತರಾಷ್ಟ್ರೀಯ ಪ್ರಶಸ್ತಿ ವಿಜೇತರಾಗಿದ್ದಾರೆ.
- ಐದನೆಯವರು ಕಾರ್ತಿಕ್, ಎಂ.ಎಫ್.ಎ, ಕರ್ನಾಟಕ ಚಿತ್ರಕಲಾ ಪರಿಷತ್ ಕ್ರಿಯೆಟೀವ್ ಡಿಜೈನರ್ ಮುಗಿಸಿಕೊಂಡು ಎಂ.ಟಿ.ವ್ಹಿ ಚಾಲನನಲ್ಲಿ ಕೆಲಸ ಮಾಡುತ್ತಿದ್ದಾರೆ.

ಹೀಗೆ ಅವರ ಕೌಟುಂಬಿಕ ಜೀವನದಲ್ಲಿ ಎಲ್ಲರೂ ಕಲಾವಿದರಾಗಿ ಹೊರಹೊಮ್ಮಿದ್ದಾರೆ ಎಂದು ಹೇಳಬಹುದು.

ಬ) ಬಾಲ್ಯ ಜೀವನ ಮತ್ತು ಶಿಕ್ಷಣ :

ಶ್ರೀ ಕೆ. ಎನ್. ರಾಮಚಂದ್ರನ್‌ರವರು ಮೂಲತಃ ತಮಿಳುನಾಡಿನ ತಂಜಾವೂರು ಜಿಲ್ಲೆಯವರು. ಇವರು "ಪಟ್ಟುಕೊತ್ತಾಯ್" ಎಂಬ ಗ್ರಾಮದಲ್ಲಿ 1937ನೇ ಮೇ 1 ರಂದು ಜನಿಸಿದರು. ಇವರ ತಂದೆ ನಿತ್ಯಾನಂದಶೆಟ್ಟಿ ತಾಯಿ ಅವತಾಲಾಚಿಯವರ ಮಗನಾಗಿ ಜನಿಸಿದರು. ಒಬ್ಬ ಅಕ್ಕ ಹಾಗೂ ಒಬ್ಬ ಅಣ್ಣ ಇವರೆಲ್ಲರ ಜೊತೆಯಲ್ಲಿ ಬೆಳೆದು ಬಂದಿದ್ದು, ಒಂದು ಸಂಪ್ರದಾಯಸ್ತ ಕುಟುಂಬದಿಂದ ಬಂದವರಾಗಿದ್ದಾರೆ.

ಇವರು ಬಾಲ್ಯಜೀವನವನ್ನು ತನ್ನ ಗ್ರಾಮದಲ್ಲೇ ಕಳೆದರು. ಇವರಿಗೆ ತಾಯಿಯೆಂದರೆ ತುಂಬಾ ಪ್ರೀತಿ. ಅದಕ್ಕೆ ಅವರು ಚಿಕ್ಕವರಿದ್ದಾಗ ಸದಾ ಅವರ ಜೊತೆಯಲ್ಲಿರಲು ಬಯಸುತ್ತಿದ್ದರು. ಹೀಗೆ ಅವರು ಅಕ್ಕ ಪಕ್ಕದವರ ಹುಡುಗರ ಜೊತೆಯಲ್ಲಿ ಆಟಗಳನ್ನು ಆಡುತ್ತಾ ಬೆಳೆಯತೊಡಗಿದರು. ಇವರ ತಂದೆ ಗುರುಕುಲಕ್ಕೆ ಸೇರಿಸಿದರು. ಹಿಂದಿನ ಕಾಲದ ಗುರುಕುಲ ಪದ್ಧತಿಯಲ್ಲಿ ಇವರು ವಿದ್ಯೆಯನ್ನು ಕಲಿತು ಬಂದವರಾಗಿದ್ದರು. ಅಲ್ಲಿನ ಪದ್ಧತಿಯು ಪ್ರತಿದಿನ ಮುಂಜಾನೆಯ ವೇಳೆಯಲ್ಲಿ ಎದ್ದು ನದಿಯಲ್ಲಿ ಸ್ನಾನ ಮಾಡಿ ಕೆಂಪು ವಸ್ತ್ರವನ್ನು ಧರಿಸಿಕೊಂಡು ಶುದ್ಧ ಮಡಿಯಿಂದ ಚಿಕ್ಕದೊಂದು ಜುಟ್ಟು ಬಿಟ್ಟಿದ್ದರು. ಹೀಗೆ ಎಲ್ಲಾ ವಿದ್ಯಾರ್ಥಿಗಳು ಪಾಲಿಸುತ್ತಿದ್ದರು. ಗುರುಗಳು ಹೇಳಿಕೊಟ್ಟ ವಿದ್ಯೆಯನ್ನು ಇವರು ಮರಳಲ್ಲಿ ಕಲಿತುಕೊಳ್ಳುವ ಪದ್ಧತಿಯಾಗಿತ್ತು. ಚಳಿಯಾದಾಗ ಅವರಿಗೆ ಕುಡಿಯಲು ಹಾಲಿಲ್ಲದ ಚಹಾವನ್ನು ಕೊಡುತ್ತಿದ್ದರು. ಚಹಾಕ್ಕೆ ಬೆಲ್ಲವನ್ನು ಇವರ ಗಿರವಿ ಅಂಗಡಿಯಿಂದ ಉಚಿತವಾಗಿ ಕೊಡುತ್ತಿದ್ದರು. ಅಂದಿನಿಂದ ಇಂದಿನ ವರೆಗೆ ಅಂತಹ ಟೀ ಎಂದರೆ ಅವರೂ ತುಂಬಾ ಇಷ್ಟಪಡುತ್ತಾರೆ.

ಕಲಾವಿದ ಈ ಲೋಕದಲ್ಲಿ ವಸ್ತುವೊಂದರ ಸೌಂದರ್ಯಾನುಭವವನ್ನು ಪಡೆಯುವಾಗ ಆ ಕ್ರಿಯೆಯಲ್ಲಿ ನಾವು 3 ಅಂಶಗಳನ್ನು ಗುರುತಿಸಬಹುದಾಗಿದೆ.

1. ವ್ಯಕ್ತಿ ಸೌಂದರ್ಯಾನುಭವವನ್ನು ಪಡೆಯುವ ಸಾಮರ್ಥ್ಯವುಳ್ಳ ಕಲಾವ್ಯಕ್ತಿ,

2. ಸೌಂದರ್ಯಾನುಭವಕ್ಕೆ ಕಾರಣವಾದ ಲೋಕವಸ್ತು,

3. ಈ ವಸ್ತು ವ್ಯಕ್ತಿಗಳ ಸಂಯೋಗದಿಂದ ನಿಷ್ಪತ್ತಿಯಾಗುವ ಸೌಂದರ್ಯಾನುಭವವೆಂಬ ಆನಂದ ವಿಶೇಷ ಕಲಾವಿದನೊಬ್ಬ ಸಂಜೆಯ ಸೂರ್ಯಾಸ್ತವನ್ನು ನೋಡುತ್ತಾನೆ. ಮೋಡಗಳ ಮೇಲೆ ಚದುರಿ ಚದುರಿ ಹಿಂಜಿದ ನಸುಕೆಂಪು, ಮೊಬ್ಬಾದ ಆಕಾಶದಲ್ಲಿ ಅರಳಿದ ನಡುಗೆಂಪು, ಗಿಡ ಮರಗಳ ಮೇಲೆ ಹೊದಿಸಿದ ಕಡುಗೆಂಪು, ಸೂರ್ಯನ ಹೊಳೆಯುವ ಹೊಂಬಣ್ಣ, ದೂರದ ಹೊಲದಂಚಿನಲ್ಲಿ ಗೋಧೂಳಿ, ಗರಿಗೆದರಿ ಸಾಲು ಸಾಲಾಗಿ ಹಾರುತ್ತಿರುವ ಬೆಳ್ಳಕ್ಕಿಗಳು, ಕೆರೆಯಲ್ಲಿ ಮಾಡಿದ ಸೂರ್ಯನ ಬಿಂಬ ಒಟ್ಟಾರೆಯಾಗಿ ದೃಶ್ಯ ಯಾವುದೇ ಒಂದು ಸ್ವರ್ಗೀಯ ಅನುಭವವನ್ನು ಆ ಕ್ಷಣದಲ್ಲಿ ಅಲ್ಲಿ ತಂದು ನಿಲ್ಲಿಸಿದ ಇದೆಲ್ಲವನ್ನು ಒಬ್ಬ ಕಲಾವಿದ ಒಂದು ಅತ್ಯಂತ ತನ್ಮಯತೆಯಿಂದ ನೋಡುತ್ತಾನೆ. ಆದರೆ ಇದೇ ಸೌಂದರ್ಯವನ್ನು ಬೇರೊಬ್ಬ ಗಮನಿಸದೆ ಇರಬಹುದು. ಆದರೆ ಸೌಂದರ್ಯವನ್ನು ಆನಂದಿಸುವ ಸಹಜ ಗುಣ, ಕಲಾವಿದನ ಸಾಮರ್ಥ್ಯ ಎಂದು ಹೇಳಬಹುದು.[5]

ಬಾಲ್ಯದಲ್ಲಿರುವಾಗಲೇ ಪರಿಸರ ಎಂದರೆ ತುಂಬಾ ಪ್ರೀತಿಯಿಂದ ಇಷ್ಟ ಪಡುತ್ತಿದ್ದರು. ಗುರುಕುಲದ ವಾತಾವರಣ, ನದಿ, ದೇವಾಲಯ, ಹಕ್ಕಿಗಳ ನಿನಾದ, ಎಲ್ಲವನ್ನೂ ಗಮನಿಸುತ್ತಿದ್ದರು. ಅದೇ ಊರಿನ ಸಮುದ್ರ ನೀರಿನ ಅಲೆಗಳು ನೃತ್ಯದಂತೆ ಗೋಚರಿಸುತ್ತವೆ. ಅಂತಹ ಸನ್ನಿವೇಶಗಳು ಮೋಡಗಳಲ್ಲಿ ವರ್ಣಗಳ ಬದಲಾವಣೆಯಂತು ತುಂಬಾ ಆಕರ್ಷಿತವಾಗಿದ್ದು ಅವುಗಳನ್ನೆಲ್ಲ ದಿನ ನಿತ್ಯ ಒಡಾಡುವಾಗ ಗಮನಿಸುತ್ತಿದ್ದರು.

ಒಂದು ದಿನ ಅವರ ಗ್ರಾಮದಲ್ಲಿ ಗ್ರಾಮದೇವತೆ ಜಾತ್ರೆಯ ದೇವಸ್ಥಾನದ ಅಂಗಳದಲ್ಲಿ ಅಡುಗೆ ಕಾರ್ಯಕ್ರಮ ನಡೆಯತೊಡಗಿತ್ತು. ಅಡುಗೆ ಮುಗಿಸಿದ ನಂತರ ಒಲೆಯಲ್ಲಿ ಬಿದ್ದಿರುವ ಇದ್ದಿಲನ್ನು ತೆಗೆದುಕೊಂಡು ದೇವಾಲಯದ ಬಿಳಿ ಗೋಡೆಯ ಮೇಲೆ ಮನಸ್ಸಿಗೆ ಬಂದಿದ್ದನ್ನು ಗೀಚಾಡಿದ್ದರು. ಗ್ರಾಮಸ್ಥರು ಅದನ್ನು ನೋಡಿ ಚಿತ್ರ ತುಂಬಾ ಚೆನ್ನಾಗಿದೆ. ಪಟ್ಟಣಕ್ಕೆ ಹೋಗಿ ಇನ್ನೂ ಹೆಚ್ಚಿನದಾಗಿ ಚಿತ್ರ ಬರೆಯುವುದನ್ನು ಕಲಿ ಎಂದು ಪ್ರೋತ್ಸಾಹ ಕೊಟ್ಟಿದ್ದರು. ಅದೇ ಹುರುಪಿನಲ್ಲಿ ಚಿತ್ರಗಳನ್ನು ಬರೆಯಲು ಪ್ರಾರಂಭಿಸತೊಡಗಿದರು. ಆರಂಭದಲ್ಲಿ ಚಿತ್ರ ರಚನೆ ಮಾಡುವಾಗ ಬಣ್ಣಗಳ ಬಗ್ಗೆ ಗೊತ್ತಿರಲಿಲ್ಲ. ಆಗ ಮನೆಯ ಬಾಗಿಲಿಗೆ ಹಚ್ಚಿದ ಅರಿಶಿನ, ಕುಂಕುಮವನ್ನು ಬಣ್ಣಗಳನ್ನಾಗಿ ಮಾಡಿಕೊಂಡು ಅಜ್ಜಿಯ ಸುಣ್ಣದ ಡಬ್ಬಿಯಿಂದ ಸುಣ್ಣ ತೆಗೆದುಕೊಂಡು ಅದಕ್ಕೆ ಅರಿಶಿನ ಮಿಶ್ರಣ ಮಾಡಿದಾಗ ಕಿತ್ತಳೆ ಬಣ್ಣ ತಯಾರು ಮಾಡಿಕೊಳ್ಳುತ್ತಿದ್ದರು. ಇದ್ದಿಲು ಪುಡಿ ಮತ್ತು ಮರದಲ್ಲಿ ಬಿಡುವಂತಹ ಗೋಂದನ್ನು ಮಿಶ್ರಣಮಾಡಿ ಕಪ್ಪು ವರ್ಣವನ್ನು ತಯಾರಿಸುತ್ತಿದ್ದರು. ಮರದ ಎಲೆಗಳನ್ನು ಕುಟ್ಟಿ ಪುಡಿಮಾಡಿ ಅದರಿಂದ ಬರುವಂತಹ ರಸವನ್ನು ಚಿತ್ರಗಳಿಗೆ ಹಚ್ಚುತ್ತಿದ್ದರು. ಮರದ ಎಲೆ ಹೂಗಳಿಂದ ತಯಾರಿಸಿದ ಬಣ್ಣ ಇವರಿಗೆ ಇಷ್ಟವಾದ ಬಣ್ಣವಾಗಿತ್ತು. ಅದರಿಂದ ರಚಿಸಿದ ಚಿತ್ರಗಳನ್ನು ನೋಡಿದ ಸ್ನೇಹಿತರೆಲ್ಲರೂ ಚೆನ್ನಾಗಿದೆಯೆಂದು ಪ್ರೋತ್ಸಾಹ ಕೊಟ್ಟಿದ್ದರು.

ಇವರಿಗೆ ಬಾಲ್ಯದಲ್ಲಿರುವಾಗಲೇ ಹೆಚ್ಚು ಜನ ಸ್ನೇಹಿತರಿದ್ದರು. ಅವರ ಜೊತೆ ಆಟ ಪಾಠಗಳನ್ನು ಆಡುತ್ತಾ ಬೆಳೆದಿದ್ದು, ಇಂತಹ ಸ್ನೇಹಿತರಲ್ಲಿ ಮುಸ್ಲೀಂ ಸ್ನೇಹಿತರೊಬ್ಬರು ಆತ್ಮೀಯವಾಗಿದ್ದರು. ಅವರ ತಂದೆಯವರು ಮೀನುಗಾರಿಕೆ ಮಾಡುತ್ತಿದ್ದು ಅವರಲ್ಲಿ ಸಾಕಷ್ಟು ಬೋಟ್‌ಗಳು ಸಹ ಇದ್ದವು. ಗೆಳೆಯರೆಲ್ಲರು ಸೇರಿ ರಜಾದಿನಗಳು ಬಂದಾಗ ಅವರ ಮನೆಗೆ ಹೋಗಿ ಬೋಟ್‌ಗಳಲ್ಲಿ ವಿಹರಿಸುತ್ತಾ ಸಮುದ್ರದಲ್ಲಿ ಸ್ವಲ್ಪದೂರ ಕರೆದುಕೊಂಡು ಹೋಗಿ ಬರುತ್ತಿದ್ದರು. ದೂರದಲ್ಲಿರುವ ಚಿಕ್ಕ ಹಡಗುಗಳ

ದೃಶ್ಯಗಳನ್ನು ಗಮನಿಸುತ್ತಿದ್ದರು. ಅಲೆಗಳ ಏರಿಳಿತಗಳು ನೃತ್ಯದಂತೆ ಗೋಚರವಾಗುತ್ತಿದ್ದವು. ಅವುಗಳನ್ನೆಲ್ಲ ಗಮನದಲ್ಲಿಟ್ಟುಕೊಂಡು ಚಿತ್ರ ಬರೆಯುವುದಕ್ಕೆ ಹೆಚ್ಚಿನದಾಗಿ ಆಸಕ್ತಿಯನ್ನು ಉಂಟುಮಾಡುತ್ತಿದ್ದವು.

ಒಬ್ಬ ಕಲಾವಿದ ಕಲಾಕೃತಿಯ ರಚನೆಯು ಪೂರ್ವದಲ್ಲಿಯೇ ಅವನ ಮನಸ್ಸಿನಲ್ಲಿ ರೂಪುಗೊಳ್ಳುತ್ತದೆ. ಅದು ಅಭಿವ್ಯಕ್ತಿಯಲ್ಲಿ ಮೂಡಿದ ರೂಪಗಳಿಗೆ ಚಿತ್ರಕಲಾವಿದ ರೇಖೆ, ಬಣ್ಣ ಮತ್ತು ಆಕಾರಗಳ ಮೂಲಕ ಮಾಧ್ಯಮಗಳ ಸಹಾಯದಿಂದ ಬಾಹ್ಯವಾಗಿ ಸಂಯೋಜನೆಗೊಳಿಸುತ್ತಾನೆ. ಈ ಹಂತದಲ್ಲಿ ಕಲಾಕೃತಿ ಮತ್ತು ಕಲಾವಿದನ ಸಂಬಂಧಗಳು ಕೃತಿ ರಚನೆಯಾಗುತ್ತಾ ಹೋದಂತೆ ಒಂದಕ್ಕೊಂದು ತಳಕು ಹಾಕಿಕೊಂಡಿರುತ್ತವೆ. ಕಲಾವಿದನ ಆಂತರಿಕ ಸಂಬಂಧಗಳಿಂದ ಬಿಡುಗಡೆಗೊಂಡ ಕಲಾಕೃತಿಯ ಸಂಬಂಧಗಳು ಸಹೃದಯನೊಂದಿಗೆ ಬೆಸೆದುಕೊಳ್ಳುತ್ತವೆ. ಹೀಗೆ ಕಲಾಕೃತಿ ರಚನೆಯ ಪೂರ್ವದಲ್ಲಿ ಕಲಾವಿದನ ಮನೋಸ್ಥಿತಿ ಹಾಗೂ ಕೃತಿ ರಚನೆಯ ನಂತರ ಅದು ಸಹೃದಯನೊಂದಿಗೆ ಬೆರೆತು ಸಮಾಜಮುಖಿಯಾಗುವ ಸಾದ್ಯತೆ ಹೆಚ್ಚಿರುತ್ತದೆ.6 ಈ ರೀತಿಯಾಗಿ ಒಬ್ಬ ಕಲಾವಿದನಿಗೆ ಕಲಾನುಭವವಾಗುವುದು.[6]

ಕೆ. ಎಸ್. ರಾಮಚಂದ್ರನ್‌ರವರು ಯಾವುದೇ ಸನ್ನಿವೇಶಗಳನ್ನಾಗಲಿ ಮನಸ್ಸಿನ ಲೋಕಕ್ಕೆ ಕೊಂಡೊಯ್ಯುತ್ತಿದ್ದರು. ಒಬ್ಬ ಕಲಾವಿದ ಈ ಲೋಕದಲ್ಲಿ ವಸ್ತುವೊಂದರ ಸೌಂದರ್ಯಾನುಭವವನ್ನು ಪಡೆಯುವಾಗ ಆ ಕ್ರಿಯೆಯಲ್ಲಿ ಮೂರು ಅಂಶಗಳನ್ನು ಮುಖ್ಯವಾಗಿ ಗುರುತಿಸಬಹುದಾಗಿದೆ. ಒಂದು: ಸೌಂದರ್ಯಾನುಭವವನ್ನು ಪಡೆಯುವ ಸಾಮರ್ಥ್ಯ ಉಳ್ಳ ಕಲಾವ್ಯಕ್ತಿ. ಎರಡು: ಸೌಂದರ್ಯನುಭವಕ್ಕೆ ಕಾರಣವಾದ ಲೋಕವಸ್ತು, ಮೂರು: ಈ ಲೋಕವಸ್ತು ವ್ಯಕ್ತಿಗಳ ಸಂಯೋಗದಿಂದ ನಿಷ್ಪತ್ತಿಯಾಗುವುದೇ ಸೌಂದರ್ಯಾನುಭಾವ.[7] ಹೀಗೆ ರಾಮಚಂದ್ರನ್‌ರವರು ಬಾಲ್ಯದಲ್ಲಿರುವಾಗಲೇ ಕಡಲತೀರದಲ್ಲಿ ಸಂಜೆಯ ಸೂರ್ಯಾಸ್ತವನ್ನು ನೋಡುವಾಗ ಮೋಡಗಳ ಮೇಲೆ ಚದುರಿದ ನಸುಕೆಂಪು ಬಣ್ಣ, ಮೊಬ್ಬಾದ ಆಕಾಶದಲ್ಲಿ ಹರಡಿದ ನಸುಗೆಂಪು ಗಿಡಮರಗಳ ಮೇಲೆ ಹೊದಿಸಿದ ಕಡುಗೆಂಪು, ಸೂರ್ಯನ ಹೊಳೆಯುವ ಹೊಂಬಣ್ಣ ದೂರದಲ್ಲಿ ಚಿಕ್ಕದಾಗಿ ಕಾಣುವ ಬೋಟ್‌ಗಳು, ಗರಿಗೆದರಿ ಸಾಲುಸಾಲಾಗಿ ಹಾರುತ್ತಿರುವ ಬೆಳ್ಳಕ್ಕಿಗಳು, ನೀರಲ್ಲಿ ಮುಸುಕಾಗಿ ಕಾಣುವ ಸೂರ್ಯನಬಿಂಬ ಒಟ್ಟಾರೆಯಾಗಿ ಎಲ್ಲಾ ದೃಶ್ಯಗಳನ್ನು ಇವರು ಅತ್ಯಂತ ತನ್ಮಯತೆಯಿಂದ ನೋಡುತ್ತಾ ಕಡಲತೀರದ ಸನ್ನಿವೇಶಗಳ ಚಿತ್ರಗಳನ್ನು ಹೆಚ್ಚಾಗಿ ರಚಿಸುತ್ತಿದ್ದರು.

ನಂತರದ ದಿನಗಳಲ್ಲಿ ಹೈಸ್ಕೂಲಿಗೆ ಸೇರಿದಾಗ ಅಲ್ಲಿ ಅವರಿಗೆ ಒಳ್ಳೆಯ ಗುರುಗಳಾದ ಧರ್ಮಲಿಂಗ ಪಿಳ್ಳೈ ಎಂಬ ಗುರುಗಳ ಬಳಿ ಅಭ್ಯಾಸದಲ್ಲಿ ತೊಡಗಿಸಿಕೊಂಡಿದ್ದರು. ಅವರಲ್ಲಿ ಇರುವಂತಹ ಕಲೆ ಮತ್ತು ಆಸಕ್ತಿಯನ್ನು ಗುರುತಿಸಿ ಉತ್ತಮ ರೀತಿಯಲ್ಲಿ ಅಭ್ಯಾಸ ಮಾಡಲು ಸಹಕರಿಸಿದರು. ಪಾಠದ ವಿಷಯಕ್ಕೆ ಬಂದರೆ ವಸ್ತುಚಿತ್ರಣ ಹೂವಿನಕುಂಡ ಇಟ್ಟು ಇದನ್ನು ನೆರಳು ಬೆಳಕಿನ ಸಂಯೋಜನೆ ಮಾಡಿ ಚಿತ್ರ ಬರೆಯಲು ಹೇಳಿಕೊಡುತ್ತಿದ್ದರು ಜೊತೆಗೆ ಎಲ್ಲಾ ರೀತಿಯ ಮಾಧ್ಯಮದಲ್ಲಿ ಚಿತ್ರ ಬರೆಯಲು ಹೇಳಿಕೊಡುತ್ತಿದ್ದರು. ಪೆನ್ಸಿಲ್, ಕ್ರಯಾನ್ಸ್, ಜಲವರ್ಣಗಳಲ್ಲಿ ಚಿತ್ರ ರಚನೆ ಮಾಡುವುದಾಗಿ ಬೋಧಿಸುತ್ತಿದ್ದರು. ಈ ಎಲ್ಲಾ ಮಾಧ್ಯಮಗಳ ಚಿತ್ರರಚನೆ ಮಾಡುವ ಬಗೆಯನ್ನು ಗುರುಗಳು ಹೇಳಿಕೊಟ್ಟಿದ್ದರು. ಸ್ಕೂಲ್ ಮುಗಿದ ಮೇಲೆ ಮನೆಯಲ್ಲಿ ಗೃಹಪಾಠದ ತರಹ ಯಾವುದೇ ಶುಲ್ಕ ತೆಗೆದುಕೊಳ್ಳುತ್ತಿರಲಿಲ್ಲ. ಇವರು ಹೊಸ ಹೊಸ ರೀತಿಯಲ್ಲಿ ತಂತ್ರಗಳನ್ನು ಬಳಸಿಕೊಂಡು ಚಿತ್ರ ರಚಿಸುವುದನ್ನು ಗುರುಗಳ ಬಳಿ ಕಲಿತುಕೊಂಡರು.

ಎಂಟನೆಯ ತರಗತಿಯಲ್ಲಿರುವಾಗಲೇ ಟೆಕ್ನಿಕಲ್ ಪರೀಕ್ಷೆಯನ್ನು ತೆಗೆದುಕೊಂಡು ಸ್ಮರಣೆ ಚಿತ್ರದಲ್ಲಿ ಪಾಸ್ ಮಾಡಿಕೊಂಡಿದ್ದರು. ಅದರಲ್ಲಿನ ವಿಷಯ ಪ್ರಸ್ಪೆಕ್ಟಿವ್, ಅನಾಟಮಿ, ವಸ್ತುಚಿತ್ರ

ಇವುಗಳಲ್ಲಿ ಅನಾಟಮಿ ವಿಷಯದಲ್ಲಿ ಫೇಲ್ ಆಗುತ್ತಿದ್ದರು. ಅದರಲ್ಲಿ ಇಂಗ್ಲೀಷ್ ಬಳಕೆಯಿದ್ದರಿಂದ ಅವರು ಫೇಲ್ ಆಗುತ್ತಿದ್ದರು. ನಂತರ 10ನೇ ತರಗತಿಯ ಪರೀಕ್ಷೆ ವೇಳೆಯಲ್ಲಿ ಓದುವುದು ಬಿಟ್ಟು ಚಿತ್ರರಚನೆ ಮಾಡುತ್ತಿದ್ದರು. ಓದಲಿಲ್ಲ ಆದ್ದರಿಂದ ಫೇಲ್ ಆದೆ ನಂತರ ಮದ್ರಾಸನಲ್ಲಿ ಸ್ಕೂಲ್ ಆಫ್ ಆರ್ಟ್ ಕಾಲೇಜಿಗೆ ಸೇರಿ ಅಲ್ಲಿ ಕೇವಲ ಒಂದು ವರ್ಷ ಕಲಿತೆ ಅಲ್ಲಿ ವಸ್ತು ಚಿತ್ರ, ಭಾವಚಿತ್ರ, ನಿಸರ್ಗ ಚಿತ್ರ, ಪೂರ್ಣಶಿರ ಬಾವಚಿತ್ರಗಳನ್ನು ಕಲಿಸುತ್ತಿದ್ದರು. ಮುಂದೆ ಅಭ್ಯಾಸ ಮಾಡಲು ಸಾದ್ಯವಾಗಲಿಲ್ಲ ಅಷ್ಟಕ್ಕೆ ಶಿಕ್ಷಣವನ್ನು ನಿಲ್ಲಿಸಿ ಸಿನೆಮಾ ಪೋಸ್ಟರ್ ಬರೆಯಲು ಪ್ರಾರಂಭಿಸಿದೆ ಎಂದು ತಮ್ಮ ಶಿಕ್ಷಣದ ಬಗ್ಗೆ ಹೇಳಿದ್ದಾರೆ.

ಕ) ವೃತ್ತಿ ಜೀವನ

ಕೆ. ಎನ್. ರಾಮಚಂದ್ರನ್‌ರವರು ಕಲಾಭ್ಯಾಸವನ್ನು ಮುಗಿಸಿದ ನಂತರ ಜಯಲಕ್ಷ್ಮೀ ಅವರನ್ನು ಬಾಳಸಂಗಾತಿಯನ್ನಾಗಿ ಕೈಹಿಡಿದು ಅವರು ಸಹ ಇವರ ಕಲೆಯನ್ನು ಪ್ರೋತ್ಸಾಹಿಸುತ್ತ ಒಳ್ಳೆಯ ಮಾರ್ಗದರ್ಶಕಿಯಾದ ಇವರ ಪತ್ನಿ ಎಂ. ಎ ಪದವಿದರರು. ರಾಮಚಂದ್ರನ್‌ರವರಿಗೆ ಕಲಾಕೃತಿಗಳನ್ನು ರಚಿಸುವುದು ಬಿಟ್ಟರೆ ಬೇರೆ ಯಾವ ಕೆಲಸಕ್ಕೆ ಕೈ ಹಾಕುತ್ತಿರಲಿಲ್ಲ. ಹೀಗೆ ಅವರು ಕಲಾಕೃತಿಗಳನ್ನು ರಚನೆ ಮಾಡುತ್ತಾ ಬಂದರು.

ನಂತರದ ದಿನಗಳಲ್ಲಿ ಮದ್ರಾಸ್‌ನಿಂದ ಕರ್ನಾಟಕಕ್ಕೆ ಬಂದರು. ಇವರು ಬೆಂಗಳೂರಿನಲ್ಲಿ ಮೊದಲು ಬ್ಯಾನರ್ ಆರ್ಟ್‌ನಲ್ಲಿ ಕೆಲಸ ಮಾಡುತ್ತಾ ಇದ್ದರು. ಮೊದಲು ಮುಖದ ಭಾವಚಿತ್ರ ಬಿಡಿಸಲು ಬರುತ್ತಿರಲಿಲ್ಲ ಹಾಗಾಗಿ ಇವರ ಗುರುಗಳು ಕಟ್‌ಔಟ್‌ಗಳ ಬಟ್ಟೆಗಳಿಗೆ ಬಣ್ಣ ತುಂಬಲು ಬಿಡುತ್ತಿದ್ದರು. ಇವರು ಅದರಲ್ಲಿ ನಿಪುಣರಾಗಿದ್ದರು. ಹೊಸ ಹೊಸ ಬಣ್ಣಗಳನ್ನು ಬಳಕೆ ಮಾಡಿಕೊಂಡು, ತಂತ್ರ ಮೈವಳಿಕೆಯನ್ನು ಕಟ್‌ಔಟ್‌ನಲ್ಲೇ ಪ್ರಯೋಗಗಳನ್ನು ಮಾಡುತ್ತಾ ಬಂದರು. ನಂತರದಲ್ಲಿ ಗುರುಗಳು ಇವರು ಕೈ ಚಳಕದಲ್ಲಿ ತಯಾರಾದ ಚಿತ್ರವನ್ನು ನೋಡಿ ಪೂರ್ತಿ ಕಟ್‌ಔಟ್ ಮಾಡಲು ಬಿಡುತ್ತಿದ್ದರು. ದೊಡ್ಡ ದೊಡ್ಡ ಡ್ರಮ್‌ಗಳಲ್ಲಿ ಬಣ್ಣಗಳನ್ನು ಮಿಶ್ರಣ ಮಾಡಿಕೊಂಡು ಒಂದು ದಿನ ಬಿಟ್ಟು ನಂತರದಲ್ಲಿ ಲೇಪನ ಮಾಡಿ ಸುಂದರವಾದ ಕಟ್‌ಔಟ್ ಮಾಡುತ್ತಿದ್ದರು. ಹೀಗೆ ಡಾ॥ ರಾಜ್‌ಕುಮಾರ್‌ರವರ ಪರಿಚಯವಾಗಿ ನಂತರ ಸ್ನೇಹವಾಗಿ ಬೆಳೆಯಿತು. ಅವರು ನಟಿಸಿದ ಚಿತ್ರಗಳಲ್ಲಿ ಕೆಲಸಮಾಡಲು ಅವಕಾಶ ಕೊಟ್ಟರು. ರಾಜಕುಮಾರ್ ನಟಿಸಿದ ಚಿತ್ರಗಳಿಗೆ ಹಲವಾರು ಬ್ಯಾನರ್ ರಚನೆ ಮಾಡಿದರು. ಬೆಂಗಳೂರಲ್ಲೇ ವರದರಾಜು ಎಂಬುವರ ಕಂಪನಿಯಲ್ಲಿ ಕೆಲಸ ಮಾಡುವಂತೆ ರಾಜ್‌ಕುಮಾರ್‌ರವರು ಶಿಫಾರಸ್ಸು ಮಾಡಿದರು. ಅವರ ಕಂಪನಿಯಲ್ಲಿ ಹೆಚ್ಚು ಚಿತ್ರಗಳಲ್ಲಿ ಕೆಲಸ ಮಾಡಿದ ಕೀರ್ತಿ ಇವರಿಗೆ ಸಲ್ಲುತ್ತದೆ.

ಇವರು ಮೂಲತಃ ತಮಿಳುನಾಡಿನವರು, ಇವರ ಜೀವನ ಮೆಟ್ಟಿಲು ಏರಿದ್ದು ಅನ್ನ ಕೊಟ್ಟು ನೆಲೆ ಕೊಟ್ಟ ಊರು ಬೆಂಗಳೂರು. ಹಾಗಾಗಿ ನಾನು ಈ ನಗರಕ್ಕೆ ಋಣಿ ಯಾಗಿರುತ್ತೇನೆಂದು ಸದಾ ಹೇಳುತ್ತಾರೆ. ಅಲ್ಲಿಗೂ ಇಲ್ಲಿಗೂ ಹೋಲಿಸಿದರೆ ಇಲ್ಲಿ ಕೆಲಸಕ್ಕೆ ತಕ್ಕಂತೆ ಹಣ ಕೊಡುತ್ತಾರೆ. ಇಲ್ಲಿನ ಕೆಲಸ ಸಮಯ ಪಾಲನೆಯನ್ನು ಇಷ್ಟಪಡುತ್ತಿದ್ದರು. ಇವರು ಮೊದಲು ಜೀವನೋಪಾಯಕ್ಕಾಗಿ ಕಟ್‌ಔಟ್ ಬರೆಯಲು ಸೇರಿಕೊಂಡಿದ್ದು ನಂತರದ ದಿನಗಳಲ್ಲಿ ಬ್ಯಾನರ್ ಬರೆಯಲು ತೊಡಗಿದರು. ಇವರಿಗೆ ಇದೇ ಒಂದು ದೊಡ್ಡ ವಿಶ್ವವಿದ್ಯಾಲಯವಿದ್ದಂತೆ ಬ್ಯಾನರ್‌ನಲ್ಲಿ ಬರೆದಿರುವಂತಹ ಚಿತ್ರಗಳು ಜನರನ್ನೂ ಆಕರ್ಷಿಸುತ್ತಿದ್ದವು. ನಿಂತು ನೋಡುವಂತೆ ಇವರು ಬ್ಯಾನರ್‌ಗಳನ್ನು ಬರೆಯುತ್ತಿದ್ದರು.

ನಂತರದ ದಿನಗಳಲ್ಲಿ ಇವರು ನೂರರಿಂದ ಇನ್ನೂರು ಅಡಿ ಎತ್ತರದ ರಾಜ್‌ಕುಮಾರ್, ಜಯಲಲಿತಾ, ಅಮಿತಾಬ್ ಬಚ್ಚನ್‌ರಂತಹ ಕಟ್‌ಔಟ್‌ಗಳನ್ನು ತಯಾರಿಸುತ್ತಿದ್ದರು. ಕಟ್ಟಡಗಳ ಎತ್ತರಕ್ಕೆ ಇವರು ಬರೆದಿರುವಂತಹ ಕಟ್‌ಔಟ್‌ಗಳನ್ನು ರಾರಾಜಿಸುವಂತೆ ಮಾಡಿದ್ದಾರೆ. ರಾಮಚಂದ್ರನ್‌ರವರು ಹೇಳುವಂತೆ ಒಂದು ಶಿಲ್ಪ ರಚನೆಯ ಹಿನ್ನೆಲೆಯಲ್ಲಿ ಸಾವಿರಾರು ಉಳಿಪೆಟ್ಟು ಬಿದ್ದ ಮೇಲೆ ಅದು ಒಂದು ಸುಂದರ ಮೂರ್ತಿ ಶಿಲ್ಪವಾಗುವುದೋ ಅದೇ ರೀತಿ ಒಂದು ಕಲಾಕೃತಿಯ ರಚನೆಯಲ್ಲಿ ರೇಖಾ ವರ್ಣಗಳ ಸಂಯೋಜನೆಯಲ್ಲಿ ಒಂದು ಸುಂದರ ಕಲಾಕೃತಿಯಾಗಲು ಸಾಧ್ಯವೆಂದು ಹೇಳುತ್ತಾರೆ.

ಕಾಲಗತದಲ್ಲಿ ಪೇಂಟರ್ ಅಂದರೆ ಮನೆಗೋಡೆಗಳಿಗೆ ಬಣ್ಣ ಬಳಿಯವರೆಂದು ಸಾಮಾನ್ಯವಾಗಿ ತಿಳಿಯುತ್ತಾರೆ. ಯಾರು ಬೇಕಾದರೂ ಗೋಡೆಗಳಿಗೆ ಬಣ್ಣ ಬಳಿಯಬಹುದು. ಆದರೆ ಚಿತ್ರಕ್ಕೆ ಬಣ್ಣ ಲೇಪನ ಮಾಡಿ ಅದನ್ನು ಸುಂದರಗೊಳಿಸುವುದು ಕೆಲವೊಬ್ಬರು ಮಾತ್ರವಿದ್ದು ಅಂತವರು ಚಿತ್ರಕಲಾವಿದರು ಎನಿಸಿಕೊಳ್ಳುವರು. ಅದರಲ್ಲಿ ಉತ್ತಮ ಕಲಾವಿದನಾಗಲು ಸತತ ಪರಿಶ್ರಮ, ಶ್ರದ್ಧೆ, ಆಸಕ್ತಿ, ಅಭ್ಯಾಸವನ್ನು ಮಾಡಿದಾಗ ಮಾತ್ರ ಅವರು ಜಗತ್ತಿನಲ್ಲಿ ಉತ್ತಮ ಕಲಾವಿದರಾಗಲು ಸಾಧ್ಯ. ಉದಾ : ಎಸ್.ಎಂ. ಪಂಡಿತ್, ರಾಜಕವಿವರ್ಮ, ಆರ್. ಎಂ. ಹಡಪದ, ಕೆ. ವೆಂಕಟಪ್ಪ, ಜೆ. ಎಂ. ಎಸ್. ಮಣಿ, ಎಂ. ಎಫ್. ಹುಸೇನ್ ಇನ್ನೂ ಮುಂತಾದ ಕಲಾವಿದರ ಸಾಲುಗಳಲ್ಲಿ ಕೆ. ಎನ್. ರಾಮ್‌ಚಂದ್ರನ್ ಒಬ್ಬರೆಂದು ಎಂದು ಹೇಳಬಹುದು.

ಕೆ. ಎನ್. ರಾಮ್‌ಚಂದ್ರನ್ ಅವರು ಇಲ್ಲಿಯವರೆಗೆ ಸುಮಾರು 65 ಸಾವಿರಕ್ಕೂ ಹೆಚ್ಚು ಬ್ಯಾನರ್‌ಗಳನ್ನು ಬರೆದಿದ್ದಾರೆ. ಇತ್ತೀಚೆಗೆ ಮಗನ ಒಂದು ಪ್ರಾಜೆಕ್ಟ್‌ಗೆ ಒಂದು ವಿಷಯ ಕೊಟ್ಟಿದ್ದರು. ವಿಷಯ "ಭಾರತದಲ್ಲಿ ಬ್ಯಾನರ್ ಆರ್ಟ್" ಯಾವ ರೀತಿ ಬೆಳೆಯಿತು. ಮತ್ತು ಸಿನಿಮಾಗೂ ಅದಕ್ಕೂ ಯಾವ ರೀತಿ ಸಂಬಂಧದಲ್ಲಿ ಪ್ರಚಾರ ನೀಡಿತು ಎಂಬುದರ ಬಗ್ಗೆ ಬ್ಯಾನರ್‌ನಲ್ಲಿ ರಚನೆ ಮಾಡಲು ತಂದೆಗೆ ಹೇಳಿದ್ದರು. ಇದನ್ನು 30 ಥ 12 ಅಡಿ ದೊಡ್ಡದಾದ ಬ್ಯಾನರ್‌ನಲ್ಲಿ ರಚಿಸಿದ್ದರು. ಈ ಬ್ಯಾನರ್ ಚಿತ್ರ "ಫ್ರಾನ್ಸ್" ದೇಶದಲ್ಲಿ ಪ್ರದರ್ಶನಗೊಂಡು ಅಲ್ಲಿನ ಜನರ ಮೆಚ್ಚುಗೆಗೆ ಪಾತ್ರವಾಯಿತ. ಹೀಗೆ ಬ್ಯಾನರ್ ಆರ್ಟ್ ಬರೆಯುವಲ್ಲಿ ಹೊಸ ಹೊಸ ಪ್ರಯೋಗಗಳನ್ನು ಮಾಡುವಲ್ಲಿ ಇವರು ನಿಪುಣತೆಯನ್ನು ಗಳಿಸಿದ್ದರು. ವಿಭಿನ್ನ ಶೈಲಿಯಿಂದ ಮಾಡಿದಂತಹ ಬ್ಯಾನರ್‌ಗಳಲ್ಲಿ "ಒಂದಾನೊಂದು ಕಾಲದಲ್ಲಿ" ಚಿತ್ರವೊಂದರ ಬ್ಯಾನರ್ ಎಸ್. ಜಿ. ವಾಸುದೇವನ್‌ರವರು ಇದಕ್ಕೆ ಕಲಾ ನಿರ್ದೇಶಕರಾಗಿದ್ದ ಇವರು ಒಂದು ಚಿಕ್ಕದಾಗಿ ಚಿತ್ರ ರಚಿಸಿ ಇದನ್ನು ಬ್ಯಾನರ್ ಮಾಡಿಕೊಡು ಎಂದು ಕೇಳಿದ್ದರು. ಚಿತ್ರ ನೋಡಲು ಅಬ್‌ಸ್ಟ್ರಾಕ್ಟ್ (ಅಮೂರ್ತ ಕಲೆಯಾಗಿದ್ದರಿಂದ ಅದು ನೋಡಲು ತುಂಬಾ ಆಕರ್ಷಣೀಯವಾಗಿತ್ತು. ಇವರಿಗೆ ತುಂಬಾ ಇಷ್ಟವಾಗಿ ಸರಿ ಪ್ರಯತ್ನ ಮಾಡುತ್ತೇನೆಂದು ಒಪ್ಪಿಕೊಂಡು 2 ಥ 10 ಅಡಿ ಎತ್ತರದಲ್ಲಿ ಚಿತ್ರ ರಚನೆ ಮಾಡಿದರು ಚಿತ್ರನೋಡಿ. ಎಸ್ ಜಿ ವಾಸುದೇವರವರು ನನ್ನ ಕಲ್ಪನೆ ಮೀರಿ ಚೆನ್ನಾಗಿ ಚಿತ್ರ ರಚನೆ ಮಾಡಿದ್ದೀರಿ ಎಂದರು. ನಂತರ ಅವರು ನಿಮ್ಮದೇ ಆದ ಸ್ವಂತ ಹೊಸ ಆಲೋಚನೆಯಲ್ಲಿ ಮತ್ತೊಂದು ಚಿತ್ರ ರಚನೆ ಮಾಡಿಕೊಡಿ ಎಂದು ಕೇಳಿದಾಗ ಹೊಸ ರೀತಿಯಲ್ಲಿ ಮನೋಟೋನ್‌ನಲ್ಲಿ ಬ್ರಶ್ ಬಳಸದೇ ಸ್ಪಂಜ್ ಬಳಸಿ ಅದರ ಒಳಗೆ ಹೋಲ್ ಮಾಡಿ ಒಂದೇ ಟೋನ್‌ನಲ್ಲಿ ಬಿಳಿವರ್ಣ ಬಳಸದೇ ಒಂದೇ ಬಣ್ಣವನ್ನು ಬಳಸಿಕೊಂಡು, ಸ್ಪಂಜ್‌ನಲ್ಲಿ ಹೊಸ ಪ್ರಯೋಗ ಮಾಡಿದರು. ಲೈಟ್ ಡಾರ್ಕ್, ಟೋನ್‌ಗಳಲ್ಲಿ ತಂತ್ರಗಾರಿಕೆಯನ್ನು ಬಳಸಿ ಒಂದು ವಿಭಿನ್ನ ರೀತಿಯಲ್ಲಿ ಚಿತ್ರ ರಚನೆ ಮಾಡಿಕೊಟ್ಟಾಗ ಇದಕ್ಕೆ ಒಳ್ಳೆಯ ಪ್ರತಿಕ್ರಿಯೆ ದೊರೆಯಿತು.

ಅಂತಹದೇ ಇನ್ನೊಂದು ಚಿತ್ರ ರಚನೆ ಎಂದರೆ ಕಪ್ಪು ಬಿಳುಪಿನ ವರ್ಣದಲ್ಲಿ ಮಾಡಿದ್ದು, ಎತ್ತರದ ಕಟ್‌ಔಟ್ ಇದಾಗಿದ್ದು, ವಿಭಿನ್ನ ಶೈಲಿಯಿಂದ ತಂತ್ರಗಳನ್ನು ಬಳಕೆ ಮಾಡಿಕೊಂಡ ಚಿತ್ರವಾಗಿತ್ತು. 10 ಥ 15 ಅಡಿ ದೂರದಿಂದ ನೋಡಿದಾಗ ಅದು ಕಪ್ಪು ಬಿಳುಪಿನ ಚಿತ್ರದ ರೂಪದಲ್ಲಿ ಗೋಚರಿಸುತ್ತಿತ್ತು. ಹತ್ತಿರದಲ್ಲಿ ನಿಂತು ನೋಡಿದರೆ ಅದು ವರ್ಣಮಿಶ್ರಿತ ಮಾಡಿಕೊಂಡ ಚಿತ್ರದಂತೆ ಕಾಣುತ್ತಿತ್ತು. ಇದರಲ್ಲಿ ಯಾವ ತಂತ್ರಗಾರಿಕೆಯನ್ನು ಬಳಸಿದ್ದಾರೆಂದರೆ ಕಪ್ಪು ಕೆಂಪು ಮಿಶ್ರಣ ಮಾಡಿದಾಗ ಕಡುಗೆಂಪು ಬಣ್ಣದ ರೀತಿಯಲ್ಲಿ ಕಾಣುತ್ತಿತ್ತು. ಒಂದು ರೀತಿಯ ಗ್ರೇ ಬಣ್ಣ ಗುಲಾಬಿ ಬಣ್ಣದಲ್ಲಿಯೂ ಕಾಣುತ್ತಿತ್ತು. ದೂರದಲ್ಲಿ ನಿಂತು ನೋಡಿದರೆ ಒಂದೇ ಚಿತ್ರ ಕಪ್ಪು ಬಿಳುಪು ವರ್ಣದಲ್ಲಿ ಮಾಡಿದ ಹಾಗೆ ಗೋಚರಿಸುವಂತಹ ಹೊಸ ಪ್ರಯತ್ನ ಮಾಡಿದ್ದರು.

ಇವರು ರಚಿಸಿರುವಂತಹ ಕಟ್‌ಔಟ್‌ಗಳಲ್ಲಿ ಅತ್ಯಂತ ಎತ್ತರವಾದದ್ದು, ಸುಮಾರು 168 ಅಡಿಯಿದ್ದು, ಬರೆಯಲು ಮೊದಲು ಗ್ರಾಫ್ ನಕ್ಷೆಯನ್ನು ರಚಿಸಿ, ರೇಖೆಯ ಮುಖಾಂತರ ವಿನ್ಯಾಸಗೊಳಿಸಿ ಹುಡುಗರಿಗೆ ಬಣ್ಣಹಚ್ಚಲು ಬಿಡುತ್ತಿದ್ದರು. ನಂತರ ಇವರು ಪ್ಯಾಲೇಟ್‌ನಲ್ಲಿ ಬಣ್ಣ ಮಿಶ್ರಣ ಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲವೆಂದು 4 ಡ್ರಮ್‌ನಲ್ಲಿ ಬಣ್ಣಗಳನ್ನು ಒಂದು ದಿನ ಪೂರ್ತಿ ಮಿಶ್ರಣ ಮಾಡಿಕೊಂಡು ಚಿತ್ರವನ್ನು ಪೂರ್ಣ ಮಾಡಿದರು. ಇದೊಂದು ವಿಭಿನ್ನಾತ್ಮಕವಾಗಿ ಚಿತ್ರ ಮೂಡಿಬಂದಿದ್ದು, ಇದು ನೋಡುಗರ ಗಮನ ಸೆಳೆಯುವಂತಹ ಚಿತ್ರವಾಗಿದು, ರಾಜಕೀಯ ಪ್ರಚಾರಕ್ಕೆಂದು ಬರೆಸಿದ ಚಿತ್ರ ಇದಾಗಿತ್ತು.

ಹೀಗೆ ಇವರು ಕನ್ನಡ ಚಿತ್ರರಂಗದಲ್ಲಿ ಅತಿ ಹೆಚ್ಚು ಕೆಲಸ ಮಾಡಿದ್ದುಂಟು. ರಾಜ್‌ಕುಮಾರ್‌ರವರ ಮೊದಲ ಚಿತ್ರ ಬೇಡರಕಣ್ಣಪ್ಪದಿಂದ ಹಿಡಿದು ಭಲೇ ಜೋಡಿ, ದಾರಿತಪ್ಪಿದ ಮಗ ಹೀಗೆ ಶೇ 99ರಷ್ಟು ಸಿನಿಮಾಗಳಿಗೆ ಇವರು ಬ್ಯಾನರ್ ರಚಿಸಿದ್ದಾರೆ. ಅಲ್ಲದೇ ವಿಷ್ಣುವರ್ಧನ್ ಸಿನಿಮಾಗಳಿಗೂ ಬ್ಯಾನರ್ ರಚನೆ ಮಾಡಿರುವುದನ್ನು ನೆನಪಿಸಿಕೊಳ್ಳುತ್ತಾರೆ.

ಇವರು ಬ್ಯಾನರ್ ಮಾಧ್ಯಮಕ್ಕೆ ಬರುವ ಮುಂಚೆ ಮೊದಲಿನಿಂದಲೂ ಚಿತ್ರಗಳನ್ನು ರಚಿಸಿಕೊಂಡು ಬಂದಿರುವುದುಂಟು. ಸ್ಕೂಲ್ ಆಫ್ ಆರ್ಟ್‌ಗೆ ಹೋಗುವ ಸಮಯದಲ್ಲಿ ಪೇಂಟಿಂಗ್ (ಲ್ಯಾಂಡ್ ಸ್ಕೇಪ್) ಪ್ರಕೃತಿ ಚಿತ್ರಣ ಮಾಡುವುದಾಗಿದೆ. ಕೆಲಸ ಮಾಡುತ್ತಾ ಬಿಡುವಿನ ವೇಳೆಯಲ್ಲಿ ಕಣ್ಣಿಗೆ ಸುಂದರವಾದ ದೃಶ್ಯಗಳು ಕಂಡರೆ ಅಲ್ಲಿಯೇ ಸ್ಥಳದಲ್ಲಿ ಕೂತು ಚಿತ್ರ ರಚನೆ ಮಾಡುವ ಹವ್ಯಾಸ ಈಗಲೂ ಇವರಲ್ಲಿದೆ.

ಹೀಗೆ ಇವರು ಮಾಡಿರುವ ಸುಂದರ ಕಲಾಕೃತಿಗಳನ್ನು ಚೆನ್ನೈನ ವಿಕ್ಟೋರಿಯಾ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್‌ನಲ್ಲಿ ಕಲಾಕೃತಿಗಳ ಪ್ರದರ್ಶನ ಮಾಡುತ್ತಿದ್ದರು. ಆಗ ಇವರಿಗೆ 40 ರೂ ದೊರೆಯುತ್ತಿತ್ತು. ಹೀಗೆ ಬ್ಯಾನರ್ ಆರ್ಟ್ ಜೊತೆಯಲ್ಲೇ ಚಿತ್ರಕಲೆಯನ್ನು ಮುಂದುವರೆಸಿಕೊಂಡು ಬಂದರು.

ಬೆಂಗಳೂರಿಗೆ ಬಂದ ನಂತರ ಕಲಾಕೃತಿ ರಚಿಸುವುದನ್ನು ಕೆಲಕಾಲ ನಿಲ್ಲಿಸಿದರು ಕಾರಣ ಬ್ಯಾನರ್ ಬರೆಯಲು ಸಮಯವೇ ಸಾಕಾಗುತ್ತಿರಲಿಲ್ಲವೆಂದು ಚಿತ್ರಕಲೆಯಿಂದ ದೂರ ಸರಿದರು. ಇಂತಹ ಸಮಯದಲ್ಲಿ ಪರಿಚಯವಾದವರು ಆರ್. ಎಂ ಹಡಪದ್ ಮತ್ತು ಜಿ. ಎಸ್. ಶೆಣೈರವರು ಇವರು ರಾಮಚಂದ್ರನ್‌ನವರು ಬ್ಯಾನರ್ ರಚಿಸುವ ಸ್ಥಳಕ್ಕೆ ಹೋಗಿ ನೀವು ಇದರ ಜೊತೆಗೆ ಕಲಾಕೃತಿಗಳನ್ನು ರಚಿಸಲು ಬಿಡಬೇಡಿ ಎಂದು ತುಂಬಾ ಪ್ರೋತ್ಸಾಹ ನೀಡಿದರು. ಇವರ ಪರಿಚಯ ಸ್ನೇಹವಾಗಿ ಬೆಳೆದು ಉತ್ತಮ ಚಿತ್ರಗಳನ್ನು ರಚನೆ ಮಾಡಲು ಮುಖ್ಯಕಾರಣವಾಯಿತು.

ಜಿ. ಎಸ್. ಶೆಣೈರವರು ಕಲಾಮೇಳದಲ್ಲಿ ರಾಮಚಂದ್ರನ್‌ರವರಿಗೆ ಒಂದು ಮಾತು ಹೇಳಿದರು. ನೀವು ಬ್ಯಾನರನ್ನೆ ಈ ಕಲಾಮೇಳದಲ್ಲಿ ರಚಿಸಿ ಎಂದು ಸೂಚಿಸಿದ್ದರು. ಅದಕ್ಕೆ ರಾಮಚಂದ್ರನ್‌ರವರು ರಾಜ್‌ಕುಮಾರ್ ಚಿತ್ರವನ್ನೆ ಬ್ಯಾನರ್‌ನಲ್ಲಿ ರಚಿಸಿದ್ದರು. ಎಲ್ಲರೂ ಅದನ್ನು ನೋಡಿ ಖುಷಿಪಟ್ಟರೆಂದು ತಿಳಿಸಿದರು. ಮೇಳಕ್ಕೆ ಭೇಟಿ ನೀಡಿದ ಕೆ. ಕೆ. ಹೆಬ್ಬಾರರವರು ಅದೇನಪ್ಪ ಬ್ರಶ್ ಎಲ್ಲಿ ಬೇಕೋ ಅಲ್ಲಿ ಬಂದು ನಿಲ್ಲುತ್ತದಲ್ಲ ಎಂದು ರಾಮಚಂದ್ರನ್‌ರವರಿಗೆ ಹೇಳಿದರಂತೆ ಈ ರೀತಿಯಾಗಿ ರಾಮಚಂದ್ರನ್‌ರವರು ಬ್ಯಾನರ್ ಆರ್ಟ್ ಜೊತೆಯೆಲ್ಲಿಯೇ ನೈಜ ಚಿತ್ರಕಲೆಯಲ್ಲಿಯೂ ಸಹ ಮುಂಚೂಣಿಯಲ್ಲಿದ್ದಾರೆ.

ರಾಮಚಂದ್ರನ್‌ರವರು ಕರ್ನಾಟಕದ ಹಿರಿಯ ನೈಜಚಿತ್ರಕಾರರ ಹೆಸರುಗಳ ಸಾಲುಗಳಲ್ಲಿ ಇವರ ಹೆಸರನ್ನು ದೃಢೀಕರಿಸಬಹುದೆಂದು, ಇವರು ರಚನೆ ಮಾಡಿರುವಂತಹ ಚಿತ್ರಗಳು ಸಮಾಜದಲ್ಲಿ ಜೀವನದಲ್ಲಿ ನಡೆದು ಬರುವ ಸನ್ನಿವೇಶಗಳನ್ನು ಅಲ್ಲಿನ ಪರಿಸರವನ್ನು ಗಮನದಲ್ಲಿಟ್ಟುಕೊಂಡು ಚಿತ್ರ ಬರೆಯುತ್ತಿದ್ದರು. ಜನಸಾಮಾನ್ಯರಿಗೆ ಬಹು ಬೇಗನೆ ಅರ್ಥಮಾಡಿಕೊಳ್ಳುವಂತ ಇವರ ಚಿತ್ರಗಳಿರುತ್ತಿದ್ದವು.

ಮೊದಲಿನಿಂದ ಬ್ಯಾನರ್ ಆರ್ಟ್‌ನಲ್ಲಿ ಪಳಗಿದ್ದರಿಂದ ಇವರು ಕಲಾಕೃತಿಯ ರಚನೆಯ ಸಂದರ್ಭಗಳಲ್ಲಿ ಹೊಸ ಹೊಸ ತಂತ್ರಗಾರಿಕೆಯಿಂದಾ ಪ್ರಯೋಗಾತ್ಮಕವಾಗಿ ರಚನೆ ಮಾಡುತ್ತಿದ್ದರು. ವರ್ಣಗಳ ಬಳಕೆಯಂತು ನೋಡಲು ತುಂಬಾ ಆಕರ್ಷಣೀಯವಾಗಿರುತ್ತಿದ್ದವು. ಚಿಕ್ಕ ಮಕ್ಕಳಿಂದ ಹಿಡಿದು ಹಿರಿಯ ವ್ಯಕ್ತಿಗಳವರೆಗೂ ಅರ್ಥಮಾಡಿಕೊಳ್ಳುವಂತ ಚಿತ್ರಗಳು ಇವರದ್ದಾಗಿರುತ್ತಿದ್ದವು. ಪರಿಸರ ಪ್ರೇಮಿಯಾಗಿದ್ದರಿಂದ ಅಲ್ಲಿಯ ದೃಶ್ಯಗಳನ್ನು ಬಹಳ ಆಸಕ್ತಿಯಿಂದ ಇಷ್ಟಪಟ್ಟು ವೀಕ್ಷಣೆ ಮಾಡುತ್ತಿದ್ದರು. ಮನೆಗೆ ಬಂದಮೇಲೆ ಮನಸ್ಸಿನಲ್ಲಿ ಹೊಸ ಹೊಸ ರೀತಿಯಾಗಿ ಕಲ್ಪನೆ ಮಾಡಿಕೊಂಡು ಹೊಸ ಪ್ರಯೋಗಮಾಡಿ ಚಿತ್ರ ರಚನೆ ಮಾಡುತ್ತಿದ್ದರು. ಇವರ ಊರಿನಲ್ಲಿ ಸಮುದ್ರ ತೀರದ ಬೋಟ್‌ಗಳು, ಸೂರ್ಯಸ್ತ, ಇವುಗಳ ಸನ್ನಿವೇಶಗಳನ್ನು ಹೆಚ್ಚಾಗಿ ರಚನೆ ಮಾಡುತ್ತಿದ್ದರು. ಸುಮಾರು 3000ಕ್ಕೂ ಹೆಚ್ಚು ಹಡಗು ಚಿತ್ರಗಳನ್ನು ಇವರು ರಚಿಸಿದ್ದಾರೆ. ಇವರನ್ನು (ಬೋಟ್) ಹಡಗು ಕಲಾವಿದ ಎಂದು ಕರೆಯುತ್ತಾರೆ. ಇವರ ತಾತನ ಮನೆ ನದಿಯಾಚೆ ಇದ್ದ ಕಾರಣ ಇವರು ಪ್ರತಿನಿತ್ಯ ನೀರು ಕಡಿಮೆ ಇದ್ದಾಗ ಪುಸ್ತಕಗಳನ್ನು ತೆಲೆಯ ಮೇಲಿಟ್ಟುಕೊಂಡು ನದಿಯಲ್ಲಿ ನಡೆದು ತನ್ನ ಅಜ್ಜನ ಮನೆಗೆ ತೆರಳುತ್ತಿದ್ದರು. ಆಗ ಇವರಿಗಿಂತ ದೊಡ್ಡವರಿದ್ದರೂ ಅವರೊಂದಿಗೆ ಒಂದಾಗಿ ಕೈ ಹಿಡಿದು ದಡ ಸೇರುತ್ತಿದ್ದರು. ನೀರಿನ ಮಟ್ಟ ಹೆಚ್ಚಾದಾಗ ಹಡಗುಗಳ ಮೂಲಕ ಪ್ರಯಾಣ ಮಾಡುತ್ತಿದ್ದರು. ಇವರಿಗೆ ನೀರಿನ ಸೆಳೆತ ಮತ್ತು ಆ ನೀರಿನ ಏರಿಳಿತಗಳು ಒಂದು ಬಗೆಯ ನೃತ್ಯದಂತೆ ಕಾಣತಿತ್ತು ಎಂದು ಹೇಳುತ್ತಾರೆ.

ಅವರ ಸ್ನೇಹಿತ ಮನೆಯವರ ಮುಖ್ಯ ಕಸುಬು ಮೀನುಗಾರಿಕೆಯಾದ್ದರಿಂದ. ಅವರ ಹತ್ತಿರ ದೊಡ್ಡ ದೊಡ್ಡ ಹಡಗುಗಳಿದ್ದು ಸಮುದ್ರಕ್ಕೆ ಹೋಗುತ್ತಿದ್ದರು. ರಾಮಚಂದ್ರನ್‌ರವರು ರಜೆ ಇದ್ದಾಗಲೆಲ್ಲ ಸ್ನೇಹಿತರ ಜೊತೆಗೂಡಿ ಹಡಗಿನಲ್ಲಿ ಹೋಗುತ್ತಿದ್ದರು. ಹಡಗು ಬಂದರುಗಳಲ್ಲಿ ಸಾಕಷ್ಟು ಬೋಟ್‌ಗಳು ನಿಂತಿರುವುದನ್ನು ನೋಡುತ್ತಿದ್ದರು. ಅವುಗಳ ಪ್ರೇರಣೆಯಿಂದ ಬೋಟ್ ಚಿತ್ರಗಳನ್ನು ರಚಿಸಲು ಮುಖ್ಯ ಕಾರಣವಾಯಿತು. ಈಗಲೂ ಕೂಡ ಎಲ್ಲಾದರೂ ಮೋಡಗಳಲ್ಲಿ ಹಡಗುಗಳ ಚಿತ್ರ ರಚಿಸುತ್ತಾರೆ.

ರಾಮಚಂದ್ರನ್‌ರವರು ಡ್ರೀಮ್‌ಸೀರಿಸ್ ವರ್ಕ್ ಸಹ ಮಾಡಿದ್ದಾರೆ. ಇವರು ಕನಸಿನ ಚಿತ್ರಗಳಲ್ಲಿ ದೇವತಾ ಮಾನವರ ಚಿತ್ರಗಳು ಕಿನ್ನರರ ಚಿತ್ರಗಳು ಮತ್ತು ರಚಿಸಿದ್ದಾರೆ. ಇವರು ಕಂಡ

ಕನಸನ್ನು ಕ್ಯಾನ್‌ವೇಸ್ ಮೇಲೆ ತಾವು ಚಿಕ್ಕಮಗುವಾಗಿ ಕುಂಚ ಹಿಡಿದು ಮಗು ತಾಯಿಯಕಡೆಗೆ ಬರುವಂತಹ ಸನ್ನಿವೇಶಗಳು ಹೀಗೆ ತಮ್ಮ ಕನಸನ್ನು ಕಲಾಕೃತಿಗಳಾಗಿ ಹೊರ ಮೂಡಿಸಿದ್ದಾರೆ.

ಮಾರುಕಟ್ಟೆಯ ಚಿತ್ರಗಳನ್ನು ಅತಿ ಹೆಚ್ಚು ಚಿತ್ರರೂಪದಲ್ಲಿ ತಂದಿರುವುದು ಅವರ ಸಾಕಷ್ಟು ಕಲಾಕೃತಿಗಳಲ್ಲಿ ನೋಡಬಹುದು. ಅದಕ್ಕೆ ಕಾರಣ ಇವರು ಪ್ರತಿನಿತ್ಯ ಮನೆಗೆ ಬೇಕಾದ ಸಾಮಾಗ್ರಿಗಳನ್ನು ತರಲು ಮಾರುಕಟ್ಟೆಗೆ ಹೋಗಿ ಬರುವಾಗ ಗಮನಿಸುತ್ತಿದ್ದಂತಹ ದೃಶ್ಯಗಳು ಇವರ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿದು ಕಲಾಕೃತಿಗಳಾಗಿ ಮೂಡಿ ಹೊರ ಬಂದಿವೆ. ಇಂತಹ ಕಲಾಕೃತಿಗಳು ತರಕಾರಿ ಮಾರುಕಟ್ಟೆಯ ದೃಶ್ಯಗಳು, ಹಣ್ಣಿನ ಅಂಗಡಿಗಳು, ಕುಂಕುಮ ವ್ಯಾಪಾರದ ದೃಶ್ಯ, ಹೂವಿನ ಮಾರಟಗಾರ್ತಿಯರ ಚಿತ್ರಗಳು, ಬಳೆ ಮಾರುವ ಸ್ತ್ರೀಯರ ಚಿತ್ರ, ಬಿಂದಿಗೆ ಮಾರುವವರ ಚಿತ್ರಗಳು ಹೀಗೆ ಇವರು ತಾವು ದಿನ ನಿತ್ಯ ಓಡಾಡುವ ಜಾಗದಲ್ಲಿ ಪ್ರತಿಯೊಂದು ಜಾಗವನ್ನು ಹೇಗೆ ಕಲಾತ್ಮಕವಾಗಿ ನೋಡುತ್ತಿದ್ದರೆನ್ನುವುದಕ್ಕೆ ಈ ಕಲಾಕೃತಿಗಳೂ ಕೈಗನ್ನಡಿಯಾಗಿವೆ. ಇವರ ಎಲ್ಲಾ ಕಲಾಕೃತಿಗಳಲ್ಲಿನ ಚಿತ್ರಗಳು ಎಲ್ಲೋ ಒಂದು ಕಡೆ ನಿಂತು ನೋಡುವ ತರಹ ಆ ಪಾತ್ರದಲ್ಲಿ ಮುಖ್ಯ ವ್ಯಕ್ತಿಯ ತಮ್ಮನ್ನು ಚಿತ್ರದಲ್ಲಿ ರೂಪಿಸಿಕೊಳ್ಳುತ್ತಿದ್ದರು.

ಮಾರುಕಟ್ಟೆಯಲ್ಲಿ ತಾವೆ ಸ್ವತಃ ತರಕಾರಿ ಮಾರುವವರಾಗಿ, ಬಿಂದಿಗೆ ಮಾರುವವರಾಗಿ, ಗ್ರಾಹಕನಾಗಿ ಹೀಗೆ ತಮ್ಮ ಪ್ರತಿಯೊಂದು ಕಲಾಕೃತಿಯಲ್ಲೂ ಸಹ ರಾಮಚಂದ್ರನ್‌ರವರು ತಮ್ಮ ಅನುಭವವನ್ನು ಕ್ಯಾನ್‌ವಾಸ್ ಮೇಲೆ ರಚಿಸಿದ್ದಾರೆ. ಇನ್ನೂ ಅನೇಕ ರೀತಿಯಿಂದ ಕಲಾಕೃತಿಗಳನ್ನು ರಚಿಸಿದ್ದು ದೀಪ ಹಿಡಿದ ಕನ್ಯೆಯರು, ಪೂಜೆ ಮಾಡುತ್ತಿರುವ ಸ್ತ್ರೀ, ಗ್ರಾಮೀಣ ಸೊಬಗಿನ ದೃಶ್ಯಗಳು, ನಗರ ಜೀವನ, ಕರಾವಳಿ ದೃಶ್ಯಗಳು, ಸಂತೆ, ಜನಪದ ಹಬ್ಬಗಳು, ಪ್ರಕೃತಿ ಚಿತ್ರಗಳು ಹೀಗೆ ಇನ್ನೂ ಹಲಾವಾರು ಚಿತ್ರಗಳನ್ನು ಇವರು ರಚಿಸಿದ್ದಾರೆ. ಒಟ್ಟಾರೆಯಾಗಿ ತಾವು ಕಂಡಂತಹ ದೃಶ್ಯಗಳನ್ನು ಸ್ವತಃ ಅವ್ಯಕ್ತವಾಗಿ ತಾವೆ ಆಗಿ ಅನುಭವಿಸಿ ರಚಿಸಿದಂತಹವುಗಳು ರಾಮಚಂದ್ರನ್‌ರ ಕಲಾಕೃತಿಗಳಾಗಿವೆ.

ಇತ್ತೀಚಿನ ದಿನಗಳಲ್ಲಿ ಅಬ್‌ಸ್ಟ್ರಾಕ್ ಚಿತ್ರಗಳು ತೆಲೆಯತ್ತಿ ಮೆರೆಯುವಂತೆ ರಚಿಸಿದ್ದಾರೆ. ಇವರು ಮನಸ್ಸಿನ ಖುಷಿಗೆ ಈ ಚಿತ್ರಗಳನ್ನು ರಚಿಸುತ್ತಿದ್ದಾರೆ. ಈ ಕಲಾಕೃತಿಗಳಲ್ಲಿ ಬಣ್ಣಗಳ ಏರಿಳಿತ ಮತ್ತು ಬಣ್ಣಗಳ ಸಮತೋಲನಗಳನ್ನು ಬಣ್ಣಗಳ ಸಮಾಗಮಗಳನ್ನು ಇವರು ತಮ್ಮ ಅಬ್‌ಸ್ಟ್ರಾಕ್ ಚಿತ್ರಗಳಲ್ಲಿ ಒಡಮೂಡಿಸಿದ್ದಾರೆ.

ಅಮೂರ್ತ ಕಲಾಕೃತಿಗಳ ಬಗ್ಗೆ ಹೇಳುವಾಗ ಈಗಿನ ಟ್ರೆಂಡ್‌ನ ಕಲಾವಿದರು, ಅಬ್‌ಸ್ಟ್ರಾಕ್ ಕಲಾಕೃತಿಗಳನ್ನು ರಚಿಸದಿದ್ದರೆ ಇವರು ಕಲಾವಿದರಲ್ಲವೆಂದು ತಿಳಿಯುದುಂಟು. ಅಬ್‌ಸ್ಟ್ರಾಕ್ ಚಿತ್ರಗಳನ್ನು ರಚಿಸಿದ್ದೇನೆ ಎಂದು ಹೇಳುತ್ತಾರೆ.

ಡ) ಮಿತ್ರ ಬಳಗ

ಇವರ ಊರಲ್ಲಿ ಇವರಿಗೆ ತುಂಬಾ ಜನ ಸ್ನೇಹಿತರಿದ್ದರು. ಅಷ್ಟೇ ಇಷ್ಟ ಪಡುತ್ತಿದ್ದರು. ಅವರಲ್ಲಿ ಯು ಎನ್ ರಾಮಚಂದ್ರನ್ ಅಂತ ಒಬ್ಬ ಸ್ನೇಹಿತರಿದ್ದರು. ಅವರೇ ಈ ಚಿತ್ರಕಲೆಗೆ ಬರುವುದಕ್ಕೆ ಕಾರಣವಾಗಿದ್ದು ಅವರು ಬರಹಗಾರರಾಗಿದ್ದರು. ಇವರಿಗೆ ಬೇಕಾಗುವಂತಹ ಬಣ್ಣ ಬ್ರೆಶ್‌ಗಳನ್ನು

ಅವರೇ ಇವರಿಗೆ ಕೊಡಿಸುತ್ತಿದ್ದರು. ನಾನು ಕಲಾವಿದನಾಗಲು ಇವರೇ ಕಾರಣ ಎಂದು ಸಾರಿ ಸಾರಿ ಹೇಳುತ್ತಿದ್ದರು. ನಂತರ ಬೆಂಗಳೂರಿಗೆ ಬಂದಾಗ ಕರ್ನಾಟಕದವರೆಲ್ಲರು ನನ್ನ ಸ್ನೇಹಿತರೆಂದು ಹೇಳುತ್ತಾರೆ. ಅವರಲ್ಲಿ ಮೊದಲು ಲಿಂಗದೇವರು ಪರಿಚಯದಿಂದ ಸ್ನೇಹಿತರಾಗಿ ಉತ್ತಮ ರೀತಿಯಲ್ಲಿ ಕಲಾಕೃತಿಗಳನ್ನು ರಚಿಸಲು ಕಾರಣರಾದರು. ನಂತರ ಜೆ.ಎಂ.ಎಸ್ ಮಣಿ, ಆರ್. ಎಂ. ಹಡಪದ. ಎಸ್. ಜೆ. ವಾಸುದೇವನ್ ರವರು, ಕೆ. ಎನ್. ರಾಮಚಂದ್ರನ್‌ರವರು ರಚಿಸುತ್ತಿದ್ದ ಬ್ಯಾನರ್ ಆರ್ಟ್ ನೋಡಿ ಅದರಲ್ಲಿ ಬಳಸುವಂತ ಕಲರ್, ತಂತ್ರಗಾರಿಕೆಯನ್ನು ನೋಡಿ ನೀವು ಯಾಕೆ ಕಲಾಕೃತಿಗಳನ್ನು ರಚನೆಮಾಡಬಾರದು, ನೀವು ಕಲಾಕೃತಿಗಳನ್ನು ರಚನೆ ಮಾಡಿ ಹಾಗೆಯೇ ಅವುಗಳನ್ನು ಪ್ರದರ್ಶನ ರಚಿಸಿ, ಎಂದು ರಾಮಚಂದ್ರನ್‌ರವರಿಗೆ ಪ್ರೋತ್ಸಾಹ ನೀಡುತ್ತಾ ಬಂದವರು. ಸ್ನೇಹಿತರ ಪರಿಚಯದಿಂದ ಒಳ್ಳೆಯ ಉತ್ತಮ ಕಲಾಕೃತಿಗಳನ್ನು ಮಾಡಿ. ಪ್ರದರ್ಶನ ಮಾಡಿ ಕರ್ನಾಟಕದಲ್ಲಿ ಉತ್ತಮ ಕಲಾವಿದನಾಗಿ, ಬೆಳೆಯಲು ಸಾಧ್ಯವಾಯಿತು ಎಂದು ನೆನಪಿಸಿಕೊಳ್ಳುತ್ತಾರೆ.

ಅಧ್ಯಾಯ ಎರಡರ ಕೊನೆ ಟಿಪ್ಪಣಿಗಳು

1) ಎಚ್. ತಿಪ್ಪೇರುದ್ರಸ್ವಾಮಿ; ಕರ್ನಾಟಕ ಸಂಸ್ಕೃತಿ ಸಮೀಕ್ಷೆ; 1992, ಪುಟ–3
2) ಎಚ್. ತಿಪ್ಪೇರುದ್ರಸ್ವಾಮಿ; ಕರ್ನಾಟಕ ಸಂಸ್ಕೃತಿ ಸಮೀಕ್ಷೆ; 1992, ಪುಟ–128
3) ಜಿ. ಗೋಪಿನಾಥ; ದಕ್ಷಿಣ ಭಾರತ; ಪ್ರವಾಸಿ ಕೈಪಿಡಿ; ವಾಸನ್ ಪಬ್ಲಿಕೇಶನ್ ಸಂಪಾದಕ, ಪುಟ–103
4) ಜಿ. ಗೋಪಿನಾಥ; ದಕ್ಷಿಣ ಭಾರತ; ಪ್ರವಾಸಿ ಕೈಪಿಡಿ; ವಾಸನ್ ಪಬ್ಲಿಕೇಶನ್ ಸಂಪಾದಕ, ಪುಟ–104

5) ಶಂಕರ ಪಾಟೀಲ; ಚಿತ್ರಚಿಂತನೆ; ಪುಟ–15

6) ವಿ. ಸೀತಾರಾಮಯ್ಯ; ಕಲಾನುಭವ; ಬೆಂಗಳೂರು ವಿ.ವಿ; ಪುಟ–25

7) ಶಂಕರ ಪಾಟೀಲ; ಸೌಂದರ್ಯಾನುಭವ; ಪಟು–15



ಕೆ. ಎನ್. ರಾಮಚಂದ್ರನ್ ಅವರ ಗುರುಗಳಾದ

ದರ್ಮಲಿಂಗಂ ಪಿಳ್ಳೈ

ಕಲಾವಿದ : ಕೆ. ಎನ್. ರಾಮಚಂದ್ರನ್ ಪತ್ನಿ ಹಾಗೂ ಮಕ್ಕಳು





ಕಲಾವಿದರ ಮಿತ್ರ ಬಳಗ









ಅಧ್ಯಾಯ – 3

ಕಲಾಕೃತಿಗಳ ವಿಶ್ಲೇಷಣೆ ಮತ್ತು ವರ್ಗೀಕರಣ

ಅ. ರೇಖಾ ಚಿತ್ರಗಳು

ಬ. ಭಾವ ಚಿತ್ರಗಳು

ಕ. ಸಂಯೋಜನೆ ಚಿತ್ರಗಳು, ಅಮೂರ್ತ ಚಿತ್ರಗಳು

ಅಧ್ಯಾಯ–03

ಕೆ.ಎಸ್. ರಾಮಚಂದ್ರನ್ ಅವರ ಕಲಾಕೃತಿಗಳು

ಎಂಭತ್ತರ ಸಂವತ್ಸರಕ್ಕೆ ಕಾಲಿಡುತ್ತಿರುವ ರಮ್ಯ ವರ್ಣಕಲಾವಿದ ಕೆ.ಎಸ್. ರಾಮಚಂದ್ರನ್ ಕೇವಲ ರಮ್ಯ ವರ್ಣಗಳ ಸಂಯೋಜನೆಯ ಸೂತ್ರನಾಗಿರದೇ ಅವರೊಬ್ಬ ರಮ್ಯ ಭಾವನೆಯ ವ್ಯಕ್ತಿತ್ವ ಹೊಂದಿರುವವರೆಂದರೂ ಅತೀಶಯೋಕ್ತಿಯಾಗಲಾರದು. ಯಾಕೆಂದರೆ ಅವರ ತೈಲ ಮಾಧ್ಯಮದ ವರ್ಣಗಳು ಸಾಕ್ಷೀಯೆನಿಸುತ್ತವೆ. ಈ ಕಲಾವಿದರು ಇಡೀ ತಮ್ಮ ವೃತ್ತಿ ಬದುಕಿನಲ್ಲಿ ಸಾವಿರಾರು ವರ್ಣಚಿತ್ರಗಳನ್ನು ಹಾಗೂ ರೇಖಾ ಚಿತ್ರಗಳನ್ನು ರಚಿಸಿದ್ದಾರೆ. ಪುನರುಜ್ಜೀವನ ಕಾಲದ ವಿನ್ಸಿ, ರೆಂಬ್ರಾಂಟ, ಎಂಜಿಲೊ. ರಾಫೆಲ್ ಮುಂತಾದ ಕಲಾವಿದರ ವರ್ಣತಂತ್ರಗಾರಿಕೆ ಈ ಕಲಾವಿದರ ಚಿತ್ರಗಳಲ್ಲಿ ಅನುಕರಿಸುತ್ತದೆ.

ಕಲಾವಿದ ರಾಮಚಂದ್ರನ್‌ರು ಪ್ರಾರಂಭದ ಹಂತದಲ್ಲಿ ಅಂದರೆ ವರ್ಣಚಿತ್ರಕಲೆಯ ವೃತ್ತಿಬದುಕಿನ ಪ್ರಾರಂಭದಲ್ಲಿ ಅವರೊಬ್ಬ ಚಲನಚಿತ್ರದ ಪ್ರಚಾರ ಬ್ಯಾನರಗಳನ್ನು ರಚಿಸುತ್ತಿದ್ದರು. ಚಲನಚಿತ್ರದ ನಾಯಕ ನಾಯಕಿಯ ದೃಶ್ಯಗಳನ್ನು ದೊಡ್ಡ ದೊಡ್ಡ ಪರದೆಯ ಮೇಲೆ ಚಿತ್ರಿಸುತ್ತಿದ್ದರು. ಇದರಲ್ಲಿ ನಾಯಕ ನಾಯಕಿಯರ ವರ್ಣರಂಜಿತ ಹಾವ–ಭಾವಗಳನ್ನು ಹಾಗೂ ಭಾವ–ಭಂಗಿಗಳನ್ನು ಅತ್ಯಂತ ರೋಮಾಂಟಿಕ್ ವರ್ಣಗಳಾದ ಲೇಕ್ ಬಣ್ಣಗಳಿಂದ (ಹುಡಿ ವರ್ಣಗಳು) ಸಂಯೋಜಿಸುತ್ತಿದ್ದರು. ನಂತರದ ದಿನಗಳಲ್ಲಿ ಮುದ್ರಣ ಮಾಧ್ಯಮ ಮಾರುಕಟ್ಟೆಯಲ್ಲಿ ಪರಿಚಿತಗೊಂಡು ಸಿನಿಮಾ ಪ್ರಚಾರ ಪರದೆ(ಕಟೌಟ್ಸ)ಗಳ ಬೇಡಿಕೆ ಕುಂಟಿತಗೊಂಡಿತು. ಹೀಗಾಗಿ ಇಂಥ ಕಲಾವಿದರ ವೃತ್ತಿಗೆ ಸ್ವಲ್ಪ ಪೆಟ್ಟು ಬಿದ್ದಿತು. ರಾಮಚಂದ್ರನ್‌ರು

ಧೃತಿಗೆಡದೆ ಈ ವೃತ್ತಿಯನ್ನು ಬಿಡದೇ ತಮ್ಮದೇ ಆದ ಚಿತ್ರಶೈಲಿಯನ್ನು ಹುಟ್ಟುಹಾಕಿ ಈ ಚಿತ್ರ ವೃತ್ತಿಯನ್ನೇ ಮುಂದುವರೆಸಿಕೊಂಡು ಇಲ್ಲಿಯತನಕ ಬದುಕನ್ನು ಸವೆದಿದ್ದಾರೆ. ಈಗಲೂ ಸಹ ಇಂಥ ಇಳಿವಯಸ್ಸಿನಲ್ಲಿಯೂ ಸದಾ ಚಿತ್ರರಚನೆಯಲ್ಲಿ ತೊಡಗಿಕೊಂಡಿರುವುದು ಅತ್ಯಂತ ಗಮನಾರ್ಹವಾದುದು.

ಕಲಾವಿದ ರಾಮಚಂದ್ರನ್‌ರು ರಚಿಸಿದ ಕಲಾಕೃತಿಗಳನ್ನು ಇಲ್ಲಿ ಮುಖ್ಯವಾಗಿ ರೇಖಾಚಿತ್ರಗಳು, ಭಾವಚಿತ್ರಗಳು ಸಂಯೋಜನ ಹಾಗೂ ಅಮೂರ್ತ ಚಿತ್ರಗಳೆಂದು ನಾಲ್ಕು ರೀತಿಯಲ್ಲಿ ವಿಭಜಿಸಿಕೊಂಡು ಅಧ್ಯಯನ ಮಾಡಲಾಗಿದೆ.

ಅ) ರೇಖಾಚಿತ್ರಗಳು

ರೇಖೆ ಮಾನವ ಇತಿಹಾಸದಷ್ಟೇ ಪುರಾತನವಾದುದು. 'ಗೆರೆ ರೇಖೆಯಕ್ಕು' ಎಂದಿದ್ದಾನೆ. ಮಂಗರಾಜ ತನ್ನ ನಿಘಂಟಿನಲ್ಲಿ ಸಂಸ್ಕೃತದ ರೇಖೆ ಕನ್ನಡದಲ್ಲಿ ಗೆರೆ ಅಥವಾ ಗೀಟು ಇಂಗ್ಲೀಷ್‌ನಲ್ಲಿ ಡ್ರಾಯಿಂಗ್. ಈ ಪದವನ್ನು ಚಿತ್ರವೇ ಅಲ್ಲದೇ ಬೇರೆ ಬೇರೆ ಸಂದರ್ಭದಲ್ಲಿ ವಿವಿಧ ಅರ್ಥದಲ್ಲಿ ಉಪಯೋಗಿಸಲಾಗಿದೆ. ಅಪ್ಪ ಹಾಕಿದ ಗೆರೆ ದಾಟುವುದಿಲ್ಲ ಎಂಬ ಗಾದೆ ಇಲ್ಲವೇ? ಹಾಗೆಯೇ ಲಕ್ಷ್ಮಣ ರೇಖೆ, ಅದೃಷ್ಟರೇಖೆ ಎಂಬ ಪದಗಳನ್ನು ಕೇಳಿದ್ದೇವೆ. ಹೀಗೆ ರೇಖೆ ನಮ್ಮ ಬದಿಕಿನ ಅನೇಕ ಸಂದರ್ಭಗಳಲ್ಲಿ ಹಾಸುಹೊಕ್ಕಾಗಿದೆ.[1] ಇಲ್ಲಿ ಕಲಾವಿದ ರಾಮಚಂದ್ರನ್‌ರು ರಚಿಸಿದ ರೇಖಾ ಚಿತ್ರಗಳು ಸಹ ಇದಕ್ಕೆ ಹೊರತಾಗಿಲ್ಲ. ಕಲಾವಿದನ ಸಂಹನ ಭಾಷೆ ಯಾವುದೇ ಇದ್ದರೂ ಅಭಿವ್ಯಕ್ತಿಸುವ ಕ್ರೀಯೇ ಒಂದೇಯಾಗಿರುತ್ತದೆ. ಕಲಾವಿದರು ಮೂಲತಃ ತಮಿಳುನಾಡಿನವರಾದರೂ ಅವರ ಕರ್ಮಭೂಮಿ ಕನ್ನಡದ ನೆಲ. ಇಲ್ಲಿನ ಭಾಷೆ, ಸಂಸ್ಕೃತಿ, ಆಚಾರ–ವಿಚಾರಗಳನ್ನು ತಮ್ಮ ವೃತ್ತಿ ಬದುಕಿನಲ್ಲಿ ಮೈಗೂಡಿಸಿಕೊಂಡು ಕನ್ನಡದವರಾಗಿಯೇ ತಮ್ಮ ಬದುಕನ್ನು ಕಂಡುಕೊಂಡಿದ್ದಾರೆ. ಕಲಾ ಕ್ಷೇತ್ರವು ಇವರನ್ನು ಕನ್ನಡದವರೆಂದೇ ಅಪ್ಪಿಕೊಂಡಿದೆ.

ಕಲಾವಿದ ರಾಮಚಂದ್ರನ್‌ರು ತಮ್ಮ ವೃತ್ತಿಬದುಕಿನಲ್ಲಿ ಸಾವಿರಾರು ವರ್ಣ ಚಿತ್ರಗಳನ್ನು ಬರೆದಿದ್ದಾರೆ. ಇವರು ರೇಖಾಚಿತ್ರಗಳನ್ನು ಪ್ರಾಯೋಗಿಕವಾಗಿ ಪೆನ್ಸಿಲ್, ಪೆನ್, ಚಾರ್‌ಕೋಲ್ ಹಾಗೂ ಬಣ್ಣದ ಪೆಸ್ಟಲ್‌ಗಳನ್ನು ಬಳಿಸಿಕೊಂಡು ಸಾಂದರ್ಭಿಕವಾಗಿ ಚಿತ್ರಗಳನ್ನು ರಚನೆ ಮಾಡುತ್ತಿದ್ದರು. ಈ ರೇಖಾಚಿತ್ರಗಳು ಅವರು ರಚಿಸುವ ವರ್ಣಚಿತ್ರಗಳ ಕರಡು ಚಿತ್ರಗಳಿಗೆ ಪೂರಕವಾಗಿವೆ. ಇವರ ರೇಖಾ ಚಿತ್ರಗಳನ್ನು ಗಮನಿಸಿದರೆ ಪ್ರಮುಖವಾಗಿ ಪ್ರಕೃತಿ ಚಿತ್ರ, ಉತ್ಸವ, ಜಾತ್ರೆ, ಮಾರುಕಟ್ಟೆ, ವೈವಿಧ್ಯಮಯ ಬೀದಿಗಳು, ಶ್ರಮಿಕ ವರ್ಗದವರ ಚಿತ್ರಗಳು, ಗ್ರಾಮೀಣರ ಜೀವನ, ಕೂಲಿಕಾರ್ಮಿಕರ ಚಿತ್ರಗಳು, ಪಟ್ಟಣ ಹಾಗೂ ಗ್ರಾಮೀಣ ಭಾಗದಲ್ಲಿ ವಿಶ್ರಮಿಸುತ್ತಿರುವ ಜನರ ಬದುಕನ್ನು ಬಿಂಬಿಸುವ ಚಿತ್ರಗಳೆನಿಸುತ್ತವೆ. ರಾಮಚಂದ್ರನ್‌ರು ಕೆಲವು ಸಂದರ್ಭದಲ್ಲಿ ನಗ್ನ ಚಿತ್ರಗಳನ್ನು ರೇಖೆಗಳ ಮೂಲಕ ಸೆರೆ ಹಿಡಿದ್ದಾರೆ. ಇವು ಬಹುತೇಕ ಮಹಿಳೆಯರ ಚಿತ್ರಗಳಾಗಿವೆ.

ನಗ್ನ ಚಿತ್ರಗಳು :

'ನಗ್ನತೆ' ಸಾಮಾನ್ಯ ನೋಡುಗನಿಗೆ ಅಶ್ಲೀಲವಾಗಿ ಕಾಣಬಹುದು ಅದನ್ನು ತಿರಸ್ಕರಿಸಲೂಬಹುದು. ಇದು ಚಿತ್ರಕಲಾವಿದನ ದೃಷ್ಟಿಗೆ ಅಶ್ಲೀಲವಾಗಿ ಕಾಣದೇ ಒಂದು ಕಲಾಕೃತಿಯಾಗಿ ಅನುಭವಿಸುತ್ತಾನೆ. ಅಂದರೆ ಅವನ ದೃಷ್ಟಿ ಕೇವಲ ನಗ್ನ ದೇಹವನ್ನು ಮೌಲೀಕರಿಸದೇ ಕಲೆಯ ಮೂಲಕ ಪ್ರಮಾಣ, ತೂಕ, ಚಲನೆ, ಯಥಾದೃಷ್ಟಿ, ಸಂಯೋಜನೆಯನ್ನು ಗಮನಿಸುತ್ತದೆ. ಅದರಲ್ಲೂ ಮಹಿಳೆಯ ನಗ್ನ ದೇಹ ಮನುಷ್ಯನ ಭಾವನೆಯನ್ನು ಒಂದು ಕ್ಷಣ ಸಮತೋಲತೆಯನ್ನು ಕದಡುತ್ತದೆ. ಪಂಡಿತ ಯಶೋಧರನು ತನ್ನ ಚಿತ್ರಸೂತ್ರದ ರೂಪಭೇದವು ಆಯಾ ಭಾವನೆಯ ಮೂಲಕ ಗುರುತಿಸಲ್ಪಡುತ್ತದೆ. ನಗ್ನತೆಯು ಅದರಲ್ಲೂ ಹೆಣ್ಣಿನ ನಗ್ನ ದೇಹವು ಕಾಮ ಬಯಕೆಯನ್ನು ಉತ್ತೇಜಿಸುತ್ತದೆ ನಿಜ. ಇಲ್ಲಿ ರಾಮಚಂದ್ರನ್‌ರು ಆ ಬಯಕೆಗೆ ಪೂರಕ ವೆಂಬಂತೆ ರೇಖಾ ಚಿತ್ರಗಳನ್ನು ಚಿತ್ರಿಸಿದ್ದಾರೆ. ಇವರು ಹೆಚ್ಚಾಗಿ ಮಧ್ಯವಯಸ್ಕ ಮಹಿಳೆಯರ ಚಿತ್ರಗಳನ್ನು ರಚಿಸಿದ್ದಾರೆ. ಇವು ಅವರ ಶೃಂಗಾರ ಭಾವನೆಯನ್ನು ಉದ್ದೀಪನಗೊಳಿಸುತ್ತವೆ. ಇವರು ರಚಿಸಿದ ನಗ್ನ ಚಿತ್ರಗಳು ವೈವಿಧ್ಯಮಯ ಭಂಗಿಯಲ್ಲಿ ಸಂಯೋಜನಗೊಂಡಿದ್ದು, ಸೂಕ್ಷ್ಮರೇಖೆಗಳ ಸಮೂಹದಿಂದ ಅವಳ ದೇಹ ಭಾಷೆಯನ್ನು ತಿಳಿಸುತ್ತವೆ.

ರಾಮಚಂದ್ರನ್‌ರು ನಗ್ನ ಚಿತ್ರಗಳನ್ನು ನೂರಾರು ಸಂಖ್ಯೆಗಳಲ್ಲಿ ರೇಖೆಗಳ ಮೂಲಕ ಸೆರೆ ಹಿಡಿದಿದ್ದಾರೆ. ಇವು ಅವರ ಬದುಕಿನಲ್ಲಿ ಅನುಭವಿಸಿದ ಸ್ಮರಣ ಶಕ್ತಿಯಾಗಿವೆ. ನಗ್ನತೆಯ ಭಾವ, ಭಂಗಿ ದೇಹದ ಏರಿಳಿತ ಹಾಗೂ ದೇಹ ಭಾಷೆಯನ್ನು ಗ್ರಹಿಸುತ್ತಿವೆ. ಹೆಣ್ಣು ಒಬ್ಬ ತಾಯಿಯಾಗಿ, ಮಗಳಾಗಿ, ಸೊಸೆಯಾಗಿ, ಹೆಂಡತಿಯಾಗಿ, ಅತ್ತೆಯಾಗಿ ಮೇಲಾಗಿ ಒಬ್ಬ ಹೆಣ್ಣಾಗಿ ತನ್ನ ಜೀವಿತಾವಧಿಯಲ್ಲಿ ಕಾಣಸಿಗುತ್ತಾಳೆ. ಹೆಣ್ಣನ್ನು ಒಬ್ಬ ಶಕ್ತಿದೇವತೆಯನ್ನಾಗಿ, ಮಾತೃಶಕ್ತಿಯನ್ನಾಗಿ ನಮ್ಮಧರ್ಮ ಸಾಹಿತಿಗಳು, ವಿದ್ವಾಂಸರು ತಮ್ಮ ವಿಚಾರಗಳ ಮೂಲಕ ದರ್ಶನ ಮಾಡಿಸಿದ್ದಾರೆ. ಹೊರಪ್ರಪಂಚದಲ್ಲಿ ಇಂದು ಪ್ರಚಾರದ ವಸ್ತುವಾಗಿ, ಗಳಿಕೆಯ ವಸ್ತುವಾಗಿ ಹೆಣ್ಣನ್ನು ಬಳಸಿಕೊಳ್ಳುತ್ತಿರುವುದು ನಮ್ಮ ಸಮಾಜದ ದುರ್ಗತಿಯಂದೇ ತಿಳಿಯಬಹುದು. ಅವಳ ಸಬಲತೆಗೆ ಮುಳ್ಳಾಗಿರುವುದು ಅವಳ ದೇಹ, ಸೌಂದರ್ಯ ಹಾಗೂ ದುರ್ಬಲತೆಯೇ ಕಾರಣವೆಂದರೆ ತಪ್ಪಾಗಲಾರದು. ಇಲ್ಲಿ ವಿವೇಚಿಸುವುದಿಷ್ಟೆ ರಾಮಚಂದ್ರನ್‌ರು ರಚಿಸಿದ ನಗ್ನ ಚಿತ್ರಗಳಲ್ಲಿ ಅದರಲ್ಲೂ ಮಹಿಳೆಯ ನಗ್ನ ಚಿತ್ರಗಳಲ್ಲಿ ಮಹಿಳೆಯ ಹೆಣ್ತನಕ್ಕೆ ದಕ್ಕೆಯಾಗದಂತೆ ಕಲಾತ್ಮಕ ದೃಷ್ಟಿಯನ್ನು ಕಾಣಲು ಪ್ರಯತ್ನಿಸಿದ್ದಾರೆ.

ರೇಖಾ ಚಿತ್ರಕ್ಕೆ ರೇಖೆಯೇ ಜೀವಾಳ. ಅದಕ್ಕೊಂದು ಮಹತ್ವವಿದೆ. ಅದು ಕಲಾವಿದನ ಮಾನಸಿಕ ಉದ್ದೇಶವನ್ನು ಅದರ ತೀವ್ರತೆಯೊಂದಿಗೆ ಪರಿಶುದ್ಧ ಸ್ಥಿತಿಯಲ್ಲಿ ವ್ಯಕ್ತ ಪಡಿಸುವುದಷ್ಟೇ ಅಲ್ಲದೇ ಚಿತ್ರ ಸೃಷ್ಟಿಕಾಲದ ಅವನ ಮನಸ್ಥಿತಿಯನ್ನೂ, ಚಿತ್ತವೃತ್ತಿಯನ್ನೂ, ಭಾವನೆಯನ್ನೂ ಆ ಕ್ಷಣಕ್ಕೆ ನೋಡುಗನ ಮುಂದೆ ತೆರೆದಿಡುತ್ತದೆ.[2] ಎಂಬಂತೆ ರಾಮಚಂದ್ರನ್‌ರ ನಗ್ನ ರೇಖಾ ಚಿತ್ರಗಳು ರೂಪ ಪಡೆದಿವೆ. ಈ ನಗ್ನಚಿತ್ರಗಳಲ್ಲಿ ರೇಖಾ ವೈಖರ್ಯ ಪ್ರಕಟಗೊಳ್ಳದಿದ್ದರೂ ಸಹ ರೂಪದರ್ಶಿಯ ಮೂರ್ತರೂಪದ ಅಂಗಸೌಷ್ಠವವನ್ನು ತೆರೆದಿಡುತ್ತಿವೆ. ಕಲಾವಿದ ರಾಮಚಂದ್ರನ್‌ರೇ ಹೇಳುವಂತೆ ನಗ್ನತೆ ಎನ್ನುವುದು ಮಾನಸಿಕ ಸಿದ್ಧಾಂತದ ಮೇಲೆ ಅನಾವರಣಗೊಳ್ಳುತ್ತದೆ. ಪ್ರಾಣಿಗಳೂ ಸಹ ನಗ್ನವಾಗಿಯೇ ನಮ್ಮ ಮುಂದಿವೆ. ಅವುಗಳಿಗೆ ನಾವು ನಗ್ನರಾಗಿದ್ದೇವೆ, ನಮ್ಮ ಮಾನ ಮುಚ್ಚಿಕೊಳ್ಳಬೇಕೆಂಬ ಪರಿವೆ ಅವಕ್ಕಿಲ್ಲ. ಯಾಕೆಂದರೆ ಅವಕ್ಕೆ ನಗ್ನತೆ

ಪ್ರಜ್ಞೆ ಇಲ್ಲ. ಹಾಗಾಗಿ ಅವುಗಳನ್ನು ಪ್ರಾಣಿ, ಪಶು ಎನ್ನುತ್ತೇವೆ. ಮನುಷ್ಯ ಪ್ರಾಣಿಗಳಿಗಿಂತಲೂ ಭಿನ್ನ, ಪ್ರಜ್ಞಾವಂತ, ಬುದ್ಧಿವಂತ. ಆದ್ದರಿಂದ ನಗ್ನತೆಯ ಮಡಿವಂತಿಕೆಯ ಅರಿವು ಅವನಲ್ಲಿ ಸಹಜವಾಗಿರುತ್ತದೆ. ಬಹಿರಂಗವಾಗಿ ಎಲ್ಲವನ್ನು ನಗ್ನವಾಗಿ ತೆರೆದಿಡುವುದಲ್ಲ ಆರೋಗ್ಯಕರ ಸಮಾಜವನ್ನು ಗಮನಿಸಬೇಕಾಗುತ್ತದೆ.

ರಾಮಚಂದ್ರನ್‌ರ ನಗ್ನತೆಯ ವಿಚಾರಗಳನ್ನು ಗಮನಿಸುವುದಾದರೆ ಅವರ ಚಿತ್ರಗಳಲ್ಲಿ ನಗ್ನತೆಯನ್ನು ಬಿಕಾಬಿಟ್ಟಿಯಾಗಿ ತೆರೆದಿಟ್ಟಿಲ್ಲ. ಯಾರ ಮನಸ್ಸನ್ನು ಘಾಸಿಗೊಳಿಸಲು ಪ್ರಯತ್ನಿಸಿಲ್ಲ. ತಮ್ಮ ಬಯಕೆಯ ಅನುಭವಿಸಿದ ವಸ್ತು ವಿಷಯವನ್ನು ತೆರೆದಿಡಲು ಪ್ರಯತ್ನಿಸಿದ್ದಾರೆ. ಇದಕ್ಕೆ ಸಾಕ್ಷಿ ಎಂಬಂತೆ ಅವರ ಒಂದು ರೇಖಾಚಿತ್ರದಲ್ಲಿ ಮಧ್ಯವಯಸ್ಕ ಮಹಿಳೆಯ ಅರೆ ಬೆತ್ತಲೆಯ ಚಿತ್ರ ರೂಪಗೊಂಡಿದೆ. ಇಲ್ಲಿ ಮಹಿಳೆ ಮಧ್ಯವಯಸ್ಕ ದೈಹಿಕ ಲಕ್ಷಣಗಳು ಸೂಚಿಸುವಂತೆ ಅವಳ ಅಂಗಾಂಗಗಳು ರೇಖೆಗಳಲ್ಲಿ ಒಡಮೂಡಿವೆ. ಬೊಜ್ಜು ದೇಹ ಸಹಜ ಸ್ಥಿತಿಗಿಂತಲೂ ಸ್ವಲ್ಪ ಜೋತು ಬಿದ್ದ ಮಾಂಸ ಖಂಡಗಳ ಏರಿಳಿತವು ಕಲಾವಿದರ ಮೈಮನಸ್ಸನ್ನು ಉತ್ತೇಜಿಸುತ್ತದೆ. ನಮ್ಮ ಸಂಪ್ರದಾಯಕ್ಕೆ ಸೂಚಕದಂತಿರುವ ಮಹಿಳೆಯ ದುಂಡು ಮುಖದ ಹಣೆಯ ಮೇಲೆ ಸಿಂಧೂರದ ಸಂಕೇತ, ಒಬ್ಬ ಸಭ್ಯಸ್ಥ ಮಹಿಳೆಯನ್ನು ಸಂಕೇತಿಸುತ್ತದೆ. ಈ ಬಗೆಯ ಹಲವಾರು ಚಿತ್ರಗಳು ಇವರ ಕೈ ಚಳಕದಲ್ಲಿ ರೂಪ ಪಡೆದಿವೆ. ರಾಮಚಂದ್ರನ್‌ರು ನಗ್ನ ರೂಪದ ಚಿತ್ರಗಳನ್ನು ರಚಿಸುವ ಸಂದರ್ಭದಲ್ಲಿ ರೂಪದರ್ಶಿಗಳ ದೈಹಿಕ ಲಕ್ಷಣಗಳನ್ನು ಸೂಕ್ಷ್ಮ ಮತಿಯಲ್ಲಿ ಗ್ರಹಿಸಿ ಅವರ ಪ್ರತಿಯೊಂದು ಅಂಗಾಂಗಗಳನ್ನು ಕೂಲಂಕುಶವಾಗಿ ಸೆರೆಹಿಡಿಯಲು ಪ್ರಯತ್ನಿಸುತ್ತಾರೆ. ಮೊದಲು ರೂಪದರ್ಶಿಗಳ ಬಾಹ್ಯರೇಖೆಯನ್ನು ವೈವಿಧ್ಯಮಯ ರೇಖಾ ಸಮೂಹದಿಂದ ಪ್ರತ್ಯೇಕಿಸುತ್ತಾರೆ. ಇದರ ರೇಖೆಗಳು ಹೆಚ್ಚು ದಟ್ಟ ಸಮೂಹದಿಂದ ಕೂಡಿರದೆ ಅವಶ್ಯಕತೆ ಇದ್ದಲ್ಲಿ ಮಾತ್ರ ರೇಖೆಗಳನ್ನು ಬಿಂಬಿಸಿ ರೂಪದರ್ಶಿಗಳ ಭಾವರೂಪವನ್ನು ಅಭಿವ್ಯಕ್ತಿಸಿದ್ದಾರೆ. ಈ ರೀತಿಯ ಹಲವಾರು ಚಿತ್ರಗಳನ್ನು ಈ ಕಲಾವಿದರು ಚಿತ್ರಿಸಲು ಪ್ರಯತ್ನಿಸಿದ್ದಾರೆ.

ಮಕ್ಕಳ ಚಿತ್ರಗಳು :

ಕೆ. ಎನ್. ರಾಮಚಂದ್ರನ್‌ರು ಒಂದೇ ರೀತಿಯ ವಿಷಯಗಳನ್ನೊಳಗೊಂಡ ರೇಖಾಚಿತ್ರಗಳನ್ನು ರಚಿಸಿರುವುದಿಲ್ಲ. ಎಲ್ಲ ಬಗೆಯ ಚಿತ್ರಗಳನ್ನು ರೇಖೆಗಳ ಮೂಲಕ ಪ್ರಯೋಗಿಸಿದ್ದಾರೆ. ಅದರಲ್ಲೂ ಮಕ್ಕಳ ಚಿತ್ರಗಳನ್ನು ಅವರು ವಿಶೇಷವಾಗಿ ಸೆರೆಹಿಡಿದಿದ್ದಾರೆ. ರಾಮಚಂದ್ರನ್‌ರು ಹೆಚ್ಚಾಗಿ ಶಾಲಾ ಬಾಲಕಿಯರ ಚಿತ್ರಗಳನ್ನು ಚಿತ್ರಿಸಿದ್ದು ಇವುಗಳಲ್ಲಿ ಆಟ ಆಡುತ್ತಿರುವ, ಶಾಲೆಗೆ ಹೋಗುತ್ತಿರುವ ಚಿತ್ರಗಳು ಬಹುತೇಕ ಕಂಡುಬರುತ್ತಿವೆ. ಪ್ರತಿಯೊಬ್ಬ ಕಲಾವಿದರು ರೇಖಾ ಕೌಶಲವನ್ನೂ ವರ್ಣಕೌಶಲವನ್ನೂ ತಮ್ಮ ರಚನೆಯಲ್ಲಿ ಕೂಡಿಸಿ ರಚಿಸುತ್ತಾರೆ. ರೇಖೆ, ವರ್ಣ, ನೆರಳು–ಬೆಳಕು ಇವುಗಳಿಗೆ ಆಸಕ್ತಿ ಕೇಂದ್ರೀಕೃತವಾದಾಗ ಮಾತ್ರ ಶುದ್ಧ ವರ್ಣಚಿತ್ರ ರಚನೆಗೆ ತೊಡಗುತ್ತಾರೆ. ಅಂದರೆ ಯಾವುದೇ ಚಿತ್ರರಚನೆಗೆ ರೇಖೆ ಮೂಲ ತಳಹದಿಯಾಗಿದೆ. ರೇಖೆ ಇಲ್ಲದೇ ಯಾವುದೇ ಸ್ಥಿರ ಚಿತ್ರರಚನೆ ಸಾಧ್ಯವಿಲ್ಲವೆನ್ನಬಹುದು. ರೇಖೆಯು ಅಂತಿಮ ಕೃತಿಗೆ ಪ್ರಾಣವು, ಚೈತನ್ಯವು ಹಾಗೂ ಸದೃಢತೆಯನ್ನು ಒದಗಿಸುತ್ತದೆ.

ರಾಮಚಂದ್ರನ್‌ರು ಶಾಲಾ ಮಕ್ಕಳ ಚಿತ್ರಗಳನ್ನು ವೈವಿಧ್ಯಮಯ ಭಂಗಿಗಳಲ್ಲಿ ರಚಿಸಿದ್ದು, ರೇಖೆಗಳು ತುಂಡು ತುಂಡಾದ ಮತ್ತು ಅಂಕು ಡೊಂಕಾದ ಹಾಗೂ ಸಮುಚ್ಚದಿಂದ ಕೂಡಿವೆ. ವ್ಯಕ್ತಿಯ ದೈಹಿಕ ಲಕ್ಷಣಗಳನ್ನು ತೋರಿಸಲು ಚಿಕ್ಕ ಚಿಕ್ಕ ಗೆರೆಗಳಿಂದ ಸಂಯೋಜಿಸಿದ್ದಾರೆ. ಇದರಿಂದ ಆ ಪ್ರತಿಮೆಗಳಲ್ಲಿ ಜೀವ ಚೈತನ್ಯ ಮೂಡಿಬಂದಿವೆ. ಬಹುತೇಕ ಈ ಕಲಾವಿದರ ಚಿತ್ರರಚನಾಕ್ರಮ ಒಂದು ಶೈಲಿಯನ್ನು ನಿರೂಪಿಸಲು ಪ್ರಯತ್ನಿಸುತ್ತದೆ. ಅಲಂಕಾರಿಕ, ನಯ ನಾಜೂಕಿನ, ವೈಯಾರದ ರೇಖಾ ಕ್ರಮ ಇವರ ಚಿತ್ರಗಳಲ್ಲಿ ಕಂಡುಬರುವುದಿಲ್ಲ. ಆದರೆ ರೇಖೆಗಳಲ್ಲಿ ಪ್ರಮಾಣ, ತೂಕ, ರಭಸತೆ ಹಾಸುಹೊಕ್ಕಾಗಿವೆ. ಈ ಕಲಾವಿದರು ಬೆಂಗಳೂರಿನಂತಹ ನಗರ ಬದುಕಿನ ಒಡನಾಟವಿರುವುದರಿಂದ ಅಲ್ಲಿನ ಸಂಸ್ಕೃತಿಯು ಇದರ ಯಾವುದೇ ಚಿತ್ರಗಳಲ್ಲಿ ಅನಾವರಣಗೊಂಡಿದೆ.

ರಾಮಚಂದ್ರನ್‌ರು ಮಕ್ಕಳ ಆಟ, ಪಾಠ ಅವರ ವಿನೋದ, ಮಕ್ಕಳ ನಿಷ್ಕಳಂಕ ಭಾವನೆಗಳನ್ನು ತಮ್ಮ ಚಿತ್ರಗಳಲ್ಲಿ ಸೆರೆಹಿಡಿದಿದ್ದಾರೆ. ಇದನ್ನು ಗಮನಿಸಿದರೆ ಮಕ್ಕಳ ಮೇಲಿನ ಪ್ರೀತಿ, ಮಮಕಾರವು ಕಲಾವಿದರನ್ನು ಸ್ಪಂದಿಸುತ್ತದೆ. ಈ ಸ್ಪಂದನ ಕ್ರೀಯೆಯೇ ಅದರ ರೇಖಾಚಿತ್ರ ರಚನೆ ಸ್ಫೂರ್ತಿದಾಯಕವಾಗಿದೆ. ಇದರ ಚಿತ್ರಗಳಲ್ಲಿ ಮಕ್ಕಳ ವೈವಿಧ್ಯಮಯ ಮನೋವಿಕಾಸವನ್ನು ಸಹ ಗುರುತಿಸಬಹುದು. ಆಟ, ಪಾಠ ಹಾಗೂ ಯಾವುದೇ ರೀತಿಯ ಚಟುವಟಿಕೆಗಳನ್ನು ಗಮನಿಸಬಹುದಾಗಿದೆ.

ರಾಮಚಂದ್ರನ್‌ರು ಸದಾ ಚಟುವಟಿಕೆಯುಳ್ಳವರು. ಮಕ್ಕಳೆಂದರೆ ಪ್ರೀತಿಯುಳ್ಳವರು ಅವರ ಚಟುವಟಿಗಳನ್ನು ಅನುಭವಿಸಿ ಆನಂದಿಸುವವರು ಅವರೇ ಹೇಳುವಂತೆ ನಾವು ಸಂತೋಷದಿಂದ ಇರಬೇಕೆಂದರೆ ಸದಾ ಚಟುವಟಿಯಿಂದ ಇರಬೇಕು ಅದರಲ್ಲೂ ಕಲಾವಿದರಾದವರು ಕಲೆಯ ರಚನೆಯಲ್ಲಿ ಕ್ರೀಯಾಶೀಲರಾಗಿರುವುದರಿಂದ ಅವರು ಯಾವತ್ತು ಸಂತೋಷಿಗಳಾಗಿರುತ್ತಾರೆ. ಹೀಗಾದ್ದಾಗ ಅವರ ವಿಚಾರಗಳು ಸಹ ಆರೋಗ್ಯಕರವಾಗಿರುತ್ತವೆ. ಇವರ ಮಾತಿಗೆ ಪೂರಕವೆಂಬಂತೆ ಬಸವಣ್ಣನವರು ಸಹ ಕಾಯಕದಿಂದಲೇ ಕೈಲಾಸ ಅಂದಿದ್ದಾರೆ. ಅಂದರೆ ಮನುಷ್ಯ ನೆಮ್ಮದಿ ಹಾಗೂ ಸಂತೋಷದಿಂದ ಇರಬೇಕಾದರೆ ಯಾವುದಾದರೊಂದು ಚಟುವಟಿಕೆಯಲ್ಲಿ ತೊಡಗಿಕೊಂಡಿರಬೇಕೆಂಬುದು ಸಾರ್ವಕಾಲಿಕ ಸತ್ಯ ಅಂತೆಯೇ ರಾಮಚಂದ್ರನ್‌ರು ಸಹ ತಮ್ಮ ಚಿತ್ರವೃತ್ತಿ ಬದುಕಿನಲ್ಲಿ ಇಂಥ ನೆಮ್ಮದಿಯ ಬದುಕನ್ನು ಸವೆಯುತ್ತಿದ್ದಾರೆ.

ಸಂಯೋಜನಾಚಿತ್ರಗಳು :

ಕಲಾವಿದ ರಾಮಚಂದ್ರನ್‌ರು ರಚಿಸಿದ ರೇಖಾಚಿತ್ರಗಳಲ್ಲಿ ಸಂಯೋಜನಾಕೃತಿಗಳು ಬಹಳಷ್ಟು ಸಂಖ್ಯೆಗಳಲ್ಲಿವೆ. ಇವು ಬಹುತೇಕ ಮಹಿಳಾ ಪ್ರಧಾನ ರೇಖಾಕೃತಿಗಳೇ ಆಗಿವೆ. ಹೆಣ್ಣನ್ನು ಪ್ರೀತಿಸದವರು ಪ್ರಪಂಚದಲ್ಲಿ ಯಾರು ಇಲ್ಲವೆಂದೇ ಹೇಳಬಹುದು. ದಾಸರು, ಶರಣರು, ಕವಿಗಳು ಸಾಹಿತಿಗಳು ಚಿತ್ರಕಾರರು ಹೆಣ್ಣನ್ನು ತಾವು ಕಂಡಂತೆ ಅವಳನ್ನು ಪರಿಚಯಿಸಿದ್ದಾರೆ. ಇದಕ್ಕೆ ಕಲಾವಿದ ರಾಮಚಂದ್ರನ್‌ರೂ ಹೊತಾಗಿಲ್ಲ. ಅವರ ಚಿತ್ರಗಳನ್ನು ಗಮನಿಸಿದರೆ ಮಹಿಳೆಯ ವಿವಿಧ ಆಯಾಮಗಳನ್ನು ಹತ್ತಿರವಾಗಿ ಕಂಡಂತೆ ತಮ್ಮ ವರ್ಣಚಿತ್ರಗಳಲ್ಲಿ ತಮ್ಮ ಅಭಿಲಾಷೆಗಳನ್ನು ಮಹಿಳಾ ಚಿತ್ರಗಳ ಮೂಲಕ ಕಲಾಪ್ರಪಂಚಕ್ಕೆ ಗೊತ್ತುಪಡಿಸಿದ್ದಾರೆ.

ರಾಮಚಂದ್ರನ್‌ರು ಎಲ್ಲ ವರ್ಗದ ಮಹಿಳೆಯರನ್ನು ತಮ್ಮ ಕೃತಿಗಳಲ್ಲಿ ಪರಿಚಯಿಸಿದ್ದು ಇವರು ಒಂದೇ ವರ್ಗಕ್ಕೆ ಸೇರಿದ ಕಲಾವಿದರೆನ್ನದೇ ಬಹುಮುಖ ಸಂಸ್ಕೃತಿಯುಳ್ಳವರೆಂದು ರುಜುವಾತು ಪಡಿಸಿದ್ದಾರೆ. ಒಬ್ಬ ಸುಸಂಸ್ಕೃತ ಮಹಿಳೆಯ ವೇಷಭೂಷಣ, ಆಚಾರ ವಿಚಾರ, ಜೀವನ ಶೈಲಿಯನ್ನು ವೈವಿಧ್ಯಮಯ ರೇಖೆಗಳಲ್ಲಿ ಸಂಯೋಜಿಸಿದ್ದಾರೆ. ಇವರ ಕಲಾಕೃತಿಗಳಲ್ಲಿ ಹೂವನ್ನು ಕೀಳುತ್ತಿರುವ ದೃಶ್ಯ, ಪೂಜೆ ಮಾಡುತ್ತಿರುವ ದೃಶ್ಯ, ಹೂಬುಟ್ಟಿಯನ್ನು ಹಿಡಿದು ದೇವಸ್ಥಾನಕ್ಕೆ ಹೊರಡುತ್ತಿರುವ ದೃಶ್ಯ, ನಿತ್ಯ ಕೆಲಸಕ್ಕೆ ಹೊರಡುತ್ತಿರುವ ಮಹಿಳೆ, ಹೂಮಾರುವ ಮಹಿಳೆ, ಮಾರುಕಟ್ಟೆಯಲ್ಲಿ ವ್ಯಾಪಾರದಲ್ಲಿ ನಿರತಳಾದ ಮಹಿಳೆಯರನ್ನು ರೇಖಿಸಿದ್ದಾರೆ. ಇವು ಬಹುತೇಕ ಬೆಂಗಳೂರು ನಗರ ಜನರ ನಿತ್ಯಬದುಕಿನ ಮಹಿಳಾ ಪ್ರಧಾನ ಚಿತ್ರಗಳಾಗಿವೆ.

ಮನುಷ್ಯ ಅಭಿವ್ಯಕ್ತಿಸಲು ತಾನು ಅನುಭವಿಸಿದ ವಿಷಯ ತನ್ನ ಸುತ್ತಲಿನ ಪರಿಸರ ಅವಶ್ಯಕವೆನಿಸುತ್ತದೆ. ಅಂತೆಯೇ ರಾಮಚಂದ್ರನ್‌ರು ಸಹ ಬೆಂಗಳೂರು ನಗರ ಜೀವನ ಅವರ ಮೈಮನಸ್ಸುಗಳಲ್ಲಿ ಹಾಸುಹೊಕ್ಕಾಗಿದೆ. ಈ ಮಹಿಳಾ ಪ್ರಧಾನ ಚಿತ್ರಗಳಲ್ಲಿ ಮೊದಲು ಕಪ್ಪು ಬಣ್ಣದ ಗೆರೆಗಳನ್ನು ಪ್ರಯೋಗಿಸಿ ನೆರಳು ಮತ್ತು ಬೆಳಕನ್ನು ಗ್ರಹಿಸಲು ಕುಂಚದ ಸಹಾಯದಿಂದ ತೆಳುವಾದ ವರ್ಣಲೇಪನ ಮಾಡಿದ್ದಾರೆ. ಇದರಿಂದ ಚಿತ್ರಗಳು ತ್ರಿಆಯಾಮ ಪದ್ಧತಿಯಂತೆ ಗೋಚರಿಸುತ್ತವೆ. ಇವರ ರೇಖಾ ಚಿತ್ರಗಳು ಪ್ರಸಿದ್ಧ ಕಲಾವಿದ ಎಸ್.ಎಂ. ಪಂಡಿತರ ಚಿತ್ರಗಳ ಪ್ರಭಾವಕ್ಕೊಳಪಟ್ಟಂತೆ ಗೋಚರಿಸುತ್ತದೆ. ಅವರು ಪೌರಾಣಿಕ ಚಿತ್ರಗಳನ್ನು ಅಭಿವ್ಯಕ್ತಿಸಿದರೆ ಇವರು ಸಮಕಾಲಿನ ಬದುಕಿನ ವಿವರಣೆ ಕಂಡು ಬರುತ್ತದೆ. ರಾಮಚಂದ್ರನ್‌ರು ಬಹು ಸಂಸ್ಕೃತಿಯುಳ್ಳವರಾಗಿದ್ದು ಸರ್ವಧರ್ಮಗಳ ಆಚಾರ ವಿಚಾರ, ಆರಾಧನೆ, ಉತ್ಸವ, ಜಾತ್ರೆ ಇತ್ಯಾದಿ ವಿಷಯಗಳಲ್ಲಿ ಆಸಕ್ತಿಯುಳ್ಳವರಾಗಿದ್ದಾರೆ. ಹೀಗಾಗಿಯೇ ಇವರ ಕೈಯಲ್ಲಿ ವೈವಿಧ್ಯಮಯ ಸಂಯೋಜನಾ ಚಿತ್ರಗಳು ರೂಪಗೊಂಡಿವೆ.

ರಾಮಚಂದ್ರನ್‌ರು ರೇಖಾ ಚಿತ್ರ ರಚನೆಯಲ್ಲಿ ವಿಷಯದ ಆಯ್ಕೆಯ ಸಂದರ್ಭದಲ್ಲಿ ಆ ಚಿತ್ರದ ಹಿನ್ನೆಲೆ, ಮುನ್ನೆಲೆಯ ವಿಚಾರಗಳನ್ನು ಗ್ರಹಿಸಿ ಪೇಪರ ಅಥವಾ ಕ್ಯಾನ್ವಾಸ್‌ನಲ್ಲಿ ಮುಖ್ಯ ವಿಷಯವನ್ನು ಹಾಗೂ ಅದಕ್ಕೆ ಪೂರಕ ಹಿನ್ನೆಲೆಯ ವಿಷಯವನ್ನು ಅತ್ಯಂತ ಜಾಗರೂಕತೆಯಿಂದ ಸಂಯೋಜಿಸುತ್ತಾರೆ. ಈ ಪ್ರಜ್ಞೆ ಪ್ರತಿಯೊಬ್ಬ ಚಿತ್ರಕಾರನಿಗೂ ಇರಬೇಕೆಂಬುದು ಅವರ ಅಭಿಪ್ರಾಯ. ಬೆಂಗಳೂರು ಮಾರುಕಟ್ಟೆಯಲ್ಲಿ ಜೀವನೋಪಾಯಕ್ಕಾಗಿ ವ್ಯಾಪಾರಿಗಳ ಪರದಾಟವನ್ನು ಹಾಗೂ ಗ್ರಾಹಕರ ಚೌಕಾಸಿಯ ವೈವಿಧ್ಯಮಯ ಬದುಕನ್ನು ರಾಮಚಂದ್ರನ್‌ರು ಅತ್ಯಂತ ಮನೋಜ್ಞವಾಗಿ ರೇಖೆ ಹಾಗೂ ವರ್ಣ ಮೂಲಕ ಕಟ್ಟಿಕೊಟ್ಟಿದ್ದಾರೆ. ಇವರ ರೇಖಾ ಚಿತ್ರಗಳಲ್ಲಿ ರೇಖಾಪ್ರಯೋಗಗಳು ಕ್ಷಿಪ್ರಗತಿಯಲ್ಲಿ ರೂಪಗೊಂಡಿದ್ದು ರೇಖೆಯ ಮೂಲಕವೇ ಅವರ ಮನೋವಿಕಾಸವನ್ನು ನೋಡುಗನಿಗೆ ಅಂದರೆ ಭಿಕ್ಷುಕರು, ಮನೋವಿಕಲರು, ಅಂಗವಿಕಲರು ಎದುರಿಸುತ್ತಿರುವ ಬದುಕಿನ ಚಿತ್ರಣವನ್ನು ಸಹ ರಾಮಚಂದ್ರನ್‌ರು ಕಲಾ ವಲಯಕ್ಕೆ ವ್ಯಕ್ತಪಡಿಸಿದ್ದಾರೆ. ಕಲಾವಿದನಾದವನು ಕೇವಲ ಚಿತ್ರಬರೆಯುವುದಷ್ಟೇ ಕೆಲಸವಲ್ಲ ಸಾಮಾಜಿಕ ಹಾಗೂ ಪರಿಸರದ ಜವಾಬ್ದಾರಿಯನ್ನು ಹೊಂದಿರಬೇಕಾಗುತ್ತದೆ. ನಂತಂರ ಭಾವನೆಗಳಿಗೆ ಸ್ಪಂದಿಸಬೇಕಾಗುತ್ತದೆ. ಅದುವೇ ನಿಜವಾದ ಸಾರ್ಥಕ ಬದುಕು. ಎಂದು ಕಲಾವಿದ ರಾಮಚಂದ್ರನ್‌ರು ಪ್ರತಿಕ್ರಯಿಸುತ್ತಾರೆ. ಇಂಥ ಜೀವನವನ್ನೇ ತಮ್ಮ ವೃತ್ತಿಬದುಕಿನುದ್ದಕ್ಕೂ ಪಾಲಿಸಿಕೊಂಡು ಬಂದವರಾಗಿದ್ದಾರೆ.

ಅಮೂರ್ತ ರೂಪದ ರೇಖಾಚಿತ್ರಗಳು :

ಕಲಾವಿದ ಕೆ.ಎನ್. ರಾಮಚಂದ್ರನ್‌ರು ಹೆಚ್ಚಾಗಿ ಮೂರ್ತರೂಪದ ರೇಖಾಚಿತ್ರಗಳನ್ನು ರಚಿಸಿದ್ದಾರೆ. ಆದರೆ ಮೂರ್ತರೂಪದ ಜೊತೆಗೆ ಅಮೂರ್ತರೂಪದ ಕಲ್ಲುಬಂಡೆಗಳು, ಮರದ ದೊಣ್ಣೆಗಳನ್ನು ಹಾಗೂ ವೈವಿಧ್ಯತೆಯ ಆಕಾರದ ವಸ್ತುಗಳನ್ನು ಸಂಯೋಜಿಸಿ ಅವುಗಳಿಗೆ ಕಲಾತ್ಮಕವಾಗಿ ಹೊಂದಿಕೆಯಾಗುವಂತೆ ಆಕಾರಗಳನ್ನು ಕಲ್ಪಿಸಿದ್ದಾರೆ. ಇವು ನೋಡಲು ಮೂರ್ತರೂಪದಂತೆ ಕಂಡುಬಂದರೂ ಅವು ಅಮೂರ್ತರೂಪದಲ್ಲೆ ನೋಡುಗನನ್ನು ನಿಲ್ಲಿಸುತ್ತವೆ. ಈ ಬಗೆಯ ರೇಖಾ ಚಿತ್ರಗಳು ಮೂರು ಆಯಾಮದಲ್ಲಿ ಗೋಚರಿಸುವಂತೆ ರೇಖಾ ಸಮೂಹಗಳ ದಟ್ಟತೆಯಿಂದ ಗೋಚರಿಸುತ್ತವೆ. ರಾಮಚಂದ್ರನ್‌ರು ಹೇಳುವಂತೆ ಅಮೂರ್ತರೂಪದಲ್ಲಿ ಕಲಾವಿದನ ಚಾಣಾಕ್ಷತನ ಹಾಗೂ ಅಭಿವ್ಯಕ್ತಿಸುವ ಬಗೆ ಪ್ರಮುಖವಾಗಿರಬೇಕಾಗುತ್ತದೆ. ಅಂದಾಗ ಆ ಅಮೂರ್ತರೂಪದಲ್ಲಿ ಮೂರ್ತಸ್ವರೂಪ ಹಾಗೂ ಕಲಾತ್ಮಕ ಕೌಶಲ್ಯತೆಯನ್ನು ಕಾಣುತ್ತಾನೆ. ಎಂದು ಕಲಾವಿದರು ಪ್ರತಿಕ್ರಯಿಸುತ್ತಾರೆ.

ರೇಖೆ ಪರಂಪರಾನುಗತ ಜಾಡಿನಲ್ಲಿಯೇ ಬರದೇ ಒಬ್ಬೊಬ್ಬ ಕಲಾವಿದನಿಗೂ ಭಾಷಾಶೈಲಿಯ ಮಾಧ್ಯಮದಂತಿದೆ. ಪಾಶ್ಚಾತ್ಯರಲ್ಲಿಯೂ ಭಾರತೀಯರಲ್ಲಿಯೂ ಖ್ಯಾತರಾದ ಅನೇಕ ಕಲಾವಿದರಲ್ಲಿ ಅಷ್ಟೇ ಮಾನಿತರಾದ ರೇಖಾ ಚಿತ್ರಗಾರರಿದ್ದಾರೆ. ಒಬ್ಬೊಬ್ಬರದೂ ವಿಶಿಷ್ಟ ಶೈಲಿ. ಹೆಬ್ಬಾರರದು ಒಂದು ಬಗೆ ಚಾವ್ಡಾ ಅವರದು ಇನ್ನೊಂದು ರೀತಿ ಲಕ್ಷ್ಮಾ ಗೌಡರದು ಒಂದು ರೀತಿಯಿದ್ದರೆ, ಬದ್ರಿನಾರಾಯಣ್ ಅವರದು ಇನ್ನೊಂದು ಶೈಲಿ. ಒಬ್ಬೊಬ್ಬರ ರೇಖಾಚಿತ್ರಗಳಲ್ಲಿಯೂ ಅವರವ ವ್ಯಕ್ತಿತ್ವದ ಪ್ರತ್ಯೇಕ ಮುದ್ರೆ ಕಾಣಬಹುದು.[3] ಕಲಾವಿದ ಕೆ.ಎನ್. ರಾಮಚಂದ್ರನ್‌ರದು ಪ್ರತೇಕ ಬಗೆಯ ರೇಖಾ ಶೈಲಿಯನ್ನು ಗುರುತಿಸಬಹುದು. ಇವರ ವಿಷಯ ಪ್ರಸ್ತಾವನೆ ಯಾವುದೇ ಇರಲಿ ಇವರ ರಚನಾಕ್ರಮದ ವಿಶಿಷ್ಟಶೈಲಿ ಅವರನ್ನು ಪ್ರತ್ಯೇಕಿಸುತ್ತದೆ. ಇವರ ಮೂರ್ತ ಅಥವಾ ಅಮೂರ್ತದ ರೇಖಾಚಿತ್ರಗಳು ಕಲ್ಪನೆ, ತಾಂತ್ರಿಕತೆಯ ವಿಧಾನದಿಂದ ಕೂಡಿದ್ದು ಹೊಸ ಚೈತನ್ಯದಿಂದ ನೋಡುಗನ ಮನಸ್ಸನ್ನು ವೃದ್ಧಿಗೊಳಿಸುತ್ತವೆ.

ಕಲಾವಿದ ರಾಮಚಂದ್ರನ್‌ರು ಮೂಲತಃ ತಮಿಳುನಾಡಿನ ತಂಜಾವೂರು ಪ್ರದೇಶದವರು. ತಂಜಾಮೂರು ಚೋಳ ಹಾಗೂ ಮರಾಠರ ಆಳರಸರು ತಂಜಾವೂರು ಚಿತ್ರಕಲಾ ಶೈಲಿಯನ್ನೆ ಹುಟ್ಟುಹಾಕಿದವರು. ಇಂಥ ಪಾರಂಪರಿಕ ಕಲೆಯ ನೆಲದಲ್ಲಿ ಜನ್ಮ ಪಡೆದವರು. ಇವರ ಮನೆತನವೂ ಸಹ ಕಲಾ ಕುಟುಂಬವೇ ಆಗಿತ್ತು. ಇವರ ತಂದೆ ಪ್ರಸಿದ್ಧ ಸಂಗೀತಕಾರರಾಗಿದ್ದರು. ಹೀಗಾಗಿ ಇವರಿಗೆ ಸಹಜವಾಗಿಯೇ ಕಲೆ ಬಳುವಳಿಯಾಗಿ ಬಂದಿತು.

ಬ) ಭಾವಚಿತ್ರಗಳು

ಕಲಾವಿದ ರಾಮಚಂದ್ರನ್‌ರು ತಮ್ಮ ವೃತ್ತಿ ಬದುಕಿನಲ್ಲಿ ಸಾವಿರಾರು ಭಾವಚಿತ್ರಗಳನ್ನು ವೈವಿಧ್ಯಮಯ ರೀತಿಯಲ್ಲಿ ಚಿತ್ರಿಸಿದ್ದಾರೆ. ಇಲ್ಲಿ ಭಾವಚಿತ್ರಗಳನ್ನು ಕುರಿತು ಅಧ್ಯಯನ ಮಾಡುವದಕ್ಕಿಂತ ಪೂರ್ವಭಾವಿಯಾಗಿ ಭಾವಚಿತ್ರಗಳ ಒಳ ಸಂವೇದನೆಯನು ತಿಳಿಯುವುದು ಬಹುಮುಖ್ಯವೆನಿಸುತ್ತದೆ. 'ಭಾವ' ಎಂಬುದು ಸಹೃದಯವಂತ ಮಾನವನಿಗೆ ಸಂಬಂಧಿಸಿದ್ದು. ಪ್ರಪಂಚದ ಪ್ರತಿಯೊಂದು ಜೀವಿಗೂ ಭಾವನೆ ಇದೆ. ಅದರಲ್ಲೂ ಮನುಷ್ಯನಿಗೆ ವಿಶಿಷ್ಟ ಭಾವನಾ ಶಕ್ತಿಯನ್ನು ದೇವರು ಕೊಡಮಾಡಿದ್ದಾನೆ. ಭಾವ ಎನ್ನುವುದು ಮನಸ್ಸಿಗೆ ಸಂಬಂಧಿಸಿದ್ದು ಅಂದರೆ ಮನಸ್ಸಿನ ವಿಚಾರಗಳನ್ನು ಭಾವ ಎಂದು ಗ್ರಹಿಸಲಾಗುವುದು. ಆಚಾರ್ಯ 'ಭರತ ಮುನಿ'ಯು ಭಾವನೆಯನ್ನು ರಸರೂಪದ ಮೂಲಕ ಪ್ರಸ್ತಾಪಿಸುತ್ತಾ ಶೃಂಗಾರ, ಹಾಸ್ಯ, ವೀರ, ರೌದ್ರ, ಭಯಾನಕ, ಭೀಭಿತ್ಸ, ಅಬ್ಧುತ, ಶಾಂತ ರಸಗಳು ಮನುಷ್ಯನ ಭಾವನೆಗಳನ್ನು ನಾಟ್ಯ ಶಾಸ್ತ್ರದ ಮೂಲಕ ಅಭಿವ್ಯಕ್ತಪಡಿಸಿದ್ದಾನೆ. 'ಭಾವ'ದ ಕುರಿತು ಪುರಾತನ ಆಚಾರ್ಯರಿಂದ ಇಂದಿನ ಆಧುನಿಕ ಸೌಂದರ್ಯ ಪ್ರತಿಪಾದಕರು ಸಾಕಷ್ಟು ವಿವೇಚನೆ ಮಾಡಿದ್ದಾರೆ. ಪಾಶ್ಚಿಮಾತ್ಯ ಹಾಗೂ ಪೌರ್ವಾತ್ಯ ಸೌಂದರ್ಯ ಚಿಂತಕರು, ಕವಿಗಳು, ಸಾಹಿತಿಗಳು, ಕಲಾವಿದರು ತಮ್ಮ ತಮ್ಮ ಭಾವನೆ ಮಾಧ್ಯಮದ ಮೂಲಕ ಚಿಂತನೆ ಮಾಡಿದ್ದಾರೆ. ನಾನು ಪ್ರಸ್ತುತ ಕೆ.ಎಸ್. ರಾಮಚಂದ್ರನ್‌ರ ಭಾವಚಿತ್ರಗಳನ್ನು ಕುರಿತು ಅವರ ಆಂತರಿಕ ಹಾಗೂ ಬಾಹ್ಯ ಭಾವನೆಗಳನ್ನು ಹಂಚಿಕೊಳ್ಳುವುದು ಪ್ರಸ್ತುತವೆನಿಸುತ್ತದೆ.

'ಭಾವಚಿತ್ರವೆಂದರೆ ನಿಜವಾದ ಅಥವಾ ಕಾಲ್ಪನಿಕ, ಜೀವಂತ ಅಥವಾ ಸತ್ತ ವ್ಯಕ್ತಿತ್ವವೊಂದರ ಶಿಲ್ಪ, ಚಿತ್ರ ಅಥವಾ ರೇಖಾಚಿತ್ರ, ಛಾಯಾಚಿತ್ರ ಮಾಧ್ಯಮಗಳಲ್ಲಿ ಮೂಡಿ ಬರುವ ಪ್ರತಿಬಿಂಬ'. ಇಲ್ಲಿ ಆ ವ್ಯಕ್ತಿತ್ವದ ದೈಹಿಕ ಅಥವಾ ನೈತಿಕ ವಿಶೇಷ ಲಕ್ಷಣಗಳು ಅಥವಾ ಎರಡನ್ನೂ ಆ ಬಿಂಬಿಸುವಿಕೆ ಹೊಂದಿಬರುವುದು. ಆಧುನಿಕ ಸಂದರ್ಭದಲ್ಲಿ ಭಾವಚಿತ್ರಕಲಾ ಪ್ರಕಾರ ತನ್ನ ಐತಿಹಾಸಿಕ ಮತ್ತು ಸಾಮಾಜಿಕ ದೃಷ್ಟಿಗಳಿಂದ ಪರಿಗಣಿಸಲ್ಪಡುತ್ತದೆ. 'ಬಿಂಬಿಸುವ' ಸಂಪ್ರದಾಯ ಮತ್ತು ವಿಕಸನದ ವಿಧಗಳು, ಭಾವಚಿತ್ರ ಮತ್ತು ಸಮಾಜಗಳ ನಡುವಿನ ಸಂಬಂಧ ಭಾವಚಿತ್ರ ಪ್ರಕಾರ ಪ್ರತಿಬಿಂಬಿಸುವ ಮತ್ತು ದಾಖಲಿಸುವ ಮನೋಭಾವ ಇತ್ಯಾದಿಗಳು ಈ ಪ್ರಕಾರದ ಬಗ್ಗೆ ಆಸಕ್ತಿ ಕೆರಳಿಸುತ್ತವೆ.[4] ಕಲಾವಿದನಾದವನು ರೂಪದರ್ಶಿಯ ಮುಖಭಾವವನ್ನು ಕುಂಚ ಹಾಗೂ ವರ್ಣಗಳ ಮೂಲಕ ಅಭಿವ್ಯಕ್ತಿಸುವ ಕ್ರಮ ವೈವಿಧ್ಯತೆಯಿಂದ ಕೂಡಿರುತ್ತದೆ. ನಮ್ಮ ಚಿತ್ರಕಾರರು ತಾವು ಕಂಡಂತೆ ಅನೇಕ ಭಾವಗಳನ್ನು ರೇಖೆ ಅಥವಾ ವರ್ಣಚಿತ್ರಗಳ ಮೂಲಕ ಪ್ರಸ್ತುತಪಡಿಸಿದ್ದಾರೆ. ಪಾಶ್ಚಾತ್ಯ ಕಲಾವಿದರಾದ ಡಾವಿಂಚಿ, ರಾಫೆಲ್, ಡೇಗಾ, ಮಾನೆಟ, ವ್ಯಾನಗಾಗ್, ಗೌಗಿನ್, ಪಿಕಾಸೊ, ಡಾಲಿ ಇತ್ಯಾದಿ ಪ್ರಖ್ಯಾತ ಕಲಾವಿದರು ಭಾವಚಿತ್ರಗಳನ್ನು ಪೇಪರ, ಕ್ಯಾನ್ವಾಸ್ ಇತ್ಯಾದಿ ಪರಿಕರಗಳ ಮೇಲೆ ಸೆರೆ ಹಿಡಿದ್ದಾರೆ. ಭಾರತೀಯರಲ್ಲಿ ಪ್ರಮುಖರಾದ ರಾಜಾ ರವಿವರ್ಮ, ಟ್ಯಾಗೂರ್ ಸಹೋದರರು, ಬೆಂಗಾಲಿ ಕಲಾವಿದರು, ಮುಂಬೈ ಕಲಾ ಶಾಲೆಯ ಕಲಾವಿದರು ಹೀಗೆ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಇವರಲ್ಲಿ ರವಿವರ್ಮ, ಅಮೃತ ಶೇರ್‌ಗಿಲ್, ಹುಸೇನ್, ಹೆಬ್ಬಾರ್ ಇತ್ಯಾದಿ ಕಲಾವಿದರು ರಾಷ್ಟ್ರ ಅಂತರಾಷ್ಟ್ರೀಯ ಮಟ್ಟದಲ್ಲಿ ನಿಲ್ಲುತ್ತಾರೆ. ನಮ್ಮ ಕರ್ನಾಟಕದ ಪ್ರಸಿದ್ಧ ಕಲಾವಿದರಾದ ಎಸ್.ಎಂ. ಪಂಡಿತ್, ಚನ್ನಬಸಯ್ಯ, ಕೆ. ವೆಂಕಟಪ್ಪ, ಶಾಂತಲಿಂಗಪ್ಪ ಪಾಟೀಲ. ಹೆಬ್ಬಾರ, ದಂಡಾವತಿಮಠ, ಡಿ.ಜಿ. ಬಡಿಗೇರ, ಈಶ್ವರ ಮುರುಗೋಡ ಸಹೋದರರು, ಮಿಣಜಗಿ, ಟಿ.ಪಿ. ಅಕ್ಕಿ, ಡಿ.ವಿ.

ಹಾಲಭಾವಿ, ಆರ್.ಎಂ. ಹಡಪದ, ಕೆ.ಟಿ. ಶಿವಪ್ರಸಾದ, ಶೆಣೈ, ನಂಜುಂಡರಾವ್ ಇನ್ನೂ ಹಲವಾರು ಕಲಾವಿದರು ತಮ್ಮ ವೃತ್ತಿ ಬದುಕಿನುದ್ದಕ್ಕೂ ಭಾವಚಿತ್ರಗಳನ್ನು ಸೆರೆಹಿಡಿದಿದ್ದಾರೆ. ಇಂಥ ಪ್ರಮುಖ ಭಾವಚಿತ್ರ ಕಲಾವಿದರಲ್ಲಿ ವಲಸೆ ಕನ್ನಡಿಗ ಕೆ.ಎನ್. ರಾಮಚಂದ್ರನ್‌ರು ಒಬ್ಬರಾಗಿದ್ದಾರೆ.

ರಾಮಚಂದ್ರನ್‌ರು ಹೇಳುವಂತೆ ಭಾವಚಿತ್ರವೆಂದರೆ ಯಥಾವತ್ತಾಗಿ ರೂಪಿಸುವುದಲ್ಲ. ವ್ಯಕ್ತಿಯ ವಿವಿಧ ಭಾವನೆಗಳನ್ನು ತಾನು ಕಂಡಂತೆ ಸಹೃದಯನಿಗೆ ತೆರೆದಿಡುವುದು. ವ್ಯಕ್ತಿಯ ಮತ್ತು ಕಲಾವಿದನ ಮುಖಾಮುಖಿ ಸಂಘರ್ಷ ಸಂವೇದನೆಗೊಂಡು ಕ್ಯಾನ್ವಾಸ ಮೇಲೆ ರೂಪ ಪಡೆಯುತ್ತದೆ. ಇದು ನೈಜ, ಮೂರ್ತ, ಅಮೂರ್ತ. ಇದು ಆಧುನಿಕ, ಇದು ಸಮಕಾಲೀನವೆಂದು ರೂಪದಲ್ಲಿ ಭೇದಗಳನ್ನು ಗುರುತಿಸುವುದು ಆ ನಂತರದ ಕೆಲಸವಾಗಿದೆ. ಹೌದು ಇದು ಅಕ್ಷರಶಃ ಸತ್ಯ. ಪ್ರೇಕ್ಷಕನು ಆ ಭಾವಚಿತ್ರವನ್ನು ಹೇಗೆ ಸ್ವೀಕರಿಸುತ್ತಾನೆಂಬುದು ಪ್ರೇಕ್ಷಕನಿಗೆ ಬಿಟ್ಟದ್ದು. ಯಾಕೆಂದರೆ ಪ್ರೇಕ್ಷಕ ಭಿನ್ನ ಅಭಿರುಚಿವುಳ್ಳವನು. ಒಬ್ಬನಿಗೆ ಒಂದು ರೀತಿ ಕಂಡದ್ದು ಇನ್ನೊಬ್ಬನಿಗೆ ಇನ್ನೊಂದು ರೀತಿ ಕಾಣುತ್ತದೆ. ಇದನ್ನು ದೃಶ್ಯಕಲೆಯ ವೈಶಿಷ್ಟ್ಯವೆಂದೇ ಹೇಳಬಹುದು.

ಕೆ.ಎನ್. ರಾಮಚಂದ್ರನ್‌ರು ಎಲ್ಲ ಬಗೆಯ ಎಲ್ಲ ವರ್ಗದವರ ಭಾವಚಿತ್ರಗಳನ್ನು ಚಿತ್ರಿಸಿದ್ದಾರೆ. ಇವರು ಸಾವಿರಕ್ಕಿಂತಲೂ ಅಧಿಕ ಸಂಖ್ಯೆಗಳಲ್ಲಿ ಭಾವ ಚಿತ್ರಗಳನ್ನು ರಚಿಸಿದ್ದು, ಅವರೇ ಹೇಳುವಂತೆ ಒಬ್ಬ ಭಿಕ್ಷುಕನಿಂದ ಹಿಡಿದು ರಾಷ್ಟ್ರಾಧ್ಯಕ್ಷರಂತಹ ಪ್ರಮುಖ ವ್ಯಕ್ತಿಗಳ ಭಾವಚಿತ್ರಗಳನ್ನು ಚಲನಚಿತ್ರ ನಾಯಕ, ನಾಯಕಿಯರ ಹಾಗೂ ನಟ ನಟಿಯರ ಚಿತ್ರಗಳನ್ನು ಹೆಚ್ಚು ಹೆಚ್ಚು ಸಂಖ್ಯೆಗಳಲ್ಲಿ ಪ್ರಯೋಗಿಸಿದ್ದಾರೆ. ಅದರಲ್ಲಿ ಪ್ರಮುಖವಾಗಿ ಕನ್ನಡ ಪ್ರಸಿದ್ಧ ನಟರಾದ ಡಾ. ರಾಜಕುಮಾರ, ಉದಯಕುಮಾರ, ಅನಂತನಾಗ, ಶಂಕರನಾಗ, ವಿಷ್ಣುವರ್ಧನ, ಕಲ್ಯಾಣಕುಮಾರ, ಪ್ರಭಾಕರ, ಎಂ.ಪಿ. ಶಂಕರ ಇತ್ಯಾದಿ ನಟರ ಭಾಚಿತ್ರಗಳನ್ನು ಅದರಂತೆ ಪ್ರಸಿದ್ಧ ನಟಿಯರಾದ ಭಾರತಿ, ಆರತಿ, ಮಂಜುಳಾ, ಜಯಮಾಲ, ಫಂಡರಿಬಾಯಿ, ಜಯಂತಿ, ಪದ್ಮಾವಾಸಂತಿ, ವಿನಯ ಪ್ರಸಾದ ಹೀಗೆ ನಾಯಕಿಯರ ಭಾವಚಿತ್ರಗಳನ್ನು ಎರಡು ದಶಕಗಳೂದ್ದಕ್ಕೂ ಅವರನ್ನು ವಿವಿಧ ಭಂಗಿಗಳಲ್ಲಿ ಚಿತ್ರಿಸಿದ್ದಾರೆ. ಅವರ ಪ್ರತಿಯೊಂದು ಭಾವನೆಗಳನ್ನು ಅತ್ಯಂತ ಸೂಕ್ಷ್ಮವಾಗಿ ಅಭಿವ್ಯಕ್ತ ಪಡಿಸಲು ರಾಮಚಂದ್ರನ್‌ರು ಪ್ರಯತ್ನಪಟ್ಟಿದ್ದಾರೆ. ಅದೇ ರೀತಿ ಪೋಷಕ ನಟರಾದ ಎಂ.ಪಿ. ಶಂಕರ, ಅಶ್ವಥ್, ಲೋಹಿತಾಶ್ವ. ಹಾಸ್ಯನಟರಾದ ಬಾಲಕೃಷ್ಣ, ಎಸ್.ಎಸ್. ರಾವ್, ಬಿರಾದಾರ, ಉಮಾಶ್ರೀ ಹೀಗೆ ಇವರ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಇಂಥ ಕಲಾವಿದರ ಪಾತ್ರಗಳ ವೈವಿಧ್ಯಮಯ ಮುಖಭಾವಗಳನ್ನು ಪ್ರೇಕ್ಷಕನಿಗೆ ಮನ ಮುಟ್ಟುವಂತೆ ರಚನೆ ಮಾಡಿಕೊಟ್ಟಿದ್ದು ಅವರ ಪರಿಶ್ರಮದ ಪ್ರತಿ ಫಲವೆಂದೇ ಭಾವಿಸಬಹುದು. ಹಾಸ್ಯ, ರೌದ್ರ, ಶೃಂಗಾರ, ಭಯ, ದುಃಖದಂತಹ ಭಾವನೆಗಳನ್ನು ಕಲಾವಿದರಲ್ಲಿ ವರ್ಣಗಳ ಮೂಲಕ ತುಂಬುವುದು ಅಷ್ಟು ಸುಲಭದ ಕೆಲಸವಲ್ಲ. ಇಂಥ ಪ್ರಯತ್ನ ಮಾಡಿರುವುದು ಕೆ.ಎನ್. ರಾಮಚಂದ್ರನ್‌ರು. ಇಂಥ ಕೆಲಸಗಳು ನಾಟಕಕಾರರಲ್ಲೂ ನಡೆಯುತ್ತಿದ್ದವು. ನಾಟಕಕಾರರ ಭಿನ್ನ ಪಾತ್ರಗಳನ್ನು ರಾಮಚಂದ್ರನ್‌ರು ಅತ್ಯಂತ ಮನೋಜ್ಞವಾಗಿ ರಚನೆಮಾಡಿಕೊಟ್ಟಿದ್ದಾರೆ.

ಕಲಾವಿದ ಕೆ.ಎನ್. ರಾಮಚಂದ್ರನ್‌ರ ಭಾವಚಿತ್ರಗಳು ಚಲನಚಿತ್ರ ಕಲಾವಿದರು, ನಾಟಕ ಕಲಾವಿದರು, ಸಂಗೀತಕಾರರು, ಕವಿಗಳು, ಸಾಹಿತಿಗಳು, ರಾಜಕಾರಣಿಗಳು, ಮಹಿಳೆಯರು, ಮಕ್ಕಳು ಹಾಗೂ ಇತರೆ ವರ್ಗದ ಜನರ ಭಾವನೆಗಳ ಓರೆ-ಕೋರೆಗಳನ್ನು ತಮ್ಮ ವರ್ಣವೈವಿಧ್ಯತೆಯಲ್ಲಿ

ಕಂಡುಕೊಂಡಿದ್ದಾರೆ. ಸಾಮಾಜದ ಆಂತರಿಕ ಹಾಗೂ ಬಾಹ್ಯ ನೋಟಗಳನ್ನು ಭಾವಚಿತ್ರಗಳ ಮೂಲಕ ಕಟ್ಟಿಕೊಡುವಲ್ಲಿ ಸಫಲರಾದ್ದಾರೆ. ಇವರ ಕೆಲವೊಂದು ಚಿತ್ರಗಳು ಅವರು ಕನಸಿನ ರೂಪದಲ್ಲಿ ಕಂಡುಕೊಂಡಿದ್ದನ್ನು ಕೃತಿಗಳ ಮೂಲಕ ಅನಾವರಣಗೊಳಿಸಿದ್ದು ವಿಶೇಷ. ಭಾವಚಿತ್ರದ ಒಂದು ಪರಿಕಲ್ಪನೆ ನಮ್ಮ ಕಲಾವಲಯದಲ್ಲಿ ಅಥವಾ ಕಲಾವಿದರಲ್ಲಿ ಮೂಡಿದ್ದು ಇಂದು ನಿನ್ನೆಯದಲ್ಲ ಅದೂ ಪ್ರಮಾದಿಕಾಲದಿಂದಲೂ ಕಾಲಕಾಲಕ್ಕೆ ತಕ್ಕಂತೆ ತನ್ನ ಸ್ವರೂಪವನ್ನು ಬದಲಾಯಿಸುತ್ತಾ ಬಂದಿದೆ. ಆದಿ ಮಾನವನು ತಾನು ಕಂಡಂತ ಪ್ರಾಣಿಗಳ ಮನುಷ್ಯನ ಚಟುವಟಿಕೆಗಳನ್ನು ಚಿತ್ರಿಸಿದ್ದು ನಮ್ಮ ಆ ಕಾಲಘಟ್ಟದಲ್ಲಿ ರಚಿತಗೊಂಡ ಚಿತ್ರಗಳು ತಿಳಿಸುತ್ತವೆ. ಮಾನವ ನಾಗರಿಕತೆ ಹಂತದಲ್ಲಿ ತಲುಪಿದಂತೆ ಅವನ ವಿಚಾರಗಳು ಆಚಾರಗಳು ಸಹ ಪ್ರಬುದ್ಧ ಸ್ಥಿತಿಯನ್ನು ತಲುಪಿದವು. ಮಧ್ಯಕಾಲದಲ್ಲಿ ಚಿತ್ರಕಲೆ ಅದರಲ್ಲೂ ಭಾವಚಿತ್ರಕಲೆ ಒಂದು ಧರ್ಮ, ಆಚಾರ-ವಿಚಾರಗಳಂತಹ ಪರಿಕಲ್ಪನೆಯಲ್ಲಿ ತೊಡಗಿಕೊಂಡಿದ್ದರು. ಹೀಗಾಗಿ ತಾವು ತಮ್ಮ ಧರ್ಮ ಹಾಗೂ ದೇವರನ್ನು ಕಂಡಂತೆ ಅವರ ಶಕ್ತಿ ಸಾಮರ್ಥ್ಯ ಹಾಗೂ ವ್ಯಕ್ತಿತ್ವವನ್ನು ಶಿಲ್ಪ ಮತ್ತು ಚಿತ್ರಗಳ ಮೂಲಕ ರೂಪಕೊಟ್ಟಿದ್ದಾರೆ. ಅವರು ಹಾಕಿದ ಪರಿಕಲ್ಪನೆಯೇ ಇಂದಿನವರೆಗೂ ನಮ್ಮವರು ಮುಂದುವರೆಸಿಕೊಂಡು ಬಂದಿದ್ದಾರೆ. ಇದಕ್ಕೆ ರಾಮಚಂದ್ರನ್‌ರ ಭಾವಚಿತ್ರಗಳೇನೂ ಹೊರತಲ್ಲ. ಇವರು ಬಳಸುವ ಮಾಧ್ಯಮ, ರಚನಾ ಶೈಲಿ ಹಾಗೂ ಪ್ರತಿಯಲ್ಲಿನ ತಂತ್ರಗಾರಿಕೆಗಳು ಮಾತ್ರ ಬದಲಾವಣೆಗಳಾಗಿವೆ. ಇನ್ನುಳಿದ ವಿಚಾರಗಳು ನಮ್ಮ ಪೂರ್ವಜರು ರೂಪಿಸಿದ ಆಕೃತಿಗಳೇ ಆಗಿವೆ. ಉದಾಹರಣೆಯಾಗಿ ಹೇಳುವುದಾದರೆ ಶಿವನ ಪರಿಕಲ್ಪನೆ, ವಿಷ್ಣುವಿನ ಪರಿಕಲ್ಪನೆ ಹಾಗೂ ಇತರೆ ದೇವಾನು ದೇವತೆಗಳ ಪರಿಕಲ್ಪನೆ, ರಾಮಾಯಣ ಮಹಾಭಾರದ ಕಥಾ ದೃಶ್ಯಗಳು ಒಂದು ನಿದರ್ಶನ. ಈ ಬಗೆಯ ಚಿತ್ರಗಳನ್ನು ರಾಮಚಂದ್ರನ್‌ರು ಸಹ ರಚಿಸಿದ್ದಾರೆ. ಇಲ್ಲಿ ಅಧ್ಯಯನದ ದೃಷ್ಟಿಯಿಂದ ಹತ್ತಿರದಿಂದ (closeup) ಕುಳಿತು ರೂಪದರ್ಶಿಗಳ ಭಾವಚಿತ್ರಗಳನ್ನು ಪ್ರತ್ಯೇಕಿಸಿ ಅಧ್ಯಯನ ಮಾಡಲಾಗುತ್ತಿದೆ. ಅಂದರೆ ರೂಪದರ್ಶಿಗಳ ಶಿರಭಾವ, ಅರ್ಧಭಾವ ಹಾಗೂ ಪೂರ್ಣ ಪ್ರಮಾಣದ ಭಾವಗಳನ್ನು ಮಾತ್ರ ಅಧ್ಯಯನ ಮಾಡಲಾಗುತ್ತಿದೆ.

ಭಾವಚಿತ್ರ ಕಲ್ಪನೆ ಬದಲಾದಂತೆ ದೃಶ್ಯಕಲೆಯ ಪರಿಭಾಷೆಯಲ್ಲಿ ಈ ಎಲ್ಲ ಪದರೂಪಗಳೂ ತಮ್ಮ ರೂಪನಿಷ್ಪತ್ತಿಗಳೊಂದಿಗೆ ಹಲವು ಅರ್ಥಗಳನ್ನು ಹೊಂದುತ್ತಾ ಬಂದಿವೆ. ವಿಶಾಲಾರ್ಥದಲ್ಲಿ 'Image' and Imitation ಎರಡನ್ನೂ ಪರಸ್ಪರ ಬದಲಿಯಾಗಿಯೂ ಬಳಸಲಾಗುತ್ತಿತ್ತು.[5] ಅಂದರೆ ಭಾವಚಿತ್ರ ಪರಿಕಲ್ಪನೆಯು ಕೇವಲ ಬಾಹ್ಯನೋಟವನ್ನು ವಿಕ್ಷಿಸದೇ ಅದರ ಒಳಹೊರ ಸಂವೇದನೆಯ ಸೂಕ್ಷ್ಮ ಗ್ರಹಿಕೆಗೂ ಅವಕಾಶವಿರುತ್ತದೆ. ಎಂಬುದು ಇಂದಿನ ಪರಿಕಲ್ಪನೆ ಕಲಾವಿದರಲ್ಲಿ ಒಡಮೂಡಿದೆ. ರಾಮಚಂದ್ರನ್‌ರು ಸಹ ರೂಪದರ್ಶಿಯ ಬಾಹ್ಯ ನೋಟವನ್ನು ಗ್ರಹಿಸದೇ ಆ ವ್ಯಕ್ತಿಯ ಆಂತರಿಕ ವೈಪರಿತ್ಯತೆಯನ್ನು ಸಹ ತರಲು ಪ್ರಯತ್ನಿಸಿದ್ದಾರೆ. ಕನ್ನಡದ ಮೇರು ನಟ ಡಾ. ರಾಜಕುಮಾರ ಚಿತ್ರಗಳಲ್ಲಿ ಆ ಕಥೆಗೆ ಸಂಬಂಧಿಸಿದಂತೆ ಹಾಗೂ ಆ ಸನ್ನಿವೇಶಕ್ಕೆ ಪೂರಕವಾಗಿರುವಂತಹ ಅವರ ವ್ಯಕ್ತಿತ್ವವನ್ನು ಪರದೆಯ ಮೇಲೆ ವರ್ಣ ಸಂಚಲನ ಮೂಡಿಸಿದ್ದಾರೆ. ಅವರ ಶೃಂಗಾರ ಭಾವ, ರೌದ್ರ, ದುಃಖ, ವೀರದಂತಹ ಮೂಲ ಸ್ವರೂಪವನ್ನು ರಾಮಚಂದ್ರನ್‌ರು ಅತ್ಯಂತ ಮನೋಜ್ಞವಾಗಿ ನಿರೂಪಿಸಿದ್ದಾರೆ.

ರಾಮಚಂದ್ರನ್‌ರ ಭಾವಚಿತ್ರಗಳನ್ನು ಮುಖ್ಯವಾಗಿ

- **ಚಲನಚಿತ್ರ ಕಲಾವಿದರ ಭಾವಚಿತ್ರಗಳು**

- **ಸಾಹಿತಿ ಹಾಗೂ ಕವಿಗಳ ಭಾವಚಿತ್ರಗಳು**
- **ಕಲಾವಿದರ ಭಾವಚಿತ್ರಗಳು**
- **ಇತರೆ ವ್ಯಕ್ತಿಗಳ ಭಾವಚಿತ್ರಗಳೆಂದು ವಿಭಜಿಸಿಕೊಂಡು ವಿವೇಚಿಸಬಹುದು.**

- **ಚಲನಚಿತ್ರ ಕಲಾವಿದರ ಭಾವಚಿತ್ರಗಳು.**

ಕೆ.ಎನ್. ರಾಮಚಂದ್ರನ್‌ರು ಭಾವಚಿತ್ರಗಳನ್ನು ರಚಿಸಲು ಪ್ರಾರಂಬಿಸಿದ್ದೆ ಚಲನಚಿತ್ರದ ಬ್ಯಾನರ್‌ಗಳಿಂದ. ಇಲ್ಲಿ ಚಲನಚಿತ್ರದ ಪ್ರಚಾರಕ್ಕಾಗಿ ಆ ಚಲನಚಿತ್ರದ ನಾಯಕ, ನಾಯಕಿ, ಪೋಷಕ ನಟ ನಟಿಯರ ಹಾಗೂ ಹಿನ್ನಲೆ ಕಲಾವಿದರ ಭಾವ ದೃಶ್ಯಗಳನ್ನು ದೊಡ್ಡ ದೊಡ್ಡ ಪರದೆಗಳ ಮೂಲಕ ರಚನೆ ಮಾಡಲಾಗುತ್ತಿತ್ತು. ಸಣ್ಣ ಚಿತ್ರಗಳನ್ನು (Photo Images) ಪ್ರಚಾರಕ್ಕೆ ಬೇಕಾದ ಅಳತೆಗಳ ಪರದೆಗಳನ್ನು (cut-outs) ನಿರ್ಮಿಸಿ ಸ್ಕೇಲ್ ಸಹಾಯದಿಂದ ಚಿತ್ರಗಳನ್ನು ದೊಡ್ಡದಾಗಿ ಪರಿವರ್ತಿಸಿ ಆ ಕಥೆಗೆ ಸಂಬಂಧಿಸಿದಂತೆ ಚಲನಚಿತ್ರದ ಪಾತ್ರಧಾರಿಗಳ ಭಾವನೆಗಳನ್ನು ವರ್ಣಗಳ ಮೂಲಕ ಕಟ್ಟಿಕೊಡಲು ಪ್ರಯತ್ನಿಸುತ್ತಿದ್ದರು. ಅಲ್ಲಿ ನಾಯಕ ನಯಕಿಯರ ಚಿತ್ರಗಳು ಪ್ರಧಾನ ರೂವಾರಿಗಳಾಗಿ ಬಿಂಬಿಸಿ ಹಿನ್ನಲೆಯಾಗಿ ಪೋಷಕ ನಟರನ್ನು ಸಂಯೋಜಿಸಲಾಗುತ್ತಿತ್ತು. ಇಂಥ ಚಿತ್ರಗಳನ್ನು ಒಂದೇ ಸಲ ಬರೆಯಲು ಸಾಧ್ಯ. ಅದೇ ರೀತಿ ಇನ್ನೊಂದು ಚಿತ್ರ ಬರೆಯಬೇಕಾದರೆ ಮತ್ತೆ ಸ್ಕೇಲ್ ಹಾಕಿಕೊಂಡು ಅಷ್ಟೇ ಸಮಯ ತೆಗೆದುಕೊಂಡು ಇನ್ನೊಂದು ಚಿತ್ರ ರಚಿಸಬೇಕಾಗುತ್ತಿತ್ತು. ಹೀಗಾಗಿ ರಾಮಚಂದ್ರನ್‌ರಿಗೆ ಕನ್ನಡ ಯಾವುದೇ ನಟ ನಟಿಯರ ಭಾವಚಿತ್ರಗಳನ್ನು ಬರೆಯಲು ಕಷ್ಟವಾಗುತ್ತಿರಲಿಲ್ಲ. ಅವರನ್ನು ಸ್ಮರಣರೂಪದಲ್ಲೇ ಸುಲಭವಾಗಿ ಚಿತ್ರಿಸುತ್ತಿದ್ದೆ ಎಂದು ಅಭಿಪ್ರಾಯ ಪಡುತ್ತಾರೆ.

- **ಸಾಹಿತಿ ಹಾಗೂ ಕವಿಗಳ ಭಾವಚಿತ್ರಗಳು.**

ಕಲಾವಿದ ಕೆ.ಎನ್. ರಾಮಚಂದ್ರನ್‌ರು ಚಲನಚಿತ್ರ ಪ್ರಚಾರ ಕಲೆಯ ಕಲಾವಿದರಾಗಿ ಕೆಲಸ ಮಾಡಿರುವುದರಿಂದ ಇವರಿಗೆ ಇನ್ನಿತರ ಯಾವುದೇ ವ್ಯಕ್ತಿಗಳ ಭಾವಚಿತ್ರಗಳನ್ನು ಬರೆಯುವುದು ಕಷ್ಟವೆನಿಸಲಿಲ್ಲ. ಅಲ್ಲಿ ಕಲಾವಿದರ ದೃಶ್ಯ ಸಂದರ್ಭಕ್ಕೆ ತಕ್ಕಂತೆ ಭಾವನೆಗಳನ್ನು ಅಭ್ಯಸಿದರೆ ಇನ್ನಿತರ ವ್ಯಕ್ತಿಗಳ ಭಾವಚಿತ್ರಗಳನ್ನು ಸಾಮಾನ್ಯವಾಗಿ ಗ್ರಹಿಕೆಗೂ ತಟ್ಟುವಂತೆ ಚಿತ್ರಿಸಿದ್ದಾರೆ. ಇಲ್ಲಿ ವ್ಯಕ್ತಿಯ ವ್ಯಕ್ತಿತ್ವ ಹಾಗೂ ಸ್ಥಾನಮಾನಗಳನ್ನು ಅರಿತುಕೊಂಡು ಅಭಿವ್ಯಕ್ತ ಪಡಿಸುವುದು ಸೂಕ್ತವೆನಿಸುತ್ತದೆ. ಎಂದು ಕಲಾವಿದರು ಅಭಿಪ್ರಾಯ ಪಡುತ್ತಾರೆ. ರಾಮಚಂದ್ರನ್‌ರು ನಮ್ಮ ನಾಡಿನ ಪ್ರಸಿದ್ದ ಸಾಹಿತಿಗಳಾದ ತ.ರಾ.ಸು, ಅ.ನ.ಕೃ, ವಿ.ಸೀತಾರಾಮಯ್ಯ, ಬಿ.ಎಂ.ಶ್ರೀ, ಪು.ತಿ.ನ, ಪಂಜೆ ಮಂಗೇಶರಾಯರು, ಗೋವಿಂದ ಪೈ, ಜ್ಞಾನಪೀಠ ಪುರಸ್ಕೃತರಾದ ಕುವೆಂಪು, ದ.ರಾ. ಬೇಂದ್ರೆ, ಶಿವರಾಮ ಕಾರಂತ, ವಿ.ಕೃ ಗೋಕಾಕ, ಮಾಸ್ತಿ ವೆಂಕಟೇಶ ಅಯ್ಯಂಗಾರ, ಯು.ಆರ್. ಅನಂತಮೂರ್ತಿ, ಗೀರಿಶ ಕಾರ್ನಾಡ್, ಚಂದ್ರಶೇಖರ ಕಂಬಾರರಂತಹ ಮೇರು ವ್ಯಕ್ತಿಗಳ ಭಾವ ಚಿತ್ರಗಳನ್ನು ರಚಿಸುವುದೆಂದರೆ ಮೈಮನಸ್ಸು ತುಂಬಿರುತ್ತದೆ. ಒಂದು ತರಹ ಧನ್ಯತಾಭಾವ ಉಕ್ಕುತ್ತದೆ. ಆ ಹೆಸರು ಕೇಳಿದರೇ ಒಂದು ತರಹದ ರೋಮಾಂಚನ ಹೀಗಿದ್ದಾಗ ಅಂಥ ವ್ಯಕ್ತಿಗಳ

ಭಾವನೆಗಳನ್ನು ವರ್ಣಗಳ ಮೂಲಕ ಅಭಿವ್ಯಕ್ತಪಡಿಸುವುದು ಕಲಾವಿದನ ಸಾರ್ಥಕ ಬದುಕು ಕಂಡು ಕೊಂಡಂತೆ ಎಂದು ಅಭಿಪ್ರಾಯ ಪಡುತ್ತಾರೆ.

ಕಲಾವಿದ ರಾಮಚಂದ್ರನ್‌ರು ನಾಡಿನ ಸಮಕಾಲಿನ ಹೀರಿಯ ಸಾಹಿತಿಗಳಾದ ಜಿ.ಎಸ್.ಎಸ್. ಕಾದಂಬರಿಕಾರ ಎಸ್.ಎಲ್. ಬೈರಪ್ಪ, ಕಥೆಗಾರ ಯಶವಂತ ಚಿತ್ತಾಲ, ಭಂಡಾಯ ಸಾಹಿತಿಗಳಾದ ದೇವನೂರು ಮಹದೇವ, ಕವಿ ಸಿದ್ದಲಿಂಗಯ್ಯ, ಸಿನಿಮಾ ಸಾಹಿತಿಗಳಾದ ದೊಡ್ಡ ರಂಗೇಗೌಡ, ನಾಗತೀಹಳ್ಳಿ ಚಂದ್ರಶೇಖರ, ಬರಗೂರು ರಾಮಚಂದ್ರಪ್ಪ ಇನ್ನೂ ಅನೇಕ ಮಹನಿಯರ ಭಾವಚಿತ್ರಗಳನ್ನು ಚಿತ್ರಿಸಿದ್ದಾರೆ. ಈ ಎಲ್ಲ ಪ್ರಸಿದ್ದ ವ್ಯಕ್ತಿಗಳ ಭಾವನೆಗಳಲ್ಲಿ ಹಾಗೂ ವ್ಯಕ್ತಿತ್ವದಲ್ಲಿ ಭಿನ್ನತೆಯಾದರು ಸಹ ತಮ್ಮದೆ ಆದ ವೈಚಾರಿಕ ಚಿಂತನೆಗಳನ್ನು ನಾಡಿನ ಜನತೆಯ ಮುಂದೆ ತೆರೆದಿಟ್ಟಿದ್ದಾರೆ. ರಾಮಚಂದ್ರನ್‌ರು ತೈಲ ಮಾಧ್ಯಮದಲ್ಲಿ ಇವರ ಭಿನ್ನ ಭಾವನೆಗಳನ್ನು ಅತ್ಯಂತ ನೈಜವಾಗಿ ನೋಡುಗನನ್ನು ವಿಸ್ಮಯಗೊಳಿಸಿದ್ದಾರೆ. ಈ ಕಲಾವಿದರು ಯಾವುದೇ ಭಾವಚಿತ್ರಗಳನ್ನು ಗಮನಿಸಿದರೆ ಅವರಲ್ಲಿನ ವರ್ಣಗಾರಿಕೆ ತಂತ್ರಶೈಲಿ ಅತ್ಯಂತ ವೈವಿಧ್ಯತೆಯಿಂದ ಕೂಡಿದೆ. ಆ ವ್ಯಕ್ತಿಯ ಭಾವನೆಗಳನ್ನು ಅತ್ಯಂತ ಸೂಕ್ಷ್ಮವಾಗಿ ಸೆರೆಹಿಡಿದಿದ್ದಾರೆ. ಈ ಕಲಾವಿದರು ರೂಪದರ್ಶಿಗಳನ್ನು ಎಷ್ಟು ಗಮನಿಸುತ್ತಾರೆ ಎಂದರೆ ವ್ಯಕ್ತಿಯ ಸೂಕ್ಷ್ಮ ಭಾವನೆಗಳನ್ನು ಸಹ ಕೂಲಂಕುಶವಾಗಿ ಗಮನಿಸುತ್ತಾರೆ. ಹುಬ್ಬಿನ ಕೂದಲು, ರೆಪ್ಪೆಯ ಕೂದಲು, ಸುಕ್ಕುಗಟ್ಟಿದ ನೆರಿಗೆಗಳನ್ನು ಸಹ ಪ್ರತ್ಯೇಕಿಸುವಲ್ಲಿ ಸಫಲರಾಗಿದ್ದಾರೆ.

ಛಾಯಾಚಿತ್ರಗಳನ್ನು ರೂಪದರ್ಶಿಯ ಭಾವವನ್ನು ಅತ್ಯಂತ ನೈಜ ರೂಪದ ಸಾದೃಶ್ಯವನ್ನು ಕೊಡಬಲ್ಲದಾದರೂ ಸಹ ಅದು ಕಲಾಕೃತಿಯಾಗದು ಕ್ಯಾಮರಾ ನೋಡಲಾರದು ಇದು ನಮೂದು ಮಾಡುವ ಅಥವಾ ದಾಖಲುಮಾಡುವ ಕೆಲಸ ಮಾಡುವಷ್ಟೇ, ಅವರ ಕಣ್ಣು ಮನುಷ್ಯನ ಮನಸ್ಸಿನ ಕಣ್ಣು; ಕೈ ಅಲ್ಲವಲ್ಲ ಹೀಗಾಗಿ ಮುಂದಿನ ಬೆಳವಣಿಗೆಯಲ್ಲಿ ಫಾವಿಷ್ಟರು ಮತ್ತು ಜರ್ಮನ್ ಎಕ್ಸ್‌ಪ್ರೆಸ್‌ನಿಷ್ಟರು ಚಿತ್ರಾತ್ಮಕ ರೂಪಕ್ಕೆ ಮನಶಾಸ್ತ್ರಿಯ ತೀವ್ರತೆಯನ್ನು ತಂದುಕೊಟ್ಟರು. ಅದೇ ಸಂದರ್ಭದಲ್ಲಿ ಜರ್ಮನಿಯಲ್ಲಿ ಓಲಿಯೋಗ್ರಾಫ್ ಪ್ರಿಂಟ್ ಮಾಧ್ಯಮದ ಭಾವ ಚಿತ್ರಗಳು ಕಾಣೀಸಿಕೊಂಡವು ! ಮ್ಯಾತಿಸ್, ಬಾದಿಲ್‌ರವರುಗಳ ದೃಷ್ಟಿಯಲ್ಲಿ ಭಾವಚಿತ್ರಣದ ನಿರ್ವಹಣೆಯಲ್ಲಿ ಅಸಮಾನತೆ ಕಂಡಿತು. ಈ ಅಸಮಾನತೆ ರೂಪಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುವಲ್ಲಿ ಅಡ್ಡಿಯಾಯಿತು.[7] ಇಂಥ ಪಾಶ್ಚಿಮಾತ್ಯ ವರ್ಣ ಚಿತ್ರಕಾರರ ದೃಷ್ಟಿಯಲ್ಲಿ ಭಾವಚಿತ್ರದ ಪರಿಕಲ್ಪನೆ ಕೇವಲ ನೈಜ ವಿವರವಲ್ಲ. ಅದು ಮಾನಸಿಕ ಹಾಗೂ ಭಾವೋದ್ವೇಗದ ಪರಾಕಾಷ್ಠೆಯಾಗಿದೆ. ವ್ಯಾನ್‌ಗಾಗ್ ಹಾಗೂ ಪಿಕಾಸ್ಸೊ ತಮ್ಮ ಸ್ವ ಭಾವಚಿತ್ರಗಳನ್ನು ರಚಿಸಿಕೊಂಡಿರುತ್ತಾರೆ. ಬಾಹ್ಯರೂಪವು ಅವರಂತೆಯೇ ಹೊಲಿಕೆ ಇಲ್ಲವಾದರೂ ರೇಖೆ ಹಾಗೂ ವರ್ಣಗಳ ಲೇಪಗಳಿಂದ ಬಾಹ್ಯ ರೂಪಕ್ಕೆ ಅವರ ಮಾನಸಿಕ ಅಸಮತೋಲನವನ್ನು ಸಹ ಅಭಿವ್ಯಕ್ತಪಡಿಸಿದ್ದಾರೆ. ಅದೇ ಇನ್ನೊಬ್ಬ ಸ್ಪೇನ್ ಕಲಾವಿದ 'ಸಾಲ್ವಿಡರ್ ಡಾಲಿ' ಭಾವಚಿತ್ರಗಳು ಒಂದು ವರ್ಗಕ್ಕೆ ಹೋಲಿಕೆಯಾಗುತ್ತದೆ. ಇವನು ಭಾವಚಿತ್ರಗಳನ್ನು ಅತ್ಯಂತ ನೈಜ ರೂಪಗಳಲ್ಲಿ ರೂಪಿಸಿದ್ದು, ರೂಪದರ್ಶಿಗಳ ಅವಯವಗಳನ್ನು ಸ್ಥಾನ ಪಲ್ಲಟಗೊಳಿಸಿ ಭ್ರಮನಾತ್ಮಕ ಭಾವ ಸಂಯೋಜನೆ ಮಾಡಿದ್ದಾನೆ. ಇಂತಹ ಕಲಾವಿದರ ಪ್ರಯೋಗಗಳು ಕಲಾವಿದ ಕೆ.ಎಸ್. ರಾಮಚಂದ್ರನ್‌ರ ಭಾವಚಿತ್ರಗಳಲ್ಲಿ ನಡೆದಿವೆ.

- **ಕಲಾವಿದರ ಭಾವಚಿತ್ರಗಳು**

ಕೆ.ಎನ್. ರಾಮಚಂದ್ರನ್‌ರು ಸಾವಿರಕ್ಕಿಂತಲೂ ಹೆಚ್ಚು ಭಾವಚಿತ್ರಗಳನ್ನು ಚಿತ್ರಿಸಿದ್ದಾರೆ. ಅದರಲ್ಲಿ ನಾಡಿನ ಹೆಸರಾಂತ ಸಂಗೀತ ಕಲಾವಿದರು, ನಾಟಕ ಕಲಾವಿದರು, ಚಿತ್ರಕಲಾವಿದರು ಒಟ್ಟಾರೆ ಲಲಿತಕಲೆಗಳ ಕಲಾವಿದರ ಹಲವಾರು ಭಾವಚಿತ್ರಗಳನ್ನು ರಚಿಸಿದ್ದಾರೆ. ನಾಡಿನ ಹೆಸರಾಂತ ಸಂಗೀತ ಕಲಾವಿದರಾದ ವಿದ್ಯಾಭೂಷಣ, ಗಂಗೂಬಾಯಿ ಹಾನಗಲ, ಭೀಮಶೇನ ಜೋಶಿ, ಮಲ್ಲಿಕಾರ್ಜುನ ಮನ್ಸೂರ, ರಾಜಗುರು, ಪುಟ್ಟರಾಜ ಗವಾಯಿಗಳು, ಚಲನಚಿತ್ರ ಗಾಯಕರಾದ ಪಿ.ಬಿ. ಶ್ರೀನಿವಾಸ, ಎಸ್.ಪಿ. ಬಾಲಸುಬ್ರಮಣ್ಯಂ, ಡಾ. ರಾಜಕುಮಾರ, ಜೆಸುದಾಸ, ಎಸ್. ಜಾನಕಿ, ವಾಣಿ ಜೈರಾಮ, ಎಲ್.ಆರ್. ಈಶ್ವರಿ, ಮಂಜುಳಾ ಗುರುರಾಜ ಸುಗಮ ಸಂಗೀತ ಕಲಾವಿದರಾದ ಸಿ. ಅಶ್ವತ್, ಮೈಸೂರು ಅನಂತಸ್ವಾಮಿ, ರಾಜು ಅನಂತಸ್ವಾಮಿ, ಜಿ.ವಿ. ಅತ್ರಿ, ಬಿ.ಕೆ. ಸುಮಿತ್ರ, ಸಂಗೀತಾ ಕಟ್ಟಿ, ಅರ್ಚನಾ ಉಡುಪ, ಅನುರಾಧ ಧಾರೇಶ್ವರ ಹೀಗೆ ಅನೇಕ ಹಿರಿಯ ಕಿರಿಯ ಸಂಗೀತ ಕಲಾವಿದರ ಭಾವಚಿತ್ರಗಳನ್ನು ಬರೆದಿದ್ದಾರೆ. ಇಲ್ಲಿ ರಾಮಚಂದ್ರನ್‌ರ ಒಂದು ದೂರ ದೃಷ್ಟಿಯನ್ನು ವಿವೇಚಿಸುವುದು ಮುಖ್ಯವೇನಿಸುತ್ತದೆ. ಇವರು ಯಾವುದೇ ಪ್ರಾಂತ್ಯ, ದೇಶ, ಜಾತಿ, ವರ್ಗ, ಮತ ಹಾಗೂ ಧರ್ಮಕ್ಕೆ ಸೀಮಿತವಾಗಿರದೆ ಒಬ್ಬ ನಾಡಿನ ಸಾಂಸ್ಕೃತಿಕ ರಾಯಭಾರಿಯಾಗಿ ಕೆಲಸ ಮಾಡಿದ್ದಾರೆ. ಯಾಕೆಂದರೆ ಯಾವುದೇ ಕಲಾವಿದ ಒಂದು ಭಾವುಕಕ್ಕೆ ಒಳಗಾಗದೆ ಒಂದು ನಾಡಿನ ಅಭ್ಯುದಯದ ಕಡೆಗೆ ಗಮನ ಹರಿಸುತ್ತಾನೆ. ರಾಮಚಂದ್ರನ್‌ರು ಸಹ ಇಂತಹ ಕೆಲಸದಲ್ಲಿ ತೊಡಗಿಕೊಂಡಿದ್ದಾರೆ ಅಂದಾಗ ಇವರೊಬ್ಬ ವಿಭಿನ್ನ ಕಲಾವಿದರಾಗಿ ತಮ್ಮನ್ನು ಈ ನಾಡಿಗೆ ಪರಿಚಯಿಸಿಕೊಂಡಿರುತ್ತಾರೆ.

ರಾಮಚಂದ್ರನ್‌ರು ಚಿತ್ರಕಲೆಯಲ್ಲಿ ಮಹೊನ್ನತ ಕೆಲಸ ಮಾಡಿದವರ ಪ್ರಸಿದ್ಧ ಕಲಾವಿದರ ಹಾಗೂ ಸಮವಯಸ್ಕರ ಕಲಾವಿದರ ಭಾವಚಿತ್ರಗಳನ್ನು ರಚನೆ ಮಾಡಿರುತ್ತಾರೆ. ವೃತ್ತಿಯಲ್ಲಿ ಒಂದೇ ರೀತಿಯ ಕೆಲಸ ಮಾಡಿದರು ಸಹ ಸಂತೋಷಕ್ಕಾಗಿ ಹಾಗೂ ಸ್ವಅಭಿಮಾನಕ್ಕಾಗಿ ಅನೇಕ ಕಲಾವಿದರನ್ನು ಚಿತ್ರಿಸಿರುತ್ತಾರೆ. ಇವರು ರಚಿಸಿದ ನಾಡಿನ ಹೆಸರಾಂತ ಕಲಾವಿದ ಎಂ.ಬಿ. ಪಾಟೀಲರ ಹಾಗೂ ಕಲಾ ವಿಮರ್ಶಕ ಚಿ.ಸು. ಕೃಷ್ಣಶೇಟ್ಟಿಯವರ ಭಾವಚಿತ್ರಗಳು ಇವಕ್ಕೆ ಸಾಕ್ಷಿಯಾಗಿವೆ ಲಭ್ಯವಿರುವ ಎರಡು ಭಾವಚಿತ್ರಗಳಲ್ಲಿ ಬಾಹ್ಯರೂಪದ ವಿಶ್ಲೇಷಣೆಯ ಜೊತೆಗೆ ಅವರ ಅಂತರಾತ್ಮವನ್ನು ತೆರೆದಿಡುವ ಪ್ರಯತ್ನವಿದೆ. ಬಣ್ಣಗಳ ವೈವಿಧ್ಯತೆಗಳು, ಚರ್ಮದ ಕಾಂತಿ, ಮಾಂಸಖಂಡಗಳ ಏರಿಳಿತ, ತೆಲೆಗೂದಲು, ಕುರುಚಲ ಗಡ್ಡ, ಮುಖದ ಭಾವನೀರೂಪನೆಯು ಅತ್ಯಂತ ಸಹಜ ಸ್ಥಿತಿಯಲ್ಲಿವೆ. ಅಲ್ಲದೆ ಅವರ ಮುಖದ ಮೇಲೆ ಸುತ್ತಲಿನ ವಸ್ತುಗಳ ಪ್ರತಿ ಫಲಿತ ಬಣ್ಣಗಳು ಸಹ ಇವರ ಅಪಾರದರ್ಶಕ ವರ್ಣ ಸಂಯೋಜನೆಯಲ್ಲಿ ಲೇಪನಗೊಂಡಿವೆ. ಎಸ್.ಎಂ.ಪಂಡಿತ, ರಾಜಾರವಿವರ್ಮ ಹಳಿಜೋಳರಂತಹ ಕಲಾವಿದರ ವರ್ಣ ತಂತ್ರಗಳೂ ಸಹ ಕಲಾಕೃತಿಗಳಲ್ಲಿ ಮೂಡಿವೆ ಎಂಬ ಪರಿಕಲ್ಪನೆ ನೋಡುಗನಲ್ಲಿ ಒಡಮೂಡುತ್ತದೆ. ಆದರೆ ಇವರು ಬ್ಯಾನರ್ ಕಲಾವಿದರಾದುದ್ದರಿಂದ ಕೃತಕ ವರ್ಣ ಛಾಯೇಯ ಚಲನಚಿತ್ರ ನಾಯಕ ನಟ–ನಟಿಯರ ಭಾವಗಳ ಅಭ್ಯಾಸ ಪ್ರಕ್ರಿಯೆಯು ಇವರ ಬೇರೆ ವ್ಯಕ್ತಿಗಳ ಭಾವ ಚಿತ್ರಗಳಲ್ಲಿ ಅನಾವರಣಗೊಂಡಿದ್ದನ್ನು ಕಾಣಬಹುದು. ಕೇಲವೊಂದು ಸಲ ಕಲಾವಿದರೆ ಹೇಳುವಂತೆ ಕಲಾವಿದ ಅನುಭವ ಹೊಂದಿದಂತೆ ತನ್ನತನವನ್ನು ತನ್ನ ವೃತ್ತಿ ಬದುಕಿನಲ್ಲಿ ಕಾಣಲು ಬಯಸುತ್ತಾನೆ. ಚಿತ್ರಕಾರನಲ್ಲೂ ಸಹ ಸಹಜವಾಗಿ ಈ ಪ್ರಕ್ರಿಯೇ ಹೊಮ್ಮುತ್ತದೆ. ಚಿತ್ರಕಾರನು ಸಹಜವೆಂಬಂತೆ ತನ್ನದೆ ಆದ ಶೈಲಿಯಲ್ಲಿ ಗುರುತಿಸಿಕೊಳ್ಳಲು ಪ್ರಯತ್ನಿಸಿತ್ತಾನೆ ಆ ತರಹದ ಕೆಲಸವು ಕಲಾವಿದ ಕೆ.ಎನ್. ರಾಮಚಂದ್ರನ್‌ರ ವೃತ್ತಿ ಬದುಕಿನಲ್ಲಿ ಕಾಣಲಾಗುತ್ತದೆ.

ಭಾವಚಿತ್ರಗಳನ್ನು ನೋಡುವಾಗ ಆ ವ್ಯಕ್ತಿಗಳ ತಲೆಗಳ ಆಕಾರಗಳಿಂದ ಅವರ ದೇಹ–ಜನಾಂಗಗಳನ್ನು ತಿಳಿಯುವ ಅಧ್ಯಯನ ಶಾಸ್ತ್ರಗಳಿವೆ. 'ಕಪಾಲ' ಶಾಸ್ತ್ರವನ್ನಿಲ್ಲಿ ಹೆಸರಿಸಬಹುದು. ರಾಷ್ಟ್ರವೊಂದರ ಜನಾಂಗವನ್ನು ಅವಮಾನಿಸುವ ಉದ್ದೇಶಕ್ಕಾಗಿಯೇ ಅಲ್ಲಿನ ಆದಿ ಮಾನವ ಜನಾಂಗದ ತಲೆಬುರುಡೆಗಳನ್ನು ಕುರಿತು ಪಕ್ಷಪಾತಿಯ ಊಹೆಗಳನ್ನು ಮಾಡಬಹುದು. ಬಾವಚಿತ್ರದ ವ್ಯಕ್ತಿಗಳ ವ್ಯಕ್ತಿತ್ವ ಕಲೆಯ ಅಂಶಗಳು ಮುಖ್ಯವಾಗಿದ್ದರು ಬೇರೆಯ ಉದ್ದೇಶಗಳು ರಾಜಕಾರಣಕ್ಕಾಗಿಯೋ ಭಾವಚಿತ್ರಗಳನ್ನು ಸಂಗ್ರಹಿಸುವ ಸಾಧ್ಯತೆಗಳಿವೆ.[7] ಅಂದರೆ ಒಂದು ರಾಷ್ಟ್ರದ ಸಾಂಸ್ಕೃತಿಕ, ರಾಜಕೀಯ ಹಾಗೂ ಧಾರ್ಮಿಕ ವೈವಸ್ಥೆಯ ಪ್ರತಿನಿಧಿಗಳ ಭಾವ ವ್ಯಕ್ತಿತ್ವವನ್ನು ಹೊರ ಜಗತ್ತಿಗೆ ವಿವಿಧ ಮುಖಗಳೊಂದಿಗೆ ತೆರೆದಿಡುವ ಪ್ರಯತ್ನ ಕಲಾವಿದರ ಮೇಲಿದೆ. ಜರ್ಮನಿಯ ಹಿಟ್ಲರ್‌ನ ಮುಖ, ಇತ್ತೀಚಿನ ಸದ್ಧಾಮ್ ಹುಸೇನ್, ಲಿಬಿಯಾದ ಸರ್ವಾಧಿಕಾರಿ, ಪಾಕಿಸ್ತಾನ್, ಇರಾಕ್, ಅಫಘಾನಿಸ್ತಾನಿನಂತಹ ರಾಷ್ಟ್ರಗಳಲ್ಲಿ ಭಯೋತ್ಪಾದನಾ ಸಂಘಟನಾ ರೂವಾರಿಗಳ ಕರಾಳ ಮುಖವನ್ನು ಭಾವಚಿತ್ರಗಳ ಮೂಲಕ ತೋರಿಸುವುದಲ್ಲದೇ ಆ ದೇಶದ ಮಾನವಿಯ ಮೌಲ್ಯಗಳ ಮರ್ಮವನ್ನು ತಿಳಿಯಬಹುದಾಗಿದೆ. ಇಂತಹ ಪ್ರಯತ್ನ ನಮ್ಮ ಕಲಾಕಾರರು ಬಹು ಹಿಂದಿನಿಂದಲೂ ಹೋರ ಜಗತ್ತಿಗೆ ತೆರೆದಿಡುತ್ತಾ ಬಂದಿದ್ದಾರೆ.

ಇಂದು ಭಾವಚಿತ್ರಕಲೆಯ ಪ್ರಕಾರ ತನ್ನ ವ್ಯಾಪ್ತಿ ಉದ್ದೇಶಗಳನ್ನು ಹಲವು ದಿಕ್ಕುಗಳಲ್ಲಿ ವಿಸ್ತರಿಸಿಕೊಳ್ಳುತ್ತದೆ. ವ್ಯಕ್ತಿ ಭಾವಚಿತ್ರ, ಸ್ವಭಾವ ಚಿತ್ರ, ಇಬ್ಬರ ಹಾಗೂ ಗುಂಪು ಭಾವಚಿತ್ರಗಳ ಪ್ರಕಾರ ಕಲೆಯ ಉದ್ದೇಶ ಮೀರಿ ಮಾಂತ್ರಿಕ ಶಕ್ತಿಯನ್ನು ಪಡೆದುಕೊಳ್ಳುತ್ತದೆ. ಇಲ್ಲಿ ಮಾಂತ್ರಿಕ ಶಕ್ತಿಯ ಸ್ವರೂಪ ಎಂದರೆ ಕಲಾವಿದನ ಗ್ರಹಿಕೆ, ಆಯ್ಕೆ ಹಾಗೂ ಉದ್ದೇಶಗಳನ್ನು ಹೊತಾಗಿ ಆರ್ಥಿಕರೂಪವನ್ನು ಅವನಲ್ಲಿ ಒಡಮೂಡಿಸಲಾಗುತ್ತದೆ. ಕೇವಲ ಭಾವಚಿತ್ರಗಳನ್ನು ರಚಿಸುವ ಉದ್ದೇಶವಲ್ಲ ಹೊರತಾಗಿ ಸಾಮಾಜಿಕ, ಆರ್ಥಿಕ, ಹಾಗೂ ಧಾರ್ಮಿಕ ಜವಾಬ್ದಾರಿಯನ್ನು ಕಲಾವಿದನ ಮೇಲೆ ಇರುತ್ತದೆ. ಕಲಾವಿದ ಕೆ.ಎನ್. ರಾಮಚಂದ್ರನ್‌ರು ಸಹ ಇಂಥಹ ಜವಾಬ್ದಾರಿಯುತ ಕಲಾವಿದರಾಗಿ ಇಂದು ಕೆಲಸ ನಿರ್ವಹಿಸುತ್ತಿದ್ದಾರೆ. ಆ ನೆಲೆಯಲ್ಲಿ ಇವರ ಭಾವಚಿತ್ರಗಳು ರೂಪಗೊಳ್ಳುತ್ತಿವೆ.

- **ಇತರೆ ವ್ಯಕ್ತಿಗಳ ಭಾವಚಿತ್ರಗಳು**

ಕೆ.ಎನ್. ರಾಮಚಂದ್ರನ್‌ರು ಒಂದೇ ವರ್ಗಕ್ಕೆ ಸಂಬಂಧಿಸಿದ ವ್ಯಕ್ತಿಗಳ ಭಾವಚಿತ್ರಗಳನ್ನು ಅವರ ವೃತ್ತಿ ಬದುಕಿನಲ್ಲಿ ಚಿತ್ರಿಸಿದ್ದು ಕಂಡುಬರುವುದಿಲ್ಲ. ಭಾವಚಿತ್ರಗಳ ಸಂಖ್ಯೆ ಅಪಾರವಾಗಿರುವುದರಿಂದ ರಾಷ್ಟ್ರ ಹಾಗೂ ನಾಡಿನ ಖ್ಯಾತ ನಾಮರ ಭಾವಗಳ ಜೋತೆಗೆ ಜನಸಾಮಾನ್ಯರ ಭಾವಚಿತ್ರಗಳನ್ನು ರಚಿಸಿಕೊಟ್ಟಿದ್ದಾರೆ. ಇಂತಹ ಖಾಸಗಿ ವ್ಯಕ್ತಿಗಳ ಭಾವಚಿತ್ರಗಳನ್ನು ಸಹ ಕಲಾವಿದರು ಅತ್ಯಂತ ಭಾವನಾತ್ಮಕವಾಗಿ ರೂಪಿಸಿದ್ದಾರೆ. ಇಂತಹ ಭಾವಚಿತ್ರಗಳು, ಅಧಿಕಾರಿಗಳು, ಶ್ರೀಮಂತರು, ವ್ಯಾಪರಸ್ಥರು ಇನ್ನೂ ಹಲವಾರು ಬಗೆಯ ಜನರ ರೂಪಗಳನ್ನು ಕ್ಯಾನ್‌ವಾಸ್‌ನಲ್ಲಿ ಸೆರೆಹಿಡಿದಿದ್ದಾರೆ. ಇವರ ಖಾಸಗಿ ಭಾವಚಿತ್ರಗಳು ಬಹಳಷ್ಟಿದ್ದು, ನನಗೆ ಲಭ್ಯವಿರುವ ಕಲಾಕೃತಿಗಳನ್ನು ಇಟ್ಟುಕೊಂಡು ಪ್ರಸ್ತುತ ಸಂದರ್ಭದಲ್ಲಿ ಅಧ್ಯಯನ ಮಾಡಲಾಗಿದೆ. ಇವರು 'ಸ್ತ್ರೀ–ಮರುಷರ' ಭಾವಚಿತ್ರಗಳನ್ನು ಛಾಯಾಚಿತ್ರ ಯಂತ್ರ ಕೆಲಸ ಮಾಡುವಂತಹ ನೈಜ ವಿವರಗಳಂತೆ ಅನಾವರಣಗೊಳಿಸಿದ್ದಾರೆ ಅಂದರೆ ಆ ಭಾವಚಿತ್ರವನ್ನು ತಕ್ಷಣ

ನೋಡಿದರೆ ಅದೊಂದು ಛಾಯಾಚಿತ್ರ ಮುದ್ರಣದಂತೆ ನೋಡುಗನಿಗೆ ಭಾಸವಾಗುತ್ತದೆ. ನೋಡುಗನು ಒಂದು ಕ್ಷಣ ಮೂಕವಿಸ್ಮಿತನಾಗುತ್ತಾನೆ. ಅವರದೇ ಒಂದು ಸ್ವ-ಭಾವಚಿತ್ರವನ್ನು ಗಮನಿಸುವುದಾದರೆ ಅವರ ಶಿರಭಾವದಲ್ಲಿ ಚರ್ಮದ ಕಾಂತಿ ಮಾಂಸಖಂಡಗಳ ಏರಿಳಿತ, ತಲೆಯ ಕೂದಲಿನ ಸೂಕ್ಷ್ಮ ವಿವರ, ಕಣ್ಣಿನ ಕಾಂತಿ, ನೋಟ ಇವು ಅವರನ್ನು ಜೀವಂತಗೊಳಿಸುತ್ತವೆ. ಇವರ ಮುಖದ ಪ್ರತಿಯೊಂದು ಭಾಗಗಳನ್ನು ಅತ್ಯಂತ ಸೂಕ್ಷ್ಮವಾದ ನೈಜ ವಿವರಣೆಯಿಂದ ವ್ಯಕ್ತಗೊಳಿಸಿದ್ದಾರೆ. ಇದು ಅವರ ತಾಳ್ಮೆ ನಿರಿಕ್ಷಣಾ ಶಕ್ತಿಯನ್ನು ಒರಗಹಚ್ಚುತ್ತದೆ. ಅವರ ಕುಂಚದ ತಾಳ್ಮೆಯನ್ನು ಪರೀಕ್ಷಿಸುತ್ತದೆ. ಇಂತಹ ಹಲವಾರು ಭಾವಚಿತ್ರಗಳು ಕೆ.ಎಸ್. ರಾಮಚಂದ್ರನ್‌ರ ಕುಂಚದ ಕೈ ಚಳಕಕ್ಕೆ ಸಾಕ್ಷಿಯಂತಿವೆ.

ರಾಮಚಂದ್ರನ್‌ರು ನಾಡಿನ ಪ್ರಬುದ್ಧ ಕಲಾ ಬರಹಗಾರ ಕೆ.ವಿ. ಸುಬ್ರಮಣ್ಯ ಅವರ ಒಂದು ಭಾವಚಿತ್ರವನ್ನು ರಚಿಸಿದ್ದು ಇದು ಛಾಯಾಚಿತ್ರದ ಪ್ರತಿಕೃತಿಯಾಗಿದೆ. ಈ ಭಾವಚಿತ್ರದಲ್ಲಿ ಸುಬ್ರಹ್ಮಣ್ಯರ ಚರ್ಮದ ತೇಜಸ್ಸು, ಇಳಿಯ ವಯಸ್ಸಿನ ಮುಖದ ಮುಗ್ದಭಾವ ಕನ್ನಡಕದ ನೈಜ ಸ್ವರೂಪ, ಕುರುಚಲು ಗಡ್ಡ, ಕಂದುಬಿಳಿಯ ಮಿಶ್ರಿತ ಕೂದಲಿನ ಸೂಕ್ಷ್ಮ ವಿವರಣವನ್ನು ಅತ್ಯಂತ ಜೀವಕಳೆಯಿಂದ ಕುಂಚದಲ್ಲಿ ಮೇಳೈಸಿದ್ದಾರೆ. ಹಿನ್ನಲೆಯಾಗಿ ಕಂದು ಮಿಶ್ರಿತ ವರ್ಣಗಳ ಸಂಶೋಜಯಿಂದ ಒಟ್ಟಾರೆ ಮುಖಭಾವಕ್ಕೆ ಜೀವ ಕಳೆಯನ್ನು ಒಡಮೂಡಿಸಲು ಪ್ರಯತ್ನಿಸಿದ್ದಾರೆ. ರಾಮಚಂದ್ರನ್‌ರು ಅವರ ಸಂಬಂಧಿಗಳ ಭಾವಚಿತ್ರಗಳನ್ನು ರಚಿಸಿದ್ದು ಇವುಗಳಲ್ಲಿ ರಾಮಚಂದ್ರನ್‌ರ ತಂದೆ-ತಾಯಿಯರ ಧರ್ಮಪತ್ನಿ ಹಾಗೂ ಮಕ್ಕಳ ಭಾವಚಿತ್ರಗಳೂ ಪ್ರಮುಖವಾಗಿವೆ. ಇವರೇಲ್ಲ ತಮಿಳು ಸಂಸ್ಕೃತಿಯನ್ನು ಪ್ರತಿನಿಧಿಸುವ ಉಡುಗೆ-ತೊಡುಗೆಗಳನ್ನು, ಆಭರಣಗಳನ್ನು ಧರಿಸುವ ವಿಧಾನ, ಆರಾಧಿಸುವ ದೈವ ವೈವಧ್ಯತೆಗಳನ್ನು ಇವರ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. ಈ ಭಾವಚಿತ್ರಗಳು ತೈಲ ಮಾಧ್ಯಮದಲ್ಲಿ ರಚನೆಗೊಂಡಿದ್ದು ರೂಪದರ್ಶಿಗಳ ಚರ್ಮದ ಬಣ್ಣ, ದೈಹಿಕ ಲಕ್ಷಣಗಳು, ಉಡುಪುಗಳ ಬಣ್ಣ ನೋಡುಗನನ್ನು ಒಂದು ಕ್ಷಣ ನಿಲ್ಲಿಸುತ್ತದೆ. ಈ ಕಲಾವಿದರು ಯಾವುದೇ ಒಂದು ಭಾವಚಿತ್ರ ರಚಿಸಬೇಕಾದರೆ ಅವರು ಅನುಸರಿಸುವ ರಚನಾ ಕೌಶ್ಯಲೆವು ಅತ್ಯಂತ ಸೃಜನಾತ್ಮಕವಾಗಿದೆ. ರಾಮಚಂದ್ರನ್‌ರ ವಿವೇಕಯುತ ಮನಸ್ಥಿತಿ, ಸೃಜನಶೀಲ ಕೌಶಲ್ಯ, ಸೂಕ್ಷ್ಮ ಗ್ರಹಿಕೆಗೆ ಹಾಗೂ ಸೂಕ್ಷ್ಮ ವಿವರಗಳ ಚಿಂತನೆಯು ಅಸಾಧಾರಣವಾದುದು. ಇದು ಅವರ ಪ್ರತಿಭಾ ಕೌಶಲ್ಯವನ್ನು ಮೌಲ್ಯಕರೀಸುತ್ತವೆ.

ಕಲಾವಿದ ರಾಮಚಂದ್ರನ್‌ರು ಯಾವುದೇ ರೀತಿಯ ಭಾವಚಿತ್ರಗಳನ್ನು (ಶಿರಭಾವ ಹಾಗೂ ಪೂರ್ಣ ಭಾವ) ರಚಿಸಬೇಕಾದರೆ ಮೊದಲು ರೂಪದರ್ಶಿಯಾಗಲಿ ಅಥವಾ ಛಾಯಾಚಿತ್ರವಾಗಲಿ ಅದನ್ನು ಸೂಕ್ಷ್ಮವಾಗಿ ಯೋಚಿಸುತ್ತಾರೆ. ನಂತರ ಪೆನ್ಸಿಲ್ ಅಥವಾ ಚಾರ್‌ಕೋಲ್‌ನಿಂದ ರೇಖಾಚಿತ್ರ ಬರೆದುಕೊಂಡು, ತೈಲವರ್ಣದಿಂದ ಅಪಾರದರ್ಶಕ ಪದ್ಧತಿಯಂತೆ ವರ್ಣ ಸಂಯೋಜನೆ ಮಾಡುತ್ತಾರೆ. ರಾಮಚಂದ್ರನ್‌ರ ಭಾವಚಿತ್ರಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಬ್ರಿಟಿಷ್ ಅಕಾಡೆಮಿಕ್ ಶೈಲಿಯನ್ನು ಅನುಸರಿಸುತ್ತವೆ. ಅಲ್ಲದೆ ರಾಜಾ ರವಿವರ್ಮ, ಪಂಡಿತ್‌ರಂಥ ಮಹಾನ್ ಕಲಾಕಾರರ ಚಿತ್ರಗಳನ್ನು ಮರುಕಳಿಸುವಂತೆ ತೋರುತ್ತವೆ. ಒಟ್ಟಾರೆ ಕಲಾವಿದ ರಾಮಚಂದ್ರನ್‌ರು ಸಹಸ್ರ ಸಂಖ್ಯೆಗಳಲ್ಲಿ ಭಾವಚಿತ್ರಗಳನ್ನು ತಮ್ಮ ವೃತ್ತಿ ಬದುಕಿನೂದ್ದಕ್ಕೂ ರಚನೆ ಮಾಡಿದ್ದು, ಪ್ರಸ್ತುತ ಎಂಭತ್ತರ ಸಂವತ್ಸರದ ಸಮೀಪವಿರುವ ಅತ್ಯಂತ ಉತ್ಸಾಹಿ ಕಲಾವಿದರಾದ ಇವರು ಇನ್ನೂ ಮಹತ್ತರವಾದ ಭಾವಚಿತ್ರಗಳನ್ನು ನಿರಿಕ್ಷಿಸುವುದರಲ್ಲಿ ಯಾವುದೇ ರೀತಿಯ ಸಂದೇಹವಿಲ್ಲ.

3) ಸಂಯೋಜನಾ ಚಿತ್ರಗಳು

ಕಲಾವಿದ ಕೆ.ಎನ್. ರಾಮಚಂದ್ರನ್‌ರು ಒಬ್ಬ ಪ್ರಬುದ್ಧ ವರ್ಣ ಚಿತ್ರಕಾರನಾಗಿ ಕಲಾಕ್ಷೇತ್ರವನ್ನು ಶ್ರೀಮಂತಗೊಳಿಸುತ್ತಿದ್ದಾರೆ. ನಾಡಿನ ಒಬ್ಬ ಸಾಂಸ್ಕೃತಿಕ ರಾಯಭಾರಿಯಾಗಿ ತಮ್ಮ ಜವಾಬ್ದಾರಿಯುತ ಕಲಾ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದಾರೆ. ದೃಶ್ಯ ಕಲಾವಿದ ಲೋಕಜೀವನದ ಸುಖ ದುಃಖಗಳಿಂದ ಪ್ರಭಾವಿತನಾಗಿರುತ್ತಾನೆ. ಇಂತಹ ಕಲಾನುಭವನ್ನು ಪಡೆಯುವಾಗ ಅವನು ಸಾಮಾನ್ಯ ವ್ಯಕ್ತಿಮಾತ್ರ ಕಲಾವಿದನಲ್ಲ. ಆದರೆ ಕಲಾ ಸೃಷ್ಟಿಯಲ್ಲಿ ತೊಡಗಿದಾಗ ಇವನ ನಿಲುವು ಬೇರೆಯಾಗಿರುತ್ತದೆ. ಅದು ಸೃಜನಾತ್ಮಕವಾದ ಮನಸ್ಸಿನ ಜೊತೆ ಕೆಲಸ ಮಾಡುತ್ತದೆ. ಇದು ಲೋಕಾನುಭವ ಪಡೆಯುವ ಮನಸ್ಸಿಗಿಂತಲೂ ಬೇರೆಯೇ ಆದದ್ದು. ದೃಶ್ಯಕಲಾವಿದನ ಮನಸ್ಸನ್ನು ಪ್ರವೇಶಿಸಿದ ಲೋಕದ ಭಾವ ಮತ್ತು ಅನುಭೂತಿಗಳೂ ಲೌಕಿಕ ಸ್ತರವನ್ನು ಮೀರಿ ಇಲ್ಲಿ ಪರಿವರ್ತಿತವಾಗುತ್ತದೆ. ಆದುದರಿಂದಲೇ ಅಂತಹ ಕಲಾಕೃತಿಯಿಂದ ನಾವು ಪಡೆಯುವ ತಾದಾತ್ಮ್ಯವು ಲೋಕದ ಅನುಭೂತಿಗಳಿಗಿಂತ ಭಿನ್ನವಾಗಿರುತ್ತದೆ. ಎಂದು ಟಿ.ಎಸ್. ಎಲಿಯಟ್ ಸ್ಪಷ್ಟ ಪಡಿಸುತ್ತಾನೆ.[8] ಇದು ಕೇವಲ ಕಲಾವಿದನಿಗೆ ಮಾತ್ರ ಸೀಮಿತವಲ್ಲ ಪ್ರತಿಯೊಬ್ಬ ವ್ಯಕ್ತಿಗೂ ಲೋಕಾನುಭವ ಪರಿಕಲ್ಪನೆ ಇರಬೇಕಾಗುತ್ತದೆ. ಅಂದಾಗ ಯಾವುದೇ ರೀತಿಯ ಕ್ಷೇತ್ರದಲ್ಲಿ ಕೆಲಸ ಮಾಡಲು ಸಹಕಾರಿಯಾಗುತ್ತದೆ. ಇಲ್ಲಿ ಕಲಾವಿದ ಕೆ.ಎನ್. ರಾಮಚಂದ್ರನ್‌ರ ಸಂಯೋಜನಾ ಚಿತ್ರಗಳನ್ನು ಕುರಿತು ವಿವೇಚಿಸುವುದಾದರೆ ಅವರ ಸಂಯೋಜಿಸಿದ ಪ್ರತಿಯೋಂದು ಸಂಯೋಜನಾ ಚಿತ್ರವು ಲೋಕದ ಒಂದೊಂದು ಅನುಭವ ಕೊಡುತ್ತದೆ. ಮಾನಸಿಕ ಹಾಗೂ ದೈಹಿಕವಾದ ಲೋಕಾನೂಭಾವವು ಇವರ ಸಂಯೋಜನಾ ಚಿತ್ರಗಳಲ್ಲಿ ಒಡಮೂಡಿವೆ.

ಕಲಾವಿದ ಕೆ.ಎನ್. ರಾಮಚಂದ್ರನ್‌ರು ಎಲ್ಲ ರೀತಿಯ ವಿಷಯ ವಿವೇಚನೆಗೆ ವಸ್ತು ವಿಷಯಗಳನ್ನು ತಮ್ಮ ಕೃತಿಗಳಲ್ಲಿ ಸಂಯೋಜಿಸಿದ್ದಾರೆ. ಇವುಗಳ ಸಂಖ್ಯೆ ಸಾವಿರಕ್ಕಿಂತಲೂ ಹೆಚ್ಚಿವೆ. ಇಲ್ಲಿ ಅದರಲ್ಲಿ ಲಭ್ಯವಿರುವ ಚಿತ್ರಗಳನ್ನು ಒಳಗೊಂಡು ಅಧ್ಯಯನ ಮಾಡಲು ಪ್ರಯತ್ನಿಸಿದ್ದೇವೆ. ಈ ಕಲಾವಿದರು ರಚಿಸಿದ ಸಂಯೋಜನಾ ಚಿತ್ರಗಳನ್ನು ವರ್ಗಿಕರಣ ಮಾಡಿಕೊಡು ವಿವೇಚಿಸುವುದಾದರೆ

- **ತರಕಾರಿ ಮಾರುವವರು**
- **ಹೂವು ಮಾರುವವರು**
- **ಸ್ಟೇಷನರಿ ವಸ್ತುಗಳನ್ನು ಮಾರುವವರು**
- **ದೇವಸ್ಥಾನದ ದೃಶ್ಯಗಳು**
- **ಬಸ್ ನಿಲ್ದಾಣದ ದೃಶ್ಯಗಳು**
- **ರೈಲ್ವೆ ನಿಲ್ದಾಣದ ದೃಶ್ಯಗಳು**
- **ಕೂಲಿ ಕಾರ್ಮಿಕರು ಹಾಗೂ ಕುಶಲ ಕಾರ್ಮಿಕರು**
- **ಕಾಲ್ಪನಿಕ ಚಿತ್ರಗಳು**

ಇತರೆ ದೃಶ್ಯ ಚಿತ್ರಗಳೆಂದು ವಿಭಜಿಸಿಕೊಂಡು ಅಧ್ಯಾಯನ ಮಾಡಲಾಗಿದೆ.

- **ತರಕಾರಿ ಮಾರುವವರು**

ರೋಮ್ಯಾಂಟಿಕ್ ವರ್ಣಗಳ ಸಂಯೋಜನೆಯ ಚಿತ್ರಕಲಾವಿದ ಕೆ.ಎಸ್. ರಾಮಚಂದ್ರನ್‌ರು ಮೂಲತಃ ಒಬ್ಬ ಬ್ಯಾನರ್ ಚಿತ್ರಕಲಾವಿದರಾಗಿ ವೃತ್ತಿಯನ್ನು ಆರಂಭಿಸಿದವರು. ಪ್ರಾರಂಭದ ದಶಕದಲ್ಲಿ ಚಿತ್ರ ನಟ-ನಟಿಯರ ದೃಶ್ಯಗಳನ್ನು ಕಥೆಯ ಸಂದರ್ಭಕ್ಕೆ ತಕ್ಕಂತೆ ದೊಡ್ಡ ದೊಡ್ಡ ಪರದೆಯ ಮೇಲೆ ಸಂಯೋಜಿಸಿ ಹಿನ್ನಲೆಯನ್ನು ಆ ದೃಶ್ಯಕ್ಕೆ ಸಂಬಂಧಿಸಿದಂತೆ ವಸ್ತು ಆಕಾರಗಳನ್ನು ಸೃಷ್ಟಿಸಲಾಗುತ್ತಿತ್ತು. ಈ ದೊಡ್ಡ ದೊಡ್ಡ ಪರದೆಯ ಮೇಲೆ ಅಪಾರದರ್ಶಕ ಲೇಕ್ (ಹುಡಿವರ್ಣ) ಬಣ್ಣಗಳಿಂದ ಆ ದೃಶ್ಯಗಳನ್ನು ರಂಜಿಸಲಾಗುತ್ತಿತ್ತು. ಆ ನಟ-ನಟಿಯತರ ಸುಂದರ ಭಾವಚಿತ್ರಗಳನ್ನು ನಿರಂತರ ರಚನೆ ಮಾಡುತ್ತ ಮಾಡುತ್ತ ಯಾವುದೇ ಭಾವಚಿತ್ರಗಳನ್ನು ರಚಿಸಲು ಕಷ್ಟವಾಗುತ್ತಿರಲಿಲ್ಲ. ಈ ರೀತಿ ನಿರಂತರ ಅನುಭವ ಹೊಂದಿದ ರಾಮಚಂದ್ರನ್‌ರ ಭಾವಚಿತ್ರಗಳ ಹೊರತಾಗಿ ಸಮೂಹ ವ್ಯಕ್ತಿಗಳ ಚಟುವಟಿಕೆಗಳನ್ನು ಚಿತ್ರಿಸುವುದರಲ್ಲಿ ಪರಿಣಿತಿ ಹೊಂದಿದ್ದು ಅವರ ದೃಷ್ಟಿ ಯೋಚನೆಗಳು ಸಹ ಲೋಕಾನುಭವದ ಸಂಗತಿಗಳನ್ನು ಸೆರೆ ಹಿಡಿಯಲು ಪ್ರಯತ್ನಿಸಿದವು.

ಕಲಾವಿದ ರಾಮಚಂದ್ರನ್‌ರ ಆಯ್ಕೆ ತರಕಾರಿ ಮಾರುವವರ ಸ್ಥಳ ತರಕಾರಿ ಕೊಂಡುಕೊಳ್ಳುವವರ ಜೊತೆಗಿನ ಸಂಹನಕ್ರೀಯೆ ತಮ್ಮ ವಸ್ತುಗಳನ್ನು ಮಾರಾಟ ಮಾಡುವ ವ್ಯವಸ್ಥೆ, ಅಲ್ಲಿ ಹೊಂದಿಸಲಾದ ತರಕಾರಿಗಳ ಚಿತ್ರಣ ಹೀಗೆ ಮತ್ತು ಹಲವಾರು ಚಿಂತನೆಗಳನ್ನು ಈ ಚಿತ್ರಗಳ ಮೂಲಕ ಅಭಿವ್ಯಕ್ತ ಪಡಿಸಿದ್ದಾರೆ. ಈ ವಾಸ್ತವ ದೃಶ್ಯವನ್ನು ಸಾಮಾನ್ಯವಾಗಿ ನೋಡದೆ ಅಲ್ಲೇ ಕಲಾತ್ಮಕವಾಗಿ ವಿವೇಚನೆಯಿಂದ ದೃಶ್ಯಿಕರಿಸಿದ್ದಾರೆ. ಒಬ್ಬ ಕಲಾವಿದ ಯಾವುದೇ ಕಲೆಯನ್ನು ರಚಿಸಬೇಕಾದರೆ ಅದಕ್ಕೆ ಪ್ರೇರಣೆ ಬೇಕಾಗುತ್ತದೆ. ಆ ದೃಶ್ಯದ ವಾಸ್ತವಾಂಶವು ಮನಸ್ಸಿನ ಮೇಲೆ ಪರಿಣಾಮ ಬೀರುತ್ತವೆ. ಹೀಗಾಗಿ ರಾಮಚಂದ್ರನ್‌ರು ನಿತ್ಯ ಮನೆಗೆ ಬೇಕಾದ ತರಕಾರಿಗಳನ್ನು ಕೊಂಡುಕೊಳ್ಳಲು ಮಾರುಕಟ್ಟೆಗೆ ಹೋಗುವಾಗ ಅಲ್ಲಿನ ಪ್ರತಿಯೊಂದು ದೃಶ್ಯವು ಇವರ ತರಕಾರಿ ಮಾರುವವರ ಚಿತ್ರಗಳೀಗೆ ಪ್ರೇರಣೆಯಾಗಿವೆ. ಅಲ್ಲಿನ ತರಕಾರಿ ಮಾರುವವರ ವೇಷ-ಭೂಷಣಗಳು, ಕುಳಿತಿರುವ ಭಂಗಿ, ಕೆಲಸದ ಕಾರ್ಯ ವೈಖರ್ಯ, ತರಕಾರಿ ಕಟ್ಟೆಯ ಚಿತ್ರಣ, ಮಾರುವಂತಹ ತರಕಾರಿಗಳು ಹೀಗೆ ಹತ್ತು ಹಲವಾರು ಪ್ರಸಂಗದ ಚಿತ್ರಣ, ಕಲಾವಿದರಿಗೆ ಚಿತ್ರ ರಚಿಸಲು ಪ್ರೇರಣೆ ಕೊಟ್ಟಿವೆ.

ಒಬ್ಬ ದೃಶ್ಯಕಲಾವಿದ ಲೋಕದ ವಸ್ತುಗಳನ್ನು ಸೌಂದರ್ಯ ಸ್ವಾಧನ ದೃಷ್ಟಿಯಿಂದ ಅಂದರೆ ರಾಗದ್ವೇಷಗಳಿಂದ ಮತ್ತು ಪ್ರಯೋಜನದ ಉದ್ದೇಶದಿಂದ ಮುಕ್ತವಾಗಿ ನೋಡುತ್ತಾನೆ. ಆ ಮರದ ಆಕಾರ, ಬಣ್ಣ ಮತ್ತು ಅಂದಚಂದಗಳ ಆಸ್ವಾದನಾ ದೃಷ್ಟಿಯಲ್ಲಿ ನೋಡುತ್ತಾನೆ. ಹೀಗೆ ಆತ ಪರಿಶುದ್ಧ ಆಕೃತಿಗಳನ್ನು ನೋಡಲು ಸಮರ್ಥನಾಗಿರುತ್ತಾನೆ. ಆ ನಿಸ್ಸಂಗತ್ವದ ನಿಲುವಿನಲ್ಲಿ ಲೋಕ ಕೃತಿಗಳನ್ನು 'ಪರಿಶುದ್ಧ ಆಕೃತಿ' ಅಥವಾ ಆಕಾರ ಸೂಚಿಗಳನ್ನಾಗಿ ಪರಿವರ್ತಿಸುತ್ತಾನೆ. ಇವರಿಂದ ಸಹೃದಯ, ಕಲಾವಿದನ ಕಲೆಯಲ್ಲಿ ಆಸ್ವಾದಿಸುವುದು ಈ ಪರಿಶುದ್ಧ ಆಕಾರ ಸೂಚನೆಗಳನ್ನೇ ಆದುದರಿಂದ ಕಲಾವಿದ ತಾನು ಲೋಕದ ಪ್ರತಿಕ್ರೀಯೆಯಿಂದ ದೂರನಿಂತು ಕೇವಲ ಆನಂದಾನುಭವನ್ನು ಮಾತ್ರ ಪಡೆಯುತ್ತಾನೆ.[9] ಕಲಾವಿದ ರಾಮಚಂದ್ರನ್‌ರು ಸಂಯೋಜಿಸಿದ ಹಲವಾರು ಚಿತ್ರಗಳೂ ಲೋಕಾನುಭವಕ್ಕೆ ಸೇರಿದವುಗಳಾಗಿದ್ದು

ಲೋಕಾನಿಭವಗಳ ಜೊತೆಗೆ ಕಲಾವಿದನ ಸೌಂದರ್ಯ ಪ್ರಜ್ಞೆಯನ್ನು ತಿಳಿಸುತ್ತದೆ. ರಾಮಚಂದ್ರನ್‌ರು ಒಂದು ಚಿತ್ರವನ್ನು ಉದಾಹರಿಸಬಹುದಾದರೆ ಒಬ್ಬ ಮಹಿಳೆಯೊಬ್ಬಳು ತನ್ನ ತರಕಾರಿಗಳನ್ನು ಇಟ್ಟುಕೊಂಡು ವಿರಾಜಮಾನಳಾಗಿ ಕುಳಿತಿದ್ದಾರೆ. ಇನ್ನೊಬ್ಬಳು ಆ ತರಕಾರಿಗಳನ್ನು ಕೊಂಡುಕೊಳ್ಳಲು ಹೋಗುತ್ತಿರುವವಳು. ಈ ಇಬ್ಬರು ವ್ಯಕ್ತಿಯ ಸಂಹನ ಕ್ರಿಯೇಯಲ್ಲಿ ತೊಡಗಿಲ್ಲ. ಇಬ್ಬರು ಛಾಯಾಚಿತ್ರಕ್ಕೆ ಪೋಸ್ (ಭಾವಚಿತ್ರ) ಕೊಡುವವರಂತೆ ಚಿತ್ರಿತಗೊಂಡಿದ್ದಾರೆ. ಇಲ್ಲಿ ಕಮ್ಯೂನಿಕೇಶನ್ ಇಲ್ಲವೆಂದರೂ ಸಹ ತರಕಾರಿ ಕೊಳ್ಳುವ ಹಾಗೂ ಮಾರುವವಳ ಸಂಪರ್ಕವನ್ನು ಈ ಚಿತ್ರ ಸೂಚಿಸುತ್ತದೆ. ಇವರ ಉಡುಗೆ ತೊಡುಗೆಗಳು, ವಿವಿಧ ತರಕಾರಿಗಳು, ಮಾರುಕಟ್ಟೆಯ ಹಿನ್ನಲೆ ಇತ್ಯಾದಿ ವಿಷಯಗಳು ಲೋಕಾನುಭವನ್ನು ಸಹೃದಯನಿಗೆ ನೀಡುವುದರ ಜೊತೆಗೆ ಸೌಂದರ್ಯ ಹಾಗೂ ಕಲಾತ್ಮಕ ಅಂತರಪ್ರಜ್ಞೆಯನ್ನು ಸೂಚಿಸಲಾಗುತ್ತದೆ. ಒಬ್ಬ ಕಲಾವಿದನಾದವನಿಗೆ ಸಾಮಾಜಿಕ ಸಂಬಂಧಗಳ ಜೊತೆಗೆ ಕಲೆ ಮತ್ತು ಭಾವನಾತ್ಮಕ ಅಭಿರುಚಿ ಇರಬೇಕಾಗುತ್ತದೆ. ಅಂದಾಗ ಅವನ ಕಲಾಕೃತಿಗೆ ಹಾಗೂ ಸಹೃದಯನಿಗೆ ಮೌಲ್ಯಗಳ ಕೊಂಡಿಯಾಗಿ ರೂಪಗೊಳ್ಳುತ್ತದೆ.

ರಾಮಚಂದ್ರನ್‌ರ ಸಂಯೋಜನೆಯಲ್ಲಿ ತರಕಾರಿ ಮಾರುವವರ ವೈವಿಧ್ಯಮಯ ದೃಶ್ಯಗಳು ಮೂಡು ಬಂದಿದ್ದು ಅವರ ಈ ರೀತಿಯ ಯಾವುದೇ ಚಿತ್ರಗಳು ಲೋಕಾನುಭವ ಹಾಗೂ ಸೌಂದರ್ಯ ಪ್ರಜ್ಞೆಯನ್ನು ಸಂಚಲ ಮಾಡುತ್ತವೆ. ರಾಮಚಂದ್ರನ್‌ರ ಈ ಬಗೆಯ ಸಂಯೋಜನಾ ಚಿತ್ರಗಳು ಬಹಳ ಸಂಖ್ಯೆಗಳಲ್ಲಿ ರೂಪಕೊಂಡಿವೆ. ಕಲಾವಿದನಿಗೆ ಕೇವಲ ಕಲೆ ಮತ್ತು ಸೌಂದರ್ಯ ಪ್ರಜ್ಞೆ ಇದ್ದರೆ ಸಾಲದು ಜೊತೆಗೆ ಸಾಮಾಜಿಕ ಹಾಗೂ ದೇಶದ ಜವಾಬ್ದಾರಿಯೂ ಮುಖ್ಯವೆನಿಸುತ್ತದೆ. ಲೋಕಾನುಭವ ಕಲಾವಿದನ ಮನಸ್ಸನ್ನು ಹೊಕ್ಕ ಕಲಾಭಾವವಾಗಿ ತಾಲಾತ್ಮ್ಯದ ಸ್ಥಿತಿಗೆ ಪರಿವರ್ತಿತವಾಗಬೇಕಾದರೆ ಕಲಾವಿದ ಎರಡು ಹಂತಗಳಲ್ಲಿ ಕೆಲಸ ಮಾಡಬೇಕಾಗುತ್ತದೆ. ಲೋಕಭಾವಗಳನ್ನು ಲೌಕಿಕ ವ್ಯಕ್ತಿತ್ವದ ಹಂತದಲ್ಲಿ ಗಮನಿಸಿ ಅನುಭವಿಸಬೇಕು.[10] ಪ್ರಸ್ತುತ ರಾಮಚಂದ್ರನ್‌ರ ಸಂಯೋಜನಾ ಚಿತ್ರಗಳೂ ಈ ಲೋಕಾನುಭವದ ತತ್ವವನ್ನೇ ಅನುಸರಿಸಿವೆ.

- **ಹೂವು ಮಾರುವವರು**

ದೃಶ್ಯ ಮಾಧ್ಯಮವು ಕಲಾವಿದರನ್ನು ಒಂದು ಸೃಜನಾತ್ಮಕ ಚಿಂತನೆಗೆ ಉದ್ದೀಪಿಸುತ್ತದೆ. ಭರತನ 'ವಿಭಾವ' ಅನ್ನುವುದು ಒಂದು ಅಭಿವ್ಯಕ್ತಿಗೆ ಕಾರಣವಾದುದು. ಅಂದರೆ ನೋಡುವಾಗ ತನ್ನ ಇಂದ್ರಿಯ ಪ್ರಜ್ಞೆಯಿಂದ ಭಾವವನ್ನು ವ್ಯಕ್ತ ಪಡಿಸುತ್ತಾನೆ. ಕಣ್ಣಿನಿಂದ ನೋಡಿದ ವಸ್ತುಗಳಿಂದ ವಿವಿಧ ಭಾವನೆಗಳನ್ನು ಸೃಷ್ಟಿಸುತ್ತಾನೆ. ಉದಾಹರಣೆಗೆ ಹಣ್ಣು ನೋಡಿದಾಗ ಅದನ್ನು ತಿನ್ನಲು ಬಯಸುತ್ತಾನೆ. ಹಾವುಯೊಂದನ್ನು ನೋಡಿದರೆ ಭಯವನ್ನು ವ್ಯಕ್ತ ಪಡಿಸುತ್ತಾನೆ. ಈ ಪ್ರಜ್ಞೆ ಇಂದ್ರಿಯ ಮುಖಾಂತರ ಮಿದುಳಿಗೆ ತಲುಪಿ ಭಾವಕ್ಕೆ ಕಾರಣವಾಗುತ್ತದೆ. ಇದುವೆ ವಿಭಾವ. ಹೀಗೆ ರಾಮಚಂದ್ರನ್‌ರು ಸಾಕಷ್ಟು ವಿಷಯಗಳ ಮೇಲೆ ಚಿತ್ರಗಳನ್ನು ಸಂಯೋಜಿಸಿದ್ದಾರೆ ಇವುಗಳಲ್ಲಿ ಹೂವು ಮಾರಾಟಮಾಡುವವರದು ಒಂದು ಗುಂಪು. ಈ ವಿಷಯಗಳ ಮೇಲೆ ಸಾಕಷ್ಟು ಚಿತ್ರಗಳನ್ನು ಸಂಯೋಜಿಸಿದ್ದಾರೆ. ಹೂವು ಮಾರುವವರ ವೈವಿಧ್ಯಮಯ ಭಾವ ಭಂಗಿ, ಮಾರಾಟಗಾರರ ವೇಷ ಭೂಷಣಗಳು, ಹೂವು ಮಾರುವವರ ಸಂಹನ ಕ್ರೀಯೇ, ಮಾರಾಟಗಾರ ಹಾಗೂ ಕೊಂಡುಕೊಳ್ಳುವವರ

ಸಂಪರ್ಕ ವ್ಯವಸ್ಥೆ, ವೈವಿಧ್ಯಮಯವಾಗಿ ಅಲಂಕರಿಸಿದ ಹೂವುಗಳ ವ್ಯವಸ್ಥೆ. ಹೀಗೆ ಹತ್ತು ಹಲವಾರು ದೃಶ್ಯ ನೋಟಗಳನ್ನು ಅತ್ಯಂತ ಕಲಾತ್ಮಕವಾಗಿ ಅಭಿವ್ಯಕ್ತ ಪಡಿಸಿದ್ದಾರೆ.

ರಾಮಚಂದ್ರನ್‌ರು ಈ ಹೂವು ಮಾರಾಟಕ್ಕೆ ಸಂಬಂಧಿಸಿದ ಚಿತ್ರಗಳಲ್ಲಿ ಅವರ ವರ್ಣ ವೈವಿಧ್ಯತೆಯ ಕ್ರಮ, ರೋಮ್ಯಾಂಟಿಕ್ ವರ್ಣಗಳ ಸಂಯೋಜನೆ. ವರ್ಣಗಳ ಹಾಗೂ ಕುಂಚಗಳ ಸೂಕ್ಷ್ಮ ವಿವರಣೆ ನೈಜತೆ ಇತ್ಯಾದಿ ತಂತ್ರಗಾರಿಕೆವು ಬ್ರಿಟಿಷ್ ಅಕಾಡೆಮಿಕ್ ಪದ್ಧತಿಯನ್ನು ಅನುಸರಣ ಮಾಡಿದ್ದು ರಚನೆಯ ಕೈಕನ್ನಡಿಯಾಗಿದೆ. ಇವರ ವರ್ಣ ಸಂಯೋಜನೆಯ ಚಿತ್ರಗಳು ಒಂದು ತತ್ವ ಸಿದ್ಧಾಂತವನ್ನು ರೂಪಿಸುವುದಲ್ಲದೆ ಸಮಾಜದ ಬದುಕಿನ ಮೌಲ್ಯಗಳನ್ನು ಮೌಲೀಕರಿಸುತ್ತವೆ (ಕಟ್ಟಿಕೊಡುತ್ತವೆ). ಮನುಷ್ಯ ಸಂಘ ಜೀವಿಯಾಗಿರುವುದರಿಂದ ಸಹಜವಾಗಿ ತನ್ನದೇ ಪ್ರಬೇಧದ ವರ್ಣಕ್ಕೆ ಒಗ್ಗುಡಿ ಬದುಕನ್ನು ಕಟ್ಟಿಕೊಳ್ಳುತ್ತಾನೆ. ಈ ರೀತಿಯಾಗಿ ನಾನು ಮಾರುಕಟ್ಟೆಯಲ್ಲಿ ಹೂವುಗಳನ್ನು ಮಾರುವವ ವ್ಯವಸ್ಥೆ ಪ್ರತ್ಯೇಕವಾಗಿ ಕಾಣುತ್ತೇವೆ. ಅಲ್ಲಿನ ವ್ಯವಸ್ಥಾಪಕರ ಕುಶಲೋಪರಿಚಯ ಹಾಗೂ ಮಾರಾಟ ವ್ಯವಸ್ಥೆಯು ವೈವಿಧ್ಯತೆಯಿಂದ ಕೂಡಿರುತ್ತದೆ. ಒಬ್ಬೊಬ್ಬರ ಹತ್ತಿರ ಒಂದೊಂದು ತರಹದ ಹೂವುಗಳ ಸಮುಚ್ಛ, ಒಂದೊಂದು ತರಹದ ಹೂವುಗಳ ಅಂದ ಚೆಂದದ ನೋಟಗಳು ನೋಡುಗಗನ್ನು ವಿಸ್ಮಯಗೊಳಿಸುತ್ತದೆ. ಇಲ್ಲಿ ನೋಡುಗನೆಂದರೆ ಬಹಳಷ್ಟು ಜನರು ಬರುತ್ತಾರೆ. ಸಾಮಾನ್ಯ ನೋಡುಗ, ಸಾಹಿತಿ, ಕವಿ, ನಾಟಕಕಾರ, ಸಂಗೀತಕಾರ, ಚಿತ್ರಕಾರ, ಶಿಲ್ಪಿ ಇತ್ಯಾದಿ ಜನರನ್ನು ಹೆಸರಿಸಬಹುದು. ಇವರೆಲ್ಲರದೂ ಒಂದೊಂದು ರೀತಿಯ ಭಿನ್ನ, ಅಭಿರುಚಿ, ಹೂವುಗಳನ್ನು ಶಿಲ್ಪಿ ಒಂದು ದೃಷ್ಟಿಯಿಂದ ನೋಡಿದರೆ, ಕವಿ ಇನ್ನೊಂದು ಬಗೆಯಲ್ಲಿ ನೋಡುತ್ತಾನೆ. ಚಿತ್ರಕಲಾವಿದನು ಇವರೇಲ್ಲರಿಗಿಂತಲೂ ವಿಭಿನ್ನವಾಗಿ ಅನುಭವಿಸಿ ಅಭಿವ್ಯಕ್ತಪಡಿಸುತ್ತಾನೆ. ಮೊದಲು ಹೂವನ್ನು ದೃಷ್ಟಿಯಿಂದ ಅದನ್ನು ನೋಡುತ್ತಾನೆ. ನಂತರ ಒಳಗಣ್ಣಿನಿಂದ ಅದರ ಸೌಂದರ್ಯವನ್ನು (ಬಾಹ್ಯ ಹಾಗೂ ಆಂತರಿಕ) ಆಸ್ವಾದಿಸುತ್ತಾನೆ. ನಂತರ ಅಂತರ್‌ಭಾವನೆಯು ಉದ್ದೀಪನಗೊಂಡು ರೇಖೆ ಹಾಗೂ ವರ್ಣಗಳ ಮೂಲಕ ಕ್ಯಾನವಾಸ್ ಅಥವಾ ಪೇಪರ್ ಮೇಲೆ ಚಿತ್ರಿಸುತ್ತಾನೆ. ಇದು ಕಲಾವಿದನ ಸೌಂದರ್ಯ ಪ್ರಜ್ಞೆ. ಇಲ್ಲಿ ರಾಮಚಂದ್ರನ್‌ರು ಹೂವಿನ ಮಾರುಕಟ್ಟೆ, ಹೂವು ಮಾರುವವರ ಹಾಗೂ ಕೊಂಡುಕೊಳ್ಳುವವರನ್ನು ಈ ಮೇಲೆ ಹೇಳಿದ ಚಿತ್ರ ಪ್ರಜ್ಞೆಯಿಂದಲೇ ಚಿತ್ರಕೃತಿಗಳನ್ನು ಸಂಯೋಜಿಸಿದ್ದಾರೆ. ಇವರು ಇಂತಹ ದೃಶ್ಯದ ಹಲವಾರು ಚಿತ್ರಗಳನ್ನು ರಚಿಸಿದ್ದು ಅವರು ಹೂವು ಮತ್ತು ಮಾರಾಟಗಾರ ಅಂತರ್ ಸಂಬಂಧವನ್ನು ಅತ್ಯಂತ ಕಲಾತ್ಮಕವಾಗಿ ಹಾಗೂ ಭಾವನಾತ್ಮಕ ಸಂಬಂಧದ ಕೊಂಡಿಯಾಗಿಸಿದ್ದಾರೆ.

ಕಲಾವಿದ ಕೆ.ಎನ್. ರಾಮಚಂದ್ರನ್‌ರು ಚಿತ್ರಿಸಿದ ಈ ಸಂಯೋಜನಾ ಚಿತ್ರಗಳಲ್ಲಿ ಪ್ರತಿಮೇಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಅವರು ಮಧ್ಯವಯಸ್ಕರ ಹಾಗೂ ವೃಧ್ಯಾಪ್ತಕ್ಕೆ ಕಾಲಿಡುತ್ತಿರುವವರ ಪ್ರತಿಮೆಗಳಲ್ಲಿ ಅವರು ತಮ್ಮ ಒಡನಾಡಿಗಳನ್ನೆ ಪ್ರತಿಬಿಂಬಿಸಿದಂತೆ ತೋರುತ್ತದೆ. ಅದರಲ್ಲೂ ತಾವು ಆಸ್ವಾದಿಸಿದ ಹಾಗೂ ಅನುಭವಿಸಿದ ಪ್ರತಿರೂಪದಂತೆ ಕಂಡುಬರುತ್ತದೆ. ಮಹಿಳೆಯರ ರೂಪ ಪ್ರತಿಮೆಗಳಲ್ಲಿ ತಮಿಳು ಸಂಸ್ಕೃತಿಯನ್ನು ಬಿಂಬಿಸುವ ವೇಷಭೂಷಣ, ಅಂಗಾಂಗ ರಚನೆಯು ಅವರ ಭಾವನೆಯ ಕುಂಚದಲ್ಲಿ ಅರಳಿವೆ. ಒಂದೊಂದು ಸಲ ಅನಿಸುತ್ತದೆ, ಇವರ ಚಿತ್ರಗಳ ಪ್ರತಿಮೆಗಳಲ್ಲಿ ತಮ್ಮ ಧರ್ಮ ಪತ್ನಿಯ ರೂಪವನ್ನೆ ಅಭಿವ್ಯಕ್ತಿಸಾದ್ದಾರೆಂದು ಭಾಸವಾಗುತ್ತದೆ. ಈ ರೀತಿಯ ಚಿಂತನೆಗಳು ಪ್ರತಿಯೊಬ್ಬ ಕಲಾವಿದನಿಗೆ ಕಾಡಲಾರದೇ ಇರುವುದು. ಯಾಕೆಂದರೆ ಯಾವುದೇ ಕಲಾವಿದನ ಬದುಕಿನಲ್ಲಿ ಸರ್ವಾಂಗವನ್ನು ಹಂಚಿಕೊಂಡ ಪ್ರಜ್ಞೆ ಯಾವಾಗಲು ಕಾಡುತ್ತಿರುತ್ತದೆ. ಇದಕ್ಕೆ ರಾಮಚಂದ್ರನ್ ಅವರೂ ಸಹ ಹೊರತಲ್ಲಿ ಆ

ಪ್ರಜ್ಞೆಯೂ ಚಿತ್ರ ರೂಪದ ಮೂಲಕ ಲೋಕಾನು ಭಾವಕ್ಕೆ ಬರುತ್ತದೆ. ಯಾವುದೇ ಚಿತ್ರ ಕೃತಿಯು ಹೊರಬರಲು ಕಲಾವಿದನ ಸೂಪ್ತ ಮನಸ್ಸು ಬೇಕಾಗುತ್ತದೆ. ಈ ಸೂಪ್ತ ಮನಸ್ಸು ಅವನಲ್ಲಿದ್ದಾಗ ಅವನ ಮನಸ್ಸು ಜಾಗೃತ ವ್ಯವಸ್ಥೆಯನ್ನು ತಲುಪುತ್ತದೆ. ನಂತರ ಅಭಿವ್ಯಕ್ತೀಯ ಮೂಲಕ ಸೂಪರ್ ಪ್ರಜ್ಞಾ ವ್ಯಸ್ಥೆಗೆ ಮಾರ್ಪಾಡುತ್ತದೆ. ಇಂತಹ ವ್ಯಕ್ತಿತ್ವವನ್ನು ಕಲಾವಿದ ರಾಮಚಂದ್ರನ್ ಅವರು ಹೊಂದಿದ್ದಾರೆ.

- **ಸ್ಟೇಷನರಿ ವಸ್ತುಗಳನ್ನು ಮಾರುವವರು**

ಮನುಷ್ಯ ಎಷ್ಟೇ ಆಧುನಿಕತೆಯ ಬದುಕನ್ನು ಅಪ್ಪಿಕೊಂಡರು ಸಹ ಅವನ ಅಂತರಾತ್ಮವು ನಮ್ಮ ಭಾರತೀಯ ಪಾರಂಪರಿಕ ಸಂಸ್ಕೃತಿಯೂ ತೆರೆಮರೆಯಲ್ಲಿ ಸದಾ ಇದ್ದೇ ಇರುತ್ತದೆ. ಇದಕ್ಕೆ ಜರ್ಮನ್ ಸೌಂದರ್ಯ ಪ್ರತಿಪಾದಕ ಬೆನಡಿತ್ ಕ್ರೋಚೆ ಪ್ರಕಾರ ನಮ್ಮ ಸಂಸ್ಕೃತಿ ಯಾವುದೇ ರೂಪದಲ್ಲಾದರು ಇರಬಹುದು ಅದು ಸೌಂದರ್ಯದ ಪರಿಕಲ್ಪನೆಯಲ್ಲಿ ವಿವೇಚಿಸುವುದಾದರೆ ಸೌಂದರ್ಯ ಶಾಸ್ತ್ರವು ಮನುಷ್ಯನ ಕಲ್ಪನೆ ಮನ: ಪ್ರಾತ್ಯಕ್ಷತೆ ಹಾಗೂ ಅಭಿವ್ಯಕ್ತಿಗಳನ್ನು ಕುರಿತ ವಿಷಯವಾಗಿದೆ ಎಂಬುದು ಇವನ ಅಭಿಮತ. ಕ್ರೋಚೆ ಪ್ರಕಾರ ಸಹಾಜಾನುಭೂತಿ ಅಥವಾ ಸಹಜ ಜ್ಞಾನದ ಯಶಸ್ವಿ ಅಭಿವ್ಯಕ್ತಿಯೇ ಸೌದರ್ಯ.[11] ಈ ಸೌಂದರ್ಯ ಪ್ರಜ್ಞೆಯೂ ಪ್ರತಿಯೊಬ್ಬ ಮನುಷ್ಯನಲ್ಲಿ ಒಂದು ರೀತಿಯಿದ್ದರೆ ಕವಿಗಳಲ್ಲಿ ಒಂದು ರೀತಿಯ ಪ್ರಜ್ಞೆ ಇರುತ್ತದೆ. 'ಕ್ರೋಚೆ' ಪ್ರಕಾರ ಕಲೆಯು ಜ್ಞಾನದ ಒಂದು ಪ್ರಕಾರವಾಗಿದೆ. ಕಲೆಯ ಬೀಜವು ಸಹಜ ಜ್ಞಾನವಾಗಿದೆ. ಸೌಂದರ್ಯವೇ ಕಲೆಯ ಪ್ರತಿಫಲವಾಗಿದೆ.[12] ರಾಮಚಂದ್ರನ್ ಇವರು ಇಂತಹ ಪ್ರಜ್ಞೆಯನ್ನು ತಮ್ಮ ವೃತ್ತಿ ಜೀವನದಲ್ಲಿಯೂ ಅಳವಡಿಸಿಕೊಂಡಿದ್ದಾರೆ ಎಂಬುದು ಪ್ರಶ್ನೇ ಅವರಿಗೆ ಚಿತ್ರರಚನಾ ಕಾರ್ಯದಲ್ಲೂ ಇಂತಹ ಅರಿವು ಪಡೆದುಕೊಂಡು ಚಿತ್ರ ರಚನೆ ಮಾಡಿರಲಿಕ್ಕಿಲ್ಲ ಅವರಿಗೆ ಅರಿವಿಗೆ ಬಾರದಂತೆಯೇ ಇಂತಹ ಸೌಂದರ್ಯ ಪ್ರಜ್ಞೆಯನ್ನು ಗುರುತಿಸುವುದು ಅಥವಾ ವಿಮರ್ಶಕ ಆ ವಿಮರ್ಶಕನು ಕಲಾವಿದನೆ ಆಗಬೇಕಿಲ್ಲಾ. ಪ್ರತಿಯೊಬ್ಬರು ವಿಮರ್ಶೆಯ ಅರಿವನ್ನು ಹೊಂದಿರುತ್ತಾರೆ ಇವರ ಕಲಾಕೃತಿಗಳು ಒಂದೊಂದು ದೃಷ್ಟಿಯಲ್ಲಿ ವಿವೇಚಿಸುತ್ತವೆ. ಕಲಾವಿದ ಕೆ. ಎನ್ ರಾಮಚಂದ್ರನ್ ಅವರ ಬದುಕಿಗೆ ಬೇಕಾಗುವ ಅಗತ್ಯ ವಸ್ತುಗಳ ಮಾರಾಟ ಮಳಿಗೆಯ ಹಾಗೂ ಮಾರಾಟದ ಹತ್ತು ಹಲವಾರು ದೃಶ್ಯಗಳನ್ನು ತಮ್ಮ ರೊಂಮ್ಯಾಂಟಿಕ ವರ್ಣಗಳಲ್ಲಿ ಸಂಯೋಜನೆ ಮಾಡಿದ್ದಾರೆ ಈ ದೃಶ್ಯಗಳು, ಪಾವಿಜನ್ ಸ್ಟೋರ್ಸ್., ಬುಕ್ ಸ್ಟೋರ್ಸ, ಪಾತ್ರೆಗಳ ಅಂಗಡಿ, ಪ್ಲಾಸ್ಟಿಕ ಸ್ಟೋರ್ಸ, ಬಟ್ಟೆಯ ಅಂಗಡಿಗಳು, ಸ್ವಿಟಮಾರ್ಟ್ ಇತ್ಯಾದಿ ಬಗೆ ಬಗೆಯ ಜನರಲ್ ಸ್ಟೋರ್ಸಗಳಲ್ಲಿ ನಿತ್ಯ ನಡೆಯುವ ಸಂಗತಿಯನ್ನು ದೃಶ್ಯಿಕರಿಸಿದ್ದಾರೆ. ಕಲಾವಿದನು ಚಿತ್ರ ಸಂಯೋಜಿಸುವ ಸಂದರ್ಬಗಳಲ್ಲಿ ವಿಷಯ ಮತ್ತು ವಸ್ತುವಿ ಆಯ್ಕೆಗಳಲ್ಲಿ ಬಹಳಷ್ಟು ಜಾಗೃತವಹಿಸುತ್ತಾನೆ. ಯಾಕೆಂದರೆ ವಿಷಯದ ಆಯ್ಕೆಯಲ್ಲಿ ಅವನಲ್ಲಿ ಸೌಂದರ್ಯ ಪ್ರಜ್ಞೆ ಹಾಗೂ ಕಲಾತ್ಮಕ ಆಯ್ಕೆಗಳು ಕಾಡುತ್ತಿರುತ್ತವೆ ಕೆಲವೊಂದು ಸಂದರ್ಭದಲ್ಲಿ ಕಲಾವಿದನು ತನ್ನ ಸ್ವಂತಿಕೆಯನ್ನು ಮರೆತು ನೋಡುಗನ ಅಪೇಕ್ಷತೆಯಂತೆ ಕೆಲಸ ಮಾಡುವ ಸಂದರ್ಬದಲ್ಲಿ ಕೃತಕ ಸೌದರ್ಯಾಭಿವ್ಯಕ್ತಿಯನ್ನು ವ್ಯಕ್ತಪಡಿಸುತ್ತಾನೆ. ರಾಮಚಂದ್ರನ್ ಅವರು ಸಹ ಪ್ರೇಕ್ಷಕನ ಅಬಿರುಚಿ ಹಾಗೂ ಅಪೇಕ್ಷೆಯಂತೆ ಕಲಾಕೃತಿಗಳನ್ನು ಸಾಕಷ್ಟು ಸಂಖ್ಯೆಗಳಲ್ಲಿ ರಚನೆಮಾಡಿಕೊಟ್ಟಿದ್ದಾರೆ. ಈ ಕಲಾಕೃತಿಗಳು ಅವರ ಅಪೇಕ್ಷತೆಯಂತೆ ರೂಪಗೊಂಡಿದ್ದರು ಸಹ ನಾನು ಆ ಕೃತಿಗಳಲ್ಲಿ ತನ್ಮಯನಾಗಿ

ನನ್ನನ್ನು ತೊಡಗಿಸಿಗೊಂಡು ಕೆಲಸ ಮಾಡಿದ್ದೇನೆ. ನಾನು ಆ ಕೃತಿಗಳ ಮೂಲಕ ಸೌಂದರ್ಯೋಪಾಸನೆಯನ್ನು ಮಾಡಿದ್ದೇವೆ ಎಂದು ಕಲಾವಿದರು ಅಭಿಪ್ರಾಯ ಪಡುತ್ತಾರೆ.

ಕಲಾವಿದ ರಾಮಚಂದ್ರನ್‌ರು ಬೆಂಗಳೂರು ನಗರದಂತಹ ಪ್ರದೇಶದಲ್ಲಿ ನೆಲೆಸಿದ್ದು ಆ ಬೃಹತ್ ನಗರದ ಜನಜೀವನ ಹಾಗೂ ನಾಗರಿಕ ಬದುಕಿನ ಚಿತ್ರಣವನ್ನು ಅತ್ಯಂತ ಸುಂದರವಾಗಿ ಸೆರೆಹಿಡಿದ್ದಾರೆ. ಇವರು ವ್ಯಾಪಾರಿಗಳ ಮನೋಭಾವ ಹಾಗೂ ವ್ಯಾವಹಾರಿಕ ಪ್ರಜ್ಞೆಯನ್ನು ಬಹಳ ಹತ್ತಿರದಿಂದ ಕಂಡವರಂತೆ ತಮ್ಮ ಕೃತಿಗಳಲ್ಲಿ ಒಡಮೂಡಿಸಿದ್ದಾರೆ. ವ್ಯಾಪಾರಿಗಳ ವ್ಯವಹಾರಿಕ ಬದುಕಿನಲ್ಲಿ ತಾವೂ ಒಬ್ಬರಾಗಿ ತಮ್ಮ ಕುಟುಂಬದ ಸದಸ್ಯರು ಒಳಗೊಂಡಂತೆ ಪ್ರತಿಮೆಗಳಲ್ಲಿ ವಿಸ್ತರಿಸಲು ಪ್ರಯತ್ನಿಸಿದ್ದಾರೆ. ರಾಮಚಂದ್ರನ್‌ರದು ವಿಶೇಷ ವ್ಯಕ್ತಿತ್ವ. ಇವರ ಚಿತ್ರಗಳಲ್ಲಿ ಪ್ರತಿಮೆಗಳು ಮಹಿಳಾ ಪ್ರಧಾನವಾದವುಗಳೇ ಹೆಚ್ಚಿವೆ. ಸ್ತ್ರೀ ಪ್ರತಿಮೆಗಳನ್ನು ಹಾಗೂ ಅವರ ವ್ಯಕ್ತಿತ್ವವನ್ನು ಅತ್ಯಂತ ಬಲ್ಲವರಾಗಿರುವಂತೆ ತಮ್ಮ ಕೃತಿಗಳಲ್ಲಿ ಪರಿಚಯಿಸಿದ್ದಾರೆ. ಈ ಕಲಾವಿದರು ಸ್ತ್ರೀ ಸಂವೇದನೆಯ ವಿವಿಧ ಮಜಲುಗಳನ್ನು ಯಾವುದೇ ಬಗೆಯ ಸಂಯೋಜನೆಯ ಚಿತ್ರಗಳಲ್ಲಿ ಗುರುತಿಸಿದ್ದಾರೆ. ಇವರು ಸ್ತ್ರೀಯನ್ನು ವಯಸ್ಸಿನ ಮಿತಿ ಇಲ್ಲದೇ ಎಲ್ಲ ವಯೋಮಾನದ ಸ್ತ್ರೀಯರನ್ನು ಸಮಾಜದ ಮುಖಿಯಾಗಿ ಅವಳನ್ನು ಪರಿಚಯಿಸುವ ಮೂಲಕ ಸ್ತ್ರೀವಾದಿಯೆಂಬಂತೆ ಪರಿಚಿತರಾಗಲು ಪ್ರಯತ್ನಿಸಿದ್ದಾರೆ. ರಾಮಚಂದ್ರನ್‌ರು ಒಬ್ಬ ಕಲಾವಿದರಾಗಿ ಮಹಿಳಾ ಸಂವೇದನೆಯ ಚಿಂತಕರಾಗಿ ಅವಳನ್ನು ಸಮಾಜದ ವಿವಿಧ ಸ್ಥಾನಗಳಲ್ಲಿ ನಿಲ್ಲಿಸುವ ಮೂಲಕ ತಮ್ಮ ವರ್ಣಚಿತ್ರ ಬದುಕನ್ನು ಕಂಡವರಾಗಿದ್ದಾರೆ.

- **ದೇವಸ್ಥಾನ ದೃಶ್ಯಗಳು**

‘ಈ ರಾತ್ರಿ ನಿದ್ರಿಸು ನೀನು; ಎಚ್ಚರಿದ್ದು ಹಣತೆ ಕಾಯುವೆ ನಾನು
ಬಾಗಿಲ ಬಳಿ ನಿಂತು ಇಡೀ ರಾತ್ರಿ.
ಈ ವರೆಗೆ ನನ್ನ ಪ್ರೀತಿಸಿರುವೆ ನೀನು; ಇಂದು ನಿನ್ನ
ಪ್ರೀತಿಸಬೇಕಿರುವುದು ನಾನು ಮಾತ್ರ’

ಇದು ವಿಶ್ವ ಕವಿ ರವೀಂದ್ರನಾಥ ಟ್ಯಾಗೋರರ ‘ಆರಾಧನೆ’ ಕವಿತೆಯ ಸಾಲು. ಈ ಕಾವ್ಯವು ದೈವತ್ವದ ನೆಲೆಯಲ್ಲಿ ವಿವೇಚಿಸದೇ ‘ದೈವ ಮತ್ತು ಪ್ರೇಮದ’ ಆರಾಧನೆಯ ಹಿನ್ನೆಲೆಯಲ್ಲಿ ಪ್ರತಿಪಾದಿಸುವುದು ಸಮಂಜಸವೆನಿಸುತ್ತದೆ. ಕಲಾವಿದ ರಾಮಚಂದ್ರನ್‌ರು ದೈವತ್ವ ಮತ್ತು ಪ್ರೇಮದ ನೆಲೆಯಲ್ಲಿ ಅನೇಕ ಕಲಾಕೃತಿಗಳನ್ನು ಸಂಯೋಜನೆ ಮಾಡಿದ್ದಾರೆ. ಈ ಕಲಾವಿದರು ತಂಜಾವೂರಿನಂತಹ ದೇವಾಲಯಗಳ ನಾಡಿನಲ್ಲಿ ತಮ್ಮ ಬಾಲ್ಯದ ಬದುಕನ್ನು ಕಂಡವರು. ಅಲ್ಲಿನ ಬ್ರಹದೀಶ್ವರನ ಆರಾಧನೆಗೆ ಒಳಗಾದವರು. ಸಹಜವಾಗಿ ಈ ಕಲಾವಿದರಿಗೆ ದೇವರು, ಧರ್ಮ, ಆರಾಧನೆ ಮುಂತಾದ ಧಾರ್ಮಿಕ ಕಾರ್ಯಗಳಲ್ಲಿ ತೊಡಗಿಕೊಂಡಿರುವುದು ವಿಶೇಷವೆನಿಸುತ್ತದೆ. ಬರೀ ಇಂಥ ಕಾರ್ಯಗಳಲ್ಲಿ ತೊಡಗಿಕೊಂಡರೆ ಸಾಲದು ಒಬ್ಬ ಕಲಾವಿದನಾಗಿ ಕಲಾಕೃತಿಗಳ ಮೂಲಕ ಸಾಧನೆ ಸಿದ್ಧಿಸುವುದು ಮುಖ್ಯ.

'ಪ್ರಜ್ಞೆ' ಎನ್ನುವುದು ಒಂದು ವಿಶೇಷವಾದ ರೀತಿಯಲ್ಲಿ ಅರಿಯುವ ಸಾಮರ್ಥ್ಯ ಎಂಬ ಮಾತನ್ನು ಹೇಳಿದೆವು. ನಮ್ಮ ಸುತ್ತ ನೂರಾರು ನೋಟಗಳಿವೆ; ನೂರಾರು ಘಟನೆಗಳು ನಡೆಯುತ್ತವೆ. ನಮಗೆ ಅವುಗಳೆಲ್ಲದರ ಬಗೆಗೆ ಅರಿವಿದೆ. ಆದರೆ ಅವು ನಮ್ಮ ಅರಿವಿನ ಮೇಲ್ ಪದರದಲ್ಲೋ ಅಂಚಿನಲ್ಲೋ ಹಾದು ಹೋಗುತ್ತವೆಯೆ ವಿನಾ ನಮ್ಮ 'ಪ್ರಜ್ಞೆ'ಯ ವಸ್ತುಗಳಾಗುವುದಿಲ್ಲ.[13] ಈ ದೈವತ್ವದ ಪ್ರಜ್ಞೆ ಕಲಾವಿದನಿಗೆ ಅವನ ಸುತ್ತಲಿನ ನೋಟ ಹಾಗೂ ಲೋಕಾನುಭವದ ಅರಿವೆ ಕಲಾಪ್ರಜ್ಞೆಗೆ ಪ್ರೇರಣೆಯಾಗುತ್ತದೆ. ಇಂಥ ಕಲಾಪ್ರಜ್ಞೆಯ ಅರಿವು ಕಲಾವಿದನಿಗೆ ಸದಾ ಜಾಗೃತಾವಸ್ಥೆಯಲ್ಲಿಯೇ ಇರುತ್ತದೆ. ರಾಮಚಂದ್ರನ್‌ರು ಇದಕ್ಕೆ ಹೊರತಿಲ್ಲ. ದೈವದ ನೆಲೆಯಲ್ಲಿ ನೂರಾರು ಚಿತ್ರಗಳನ್ನು ರಚಿಸಿದ್ದರೂ ಸಹ ಇಲ್ಲಿಯೂ ಮಹಿಳೆಯರ ವಸ್ತು ಪ್ರಧಾನವಾದ ಸನ್ನಿವೇಶಗಳೇ ಬಹಳಷ್ಟಿವೆ. ಅದರಲ್ಲಿ ಪ್ರಸ್ತುತ ಲಭ್ಯವಿರುವ ಚಿತ್ರಗಳನ್ನು ಮಾತ್ರ ಪ್ರಸ್ತಾಪಿಸಲಾಗುತ್ತಿದೆ. ರಾಮಚಂದ್ರನ್‌ರು ರಚಿಸಿದ ಒಂದು ಚಿತ್ರದಲ್ಲಿ ಓರ್ವ ಹಾಲು ಮೈಬಣ್ಣದ ಮಹಿಳೆಯು ದೀಪದ ತಟ್ಟೆಯನ್ನು ಹಿಡಿದು ನಿಂತಿರುವ ಭಂಗಿಯಲ್ಲಿ ಅನಾವರಣಗೊಂಡಿರುವಳು ಹಿನ್ನೆಲೆಯಲ್ಲಿ ಅಮೂರ್ತರೂಪದಲ್ಲಿ ಗಣೇಶನ ಪ್ರತಿಮೆಯನ್ನು ಸಂಯೋಜಿಸಲಾಗಿದೆ. ಇಲ್ಲಿ ಮುಖ್ಯವಾಗಿ ಆ ಸ್ತ್ರೀಯ ಸೌಂದರ್ಯವನ್ನು ಇಮ್ಮಡಿಯಾಗಿ ತೋರ್ಪಡುವಂತೆ ಅವಳ ಹಾಲುಬಿಳುಪಿನ ಮೈಬಣ್ಣ ಸುಂದರವಾದ ಅಂಗಸೌಷ್ಟವ, ಬೆಲೆಬಾಳುವ ಸೀರೆ ಮತ್ತು ಕುಪ್ಪಸ, ಆಭರಣಗಳ ವಿವರಣವನ್ನು ಅತ್ಯಂತ ರೋಮ್ಯಾಂಟಿಕ್ ವರ್ಣಗಳ ಮೂಲಕ ಸಂಯೋಜನೆಗೊಳಿಸಿದ್ದಾರೆ. ಈ ಚಿತ್ರವನ್ನು ಸಾಮಾನ್ಯ ನೋಡುಗನು ಸಹ ಅವಳ ಸಹಜ ಸೌಂದರ್ಯವನ್ನು ಆಸ್ವಾದಿಸಬಹುದಾಗಿದೆ. ರಾಮಚಂದ್ರನ್‌ರು ಈ ಚಿತ್ರದಲ್ಲಿ ಬೆಳಕು ಮತ್ತು ನೆರಳನ್ನು ಬಹಳ ಸಮಯೋಚಿತ ದೃಷ್ಟಿಯಲ್ಲಿ ಸಂಯೋಜಿಸಿದ್ದಾರೆ. ಸ್ತ್ರೀಯ ಮುಖ ಮತ್ತು ಎದೆಭಾಗದಲ್ಲಿ ದೀಪದ ಪ್ರಕಾರ ಬೆಳಕನ್ನು ಸಂಯೋಜಿಸಿ ಅವಳ ಮೈಕಾಂತಿಯನ್ನು ಇನ್ನಷ್ಟು ಇಮ್ಮಡಿಗೊಳಿಸಿದ್ದಾರೆ. ಆ ಬೆಳಕು ಇನ್ನೆಷ್ಟು ಬೇಕೋ ಅಲ್ಲಲ್ಲಿ ಮಂದರೂಪದಲ್ಲಿ ಲೇಪಿಸಿದ್ದಾರೆ. ಇವರ ಈ ಚಿತ್ರದಲ್ಲಿ ಕತ್ತಲೆ ಮತ್ತು ಬೆಳಕು ಎರಡು ಕಲ್ಪನೆಯೂ ಅತ್ಯಂತ ಕಲಾತ್ಮಕವಾಗಿ ಕೂಡಿದೆ. ಇವರ ಚಿತ್ರಗಳಲ್ಲಿ ಬಿಳಿವರ್ಣದ ಬಳಕೆ ಬಹಳಷ್ಟು ಎಚ್ಚರಿಂದ ಕೂಡಿದೆ. ಇದೊಂದೆ ಚಿತ್ರ ಈ ರೀತಿಯಲ್ಲಿ ರೂಪಗೊಂಡಿರುವುದಿಲ್ಲ. ಇವರ ಬಹುತೇಕ ಚಿತ್ರಗಳೂ ಈ ಪ್ರಜ್ಞೆಯನ್ನು ಮೆರೆದಿವೆ.

ಕಲಾವಿದ ರಾಮಚಂದ್ರನ್‌ರು ಹೆಚ್ಚಾಗಿ 'ಸ್ತ್ರೀ' ಪ್ರತಿಮೆಗಳನ್ನೇ ತಮ್ಮ ಸಂಯೋಜನಾ ಚಿತ್ರಗಳಲ್ಲಿ ಬಳಸಿದ್ದಾರೆ. 'ಸ್ತ್ರೀ' ಎಂದರೆ ಸೌಂದರ್ಯದ ಸಂಕೇತ. ಸೌಂದರ್ಯಾಸ್ವಾದನೆಗೆ ಪ್ರೇರಕ ಶಕ್ತಿ. ದೈವತ್ವದ ಶಕ್ತಿದೇವತೆ. ಆ ಪರಿಕಲ್ಪನೆ ರಾಮಚಂದ್ರನ್‌ರಲ್ಲಿ ಅಡಗಿದೆ. ಸೌಂದರ್ಯ ಪ್ರತೀಕವಾದ ಸ್ತ್ರೀಯನ್ನು ಕಲಾವಿದರು ಬಹಳ ಸಮರ್ಪಕವಾಗಿ ವಿಡಂಬಿಸಿದ್ದಾರೆ. ಇದು ಗಂಡು ಹೆಣ್ಣುಗಳ ಪರಸ್ಪರ ಬಯಕೆಗಳ ವಿನಿಮಯ ಎಂದರೂ ತಪ್ಪಾಗಲಾರದು. ಹೀಗಾಗಿ ಗಂಡಿಗೆ ಮೊದಲ ಆಯ್ಕೆ ಹೆಣ್ಣು. ಈ ಬಯಕೆಯ ಹೆಣ್ಣನ್ನು ತಾನು ಕಂಡಂತೆ ಅನಾವರಣ ಮಾಡಲು ಪ್ರಯತ್ನಿಸುತ್ತಾನೆ. ಅಂತಹ ಒಂದು ಪ್ರಯತ್ನವೂ ಈ ಕಲಾವಿದರ ಕಲಾಕೃತಿಗಳಲ್ಲಿ ಉದ್ದೀಪನಗೊಳ್ಳುತ್ತವೆ. ಈ ಕಲಾವಿದರು ರಚಿಸಿದ ದೈವತ್ವದ ಚಿತ್ರಗಳು 'ಭಕ್ತಿ'ರಸರೂಪವನ್ನು ಹೊರ ಸೂಸುತ್ತಿದ್ದರೂ ಸಹ ವಯೋಮಾನದ ಭಾವಗಳಲ್ಲಿ ವೈರುಧ್ಯತೆಯನ್ನು ಕಾಣುತ್ತೇವೆ. ಹೇಗೆಂದರೆ ಇವರ ಒಂದು ಕೃತಿಯಲ್ಲಿ ಸ್ತ್ರೀಯರು ಸುಂದರವಾಗಿ ಅಲಂಕೃತಗೊಂಡು ಕೈಯಲ್ಲಿ ಹೂವು ಮತ್ತು ಪೂಜಾ ಬುಟ್ಟಿಗಳನ್ನು ಹಿಡಿದು ದೇವಸ್ಥಾನಕ್ಕೆ ಹೊರಟಿರುವರು. ಈ ಸ್ತ್ರೀ ಪ್ರತಿಮೆಗಳು ಸುಂದರ ಶರೀರ, ಅಲಂಕೃತ ವೇಷ-ಭೂಷಣ ಅವರ ಭಾವ-ಭಂಗಿಗಳು ಯುವ ಪೀಳಿಗೆಯನ್ನು ಶೃಂಗಾರ (ರತಿ ಬಯಕೆಯ) ಅವರನ್ನು

ಬಡಿದೆಬ್ಬಿಸುತ್ತವೆ. ಇದು ಅವರ ಸಹಜ ಬಯಕೆ ನಂತರದ್ದು ದೇವರಲ್ಲಿನ ನಂಬಿಕೆ ಮತ್ತು ಆರಾಧನೆಯು ಭಕ್ತಿಯ ಸ್ವರೂಪ. ಭರತನ ಹೇಳಿಕೆಯಂತೆ ಸಹೃದಯನ ಮನಸ್ಸಿನಲ್ಲಿ ಸಂಚಾರದ ಭಾವನೆಗಳ ವಿನಿಮಯವು ಅಭಿವ್ಯಕ್ತಿಯ ಉತ್ತುಂಗಕ್ಕೆ ಕಾರಣವಾಗುತ್ತದೆ.

ರಾಮಚಂದ್ರನ್‌ರು ಒಬ್ಬ ಸೌಂದರ್ಯದ ಆರಾಧಕರಾಗಿ ಕಲಾಪ್ರಜ್ಞೆಯ ಚಿಂತಕರಾಗಿ ಹಾಗೂ ಒಬ್ಬ ಸೃಜನಾತ್ಮಕ ವಿಚಾರವುಳ್ಳವರಾಗಿ ತಮ್ಮ ವೃತ್ತಿ ಬದುಕಿನಲ್ಲಿ ದೇವರು, ಧರ್ಮ, ಆಚರಣೆ, ಆರಾಧನೆ, ಭಕ್ತಿಯಂತಹ ಪರಿಕಲ್ಪನೆಯ ಚಿತ್ರಗಳನ್ನು ಸಂಯೋಜಿಸಿದ್ದಾರೆ.

- **ಬಸ್ ನಿಲ್ದಾಣದ ದೃಶ್ಯಗಳು**

ರಾಮಚಂದ್ರನ್‌ರು ನಿತ್ಯ ಲೌಕಿಕ ಬದುಕನ್ನು ಅನುಭವಿಸಿ ರೇಖೆ ಹಾಗೂ ವರ್ಣಗಳ ಮೂಲಕ ಸಾಮಾಜಿಕರ ಬದುಕು ಬವನ್ನೆಯನ್ನು ತೋರಿಸಿಕೊಟ್ಟಿದ್ದಾರೆ. ಕೇವಲ ಚಿತ್ರಗಳು ಸೌಂದರ್ಯ ಪ್ರಜ್ಞೆಯನ್ನು ತೋರ್ಪಡಿಸದೇ ಸಾಮಾಜಿಕ ಕಳಕಳಿಯನ್ನು ಬಿಂಬಿಸುತ್ತವೆ. ಒಬ್ಬ ಕಲಾವಿದನು ತನ್ನ ಅರಿವಿಗೆ ಬಾರದಂತೆ ಪ್ರತ್ಯಕ್ಷವಾಗಿಯೋ ಅಥವಾ ಪರೋಕ್ಷವಾಗಿಯೋ ಸಾಮಾಜಿಕ ಸಂಬಂಧಗಳನ್ನು ಬೆಸೆಯುತ್ತಾನೆ. ಅವು ಸಾಮಾನ್ಯರಿಗೆ ಕೇವಲ ಚಿತ್ರಗಳಂತೆ ಕಂಡರೆ ಪ್ರಜ್ಞಾವಂತರಿಗೆ ಸಮಾಜದ ಬಿಂಬವು ಕಾಣಿಸುತ್ತದೆ. ರಾಮಚಂದ್ರನ್‌ರ ಯಾವುದೇ ರೀತಿಯ ಚಿತ್ರಗಳನ್ನು ಪರಿಗಣಿಸಲಾಗಿ ಚಿತ್ರರಸಿಕರಿಗೆ ರಸದೌತನವನ್ನು ನೀಡಿದರೆ ಚಿಂತಕರಿಗೆ ಹೊಸ ದೃಷ್ಟಿಕೋನವನ್ನು ಒದಗಿಸುತ್ತವೆ.

ನಮ್ಮ ಭಾರತೀಯರ ಸಾಮಾಜಿಕ ಬದುಕು ಸಾಗರದಷ್ಟು ವಿಶಾಲವಾದುದು. ಇಲ್ಲಿನ ವಿಭಿನ್ನ ಜನಾಂಗ, ವಿಭಿನ್ನ ಸಂಸ್ಕೃತಿ, ವಿಭಿನ್ನ ಆಚಾರ ವಿಚಾರ ಹಾಗೂ ವಿಭಿನ್ನ ಸಂಪ್ರದಾಯಗಳಿಂದ ಜಾಗತಿಕ ಮಟ್ಟದಲ್ಲಿ ಪ್ರತ್ಯೇಕವಾಗಿ ನಿಲ್ಲುತ್ತದೆ. ಇಂಥ ಬದುಕಿನಲ್ಲಿ ಕಲಾವಿದನು ತನ್ನ ಅಸ್ತಿತ್ವವನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಅವನ ಮುಂದೆ ನಿತ್ಯ ಬದುಕಿನಲ್ಲಿ ಕಂಡುಬರುತ್ತದೆ. ಕಾರ್ಮಿಕರ ಬವನೆ, ಭಿಕ್ಷುಕ, ಧರ್ಮ, ಪ್ರಚಾರ, ಆಟ, ನೋಟ, ದುಃಖ ದುಮ್ಮಾನಗಳನ್ನು ಅವನ ಮನಸ್ಸನ್ನು ಸಂಚಲನಗೊಳಿಸುತ್ತವೆ. ಕಾರ್ಖಾನೆಗಳಲ್ಲಿ ಹೋದರೆ ಅಲ್ಲಿನ ಕಾರ್ಮಿಕರ ಕೆಲಸ, ಪರದಾಡುವ ರೀತಿ ಇತ್ಯಾದಿ ಚಿತ್ರಣ ಕಂಡುಬರುತ್ತದೆ. ಆಸ್ಪತ್ರೆಯಲ್ಲಿ ಹೋದರೆ ಅಲ್ಲಿನ ರೋಗಿಗಳ ನೋವು, ಸಿಬ್ಬಂದಿಗಳ ವೈಖರಿ ಕಣ್ಣು ಹಾಸಿದರೆ ಜನರು ತಮ್ಮ ತಮ್ಮ ಊರಿಗೆ ತೆರಳುವ ದೃಶ್ಯ ತಮ್ಮ ಸಾಮಾನುಗಳನ್ನು ಲಗೇಜ್ ಮಾಡುವ ದೃಶ್ಯ, ಅವಸರವಸರವಾಗಿ ಕೆಲಸಕ್ಕೆ ತೆರಳುವ ಜನರ ದೃಶ್ಯಗಳು, ಅಲ್ಲಿನ ಮಾರಾಟ ಮಳಿಗೆಗಳು ಹಾಗೂ ವಾಹನಗಳ ಚಿತ್ರಣಗಳು ಕಲಾವಿದನ ಮುಂದೆ ಬಂದು ನಿಲ್ಲುತ್ತದೆ. ಇಂಥ ಚಿತ್ರಣಗಳು ಕಲಾವಿದನ ಕಲಾಕೃತಿಗಳಿಗೆ ಪ್ರೇರಕ ಶಕ್ತಿಯಾಗುತ್ತವೆ. ಆ ದೃಶ್ಯಗಳನ್ನು ತಾನು ಕಂಡಂತೆ ಕ್ಯಾನ್ವಾಸ್ ಹಾಗೂ ಪೇಪರ ಮೇಲೆ ಅನಾವರಣಗೊಳಿಸುತ್ತಾನೆ. ಇಂಥ ಪ್ರಜ್ಞೆಯನ್ನು ಹೊಂದಿದ ರಾಮಚಂದ್ರನ್‌ರು ವರ್ಣಗಳ ಸಂಯೋಜನೆ ಮಾಡಿದ್ದಾರೆ. ಈ ಬಗೆಯ ಚಿತ್ರಗಳ ಸಂಖ್ಯೆ ಹಲವಾರು ಇದ್ದರೂ ಸಹ ಪ್ರಸ್ತುತ ಅದರಲ್ಲಿ ಲಭ್ಯವಿರುವ ಕಲಾಕೃತಿಗಳನ್ನು ಕುರಿತು ವಿವೇಚನೆ ಮಾಡಲಾಗಿದೆ. ರಾಮಚಂದ್ರನ್‌ರು ಯಾವುದೇ ರೀತಿಯ ಚಿತ್ರಗಳನ್ನು ರಚಿಸಿದರು ಅಲ್ಲಿನ ರೂಪಕಗಳನ್ನು ಅತ್ಯಂತ ಮನೋಜ್ಞವಾಗಿ ಕಲಾಜಗತ್ತಿಗೆ ಕೊಡಮಾಡಿದ್ದಾರೆ. ಅವರ ವರ್ಣಗಳ ಸೌಂದರ್ಯ ಸಂಪತ್ತನ್ನು ನೋಡಿದರೇನೆ ಸಹೃದಯನಿಗೆ ಆನಂದಾನುಭೂತಿಯಾಗುತ್ತದೆ.

ಅಧ್ಯಾಯದ ಮೂರರ ಕೊನೆ ಟಿಪ್ಪಣಿಗಳು

1) ಬಿ.ವಿ.ಕೆ. ಶಾಸ್ತ್ರಿ (ಸಂ); ರೇಖಾಚಿತ್ರ: 2008, ಪುಟ–IV
2) ಬಿ.ವಿ.ಕೆ. ಶಾಸ್ತ್ರಿ (ಸಂ); ರೇಖಾಚಿತ್ರ: 2008, ಪುಟ–15
3) ಬಿ.ವಿ.ಕೆ. ಶಾಸ್ತ್ರಿ (ಸಂ); ರೇಖಾಚಿತ್ರ: 2008, ಪುಟ–IX
4) ಕೆ.ವಿ. ಸುಬ್ರಹ್ಮಣ್ಯ; ಮುಖಗಳೊಂದಿಗೆ ಮುಖಾಮುಖಿ; 2004, ಪುಟ–6, 7
5) ಕೆ.ವಿ. ಸುಬ್ರಹ್ಮಣ್ಯ; ಮುಖಗಳೊಂದಿಗೆ ಮುಖಾಮುಖಿ; 2004, ಪುಟ–11
6) ಕೆ.ವಿ. ಸುಬ್ರಹ್ಮಣ್ಯ; ಮುಖಗಳೊಂದಿಗೆ ಮುಖಾಮುಖಿ; 2004, ಪುಟ–32, 33
7) ಕೆ.ವಿ. ಸುಬ್ರಹ್ಮಣ್ಯ; ಮುಖಗಳೊಂದಿಗೆ ಮುಖಾಮುಖಿ; 2004, ಪುಟ–35, 36
8) ಡಾ. ಡಿ.ಎ. ಉಪಾಧ್ಯ; ಪಾಶ್ಚಾತ್ಯ ದೃಶ್ಯಕಲೆಗಳು; 2011, ಪುಟ–85
9) ಡಾ. ಡಿ.ಎ. ಉಪಾಧ್ಯ; ಪಾಶ್ಚಾತ್ಯ ದೃಶ್ಯಕಲೆಗಳು; 2011, ಪುಟ–51, 52
10) ಡಾ. ಡಿ.ಎ. ಉಪಾಧ್ಯ; ಪಾಶ್ಚಾತ್ಯ ದೃಶ್ಯಕಲೆಗಳು; 2011, ಪುಟ–85
11) ಡಾ. ಡಿ.ಎ. ಉಪಾಧ್ಯ; ಪಾಶ್ಚಾತ್ಯ ದೃಶ್ಯಕಲೆಗಳು; 2011, ಪುಟ–71
12) ಡಾ. ಡಿ.ಎ. ಉಪಾಧ್ಯ; ಪಾಶ್ಚಾತ್ಯ ದೃಶ್ಯಕಲೆಗಳು; 2011, ಪುಟ–71
13) ಡಾ. ಜಿ.ಎಸ್. ಶಿವರುದ್ರಪ್ಪ; ಕಾವ್ಯಾರ್ಥ ಚಿಂತನ; 2002, ಪುಟ–15

ರೇಖಾ ಚಿತ್ರಗಳು










ರೇಖಾ ಚಿತ್ರಗಳು










ರೇಖಾ ಚಿತ್ರಗಳು













ಬಾವ ಚಿತ್ರಗಳು





ಬಾವ ಚಿತ್ರಗಳು





ಬಾವ ಚಿತ್ರಗಳು










ಬಾವ ಚಿತ್ರಗಳು










ಬಾವ ಚಿತ್ರಗಳು




ಸಂಯೋಜನ ಚಿತ್ರಗಳು











ಸಂಯೋಜನ ಚಿತ್ರಗಳು





ಸಂಯೋಜನ ಚಿತ್ರಗಳು








ಸಂಯೋಜನ ಚಿತ್ರಗಳು





ಸಂಯೋಜನ ಚಿತ್ರಗಳು







ಸಂಯೋಜನ ಚಿತ್ರಗಳು













ಸಂಯೋಜನ ಚಿತ್ರಗಳು











ಸಂಯೋಜನ ಚಿತ್ರಗಳು











ಅಮೂರ್ತ ಚಿತ್ರಗಳು





ಅಮೂರ್ತ ಚಿತ್ರಗಳು









ದೋಣಿ ಚಿತ್ರಗಳು





ದೋಣಿ ಚಿತ್ರಗಳು





ದೋಣಿ ಚಿತ್ರಗಳು









ಮುಖಪುಟ ವಿನ್ಯಾಸ





ಪೋಸ್ಟರ ಚಿತ್ರಗಳು





ಅಧ್ಯಾಯ - 4

ರಾಮಚಂದ್ರನ್‌ರ ಕಲಾಕೃತಿಗಳ ಮೇಲಾದ ಪ್ರಭಾವ ಪ್ರೇರಣೆ ಮತ್ತು ತಂತ್ರಗಾರಿಕೆ

ಅಧ್ಯಾಯ – 4

ಕೆ. ಎನ್. ರಾಮಚಂದ್ರನ್‌ರ ಕಲಾಕೃತಿಗಳ ಮೇಲಾದ ಪ್ರಭಾವ, ಪ್ರೇರಣೆ ಮತ್ತು ತಂತ್ರಗಾರಿಕೆ.

ಪ್ರಭಾವ :

ಕಲೆ ಮೂಲತಃ ಮಾನವನ ಸೃಷ್ಠಿ ಅದು ಪ್ರತಿಭಾವಂತ ಮಾನವನ ಜೀವನಾನುಭವ ಅಭಿವ್ಯಕ್ತಿ ಕಲೆ ಮಾನವತೆಯ ವಿಶಿಷ್ಟ ಆನಂದದಾಯಕದ ಮಹತ್ತರ ಶಕ್ತಿ, ಭೌತಿಕ ಜಗತ್ತಿನ ಬಾಹ್ಯ ಸೃಷ್ಠಿಗಿಂತ ಹೆಚ್ಚಾಗಿ ಮಾನವನ ಆಂತರಿಕ ನಿತ್ಯಸತ್ಯದ ಆನಂದಾನುಭವದ ಅಭಿವ್ಯಕ್ತಿ ಕಲಾವಿದನ ಈ ಕಲೆ ಭಾವ, ಬಣ್ಣ, ರೇಖೆ ಮುಂತಾದ ವಿವಿಧ ಮಾಧ್ಯಮದಲ್ಲಿ ಹೊಮ್ಮಿ ಸಮಾಜದ ಹೃದಯವಂತಿಕೆಯನ್ನು ಅಣಿ ಮಾಡುತ್ತದೆ.[1]

ರಾಮಚಂದ್ರನ್‌ರವರು ಬಾಲ್ಯದಲ್ಲಿರುವಾಗಲೇ ಅಲ್ಲಿಯ ಪರಿಸರ ವಾತಾವರಣ ಜನರ ಸಾಂಸ್ಕೃತಿಕವಾದ ಜೀವನ ಇವುಗಳನ್ನೆಲ್ಲ ದಿನ ನಿತ್ಯದ ಬದುಕಿನಲ್ಲಿ ಗಮನಿಸುತ್ತಿದ್ದರು. ಇವರು ಯಾವ ಕಲಾಕೃತಿಗಳನ್ನು ಮೊದಲು ನೋಡಿ ಪ್ರಭಾವಗೊಂಡಿದ್ದಾರೆಂದರೆ ಕಡಲ ತೀರದಲ್ಲಿರುವಂತಹ ಹಡಗುಗಳ ದೃಶ್ಯಗಳು ಹಾಗೂ ಅಲ್ಲಿನ ಸೂರ್ಯೋದಯದಲ್ಲಿ ಕಾಣುವಂತಹ ಸುಂದರ ವರ್ಣಗಳನ್ನು ಇವರು ಮನದಲ್ಲಿಟ್ಟುಕೊಳ್ಳುತ್ತಿದ್ದರು. ರಮ್ಯ ತಾಣವಾದ ಇವರ ಊರು ಯಾವಾಗಲು ಹಚ್ಚ ಹಸಿರಿನಿಂದ ಕೂಡಿರುತ್ತಿತ್ತು. ತೆಂಗಿನಮರ, ಮೀನುಗಾರರು ಬಲೆಯನ್ನು ಹಿಡಿದುಕೊಂಡು ಸಮುದ್ರಕ್ಕೆ ಹೋಗುವ ಸನ್ನಿವೇಶಗಳು ಇವರ ಚಿತ್ರ ರಚನೆಗೆ ಪ್ರಭಾವ ಬೀರಲು ಕಾರಣವಾದವು.

ಗುರುಕುಲ ಪದ್ಧತಿಯಲ್ಲಿ ವಿದ್ಯೆ ಕಲಿಯುವಾಗ ಇವರು ಅಲ್ಲಿಯ ಪರಿಸರ ಶಿಸ್ತು ಪಾಲನೆ ವಿನಯವಂತಿಕೆ ಯಾವುದೇ ಕೆಲಸ ಮಾಡುವಾಗ ಶ್ರದ್ಧೆ, ಭಕ್ತಿ, ಆಸಕ್ತಿ ಇವುಗಳನ್ನು ಗುರುಗಳು ಹೇಳಿಕೊಡುತ್ತಿದ್ದರು. ಗುರುಗಳ ಪ್ರಭಾವದಿಂದ ಇವರು ಮನಸ್ಸನ್ನು ಹತೋಟಿಯಲ್ಲಿಟ್ಟುಕೊಂಡು ಉತ್ತಮ ಸಾಮಾಜಿಕ ಚಿತ್ರಗಳನ್ನು ರಚಿಸಲು ಸುತ್ತಮುತ್ತಲಿನ ವಾತಾವರಣ ಇವರ ಮೇಲೆ ಪ್ರಭಾವ ಬೀರಿತು. ನಂತರ ವೃತ್ತಿ ಜೀವನದಲ್ಲಿ ರೇಬ್ರಾಂಟ್ ಕಲಾಕೃತಿಗಳನ್ನು ಗಮನಿಸಿ ನಾನು ಅವರಂತೆ ಬಾವಚಿತ್ರಗಳನ್ನು ರಚಿಸಬೇಕೆಂದು ರೇಬ್ರಾಂಟ್‌ರ ಚಿತ್ರಗಳು ಇವರ ಮೇಲೆ ಪ್ರಭಾವ ಬೀರಿದ್ದು ಗಮನಿಸಲಾಗಿದೆ.

ಪ್ರೇರಣೆ :

ಯಾವುದೇ ಒಂದು ನಾಡಿನ ಜನಾಂಗದ ಬದುಕಿನ ಬೆಳವಣಿಗೆಯನ್ನು ಅವರ ಪರಂಪರೆ ಹಾಗೂ ಸಂಪ್ರಬಂಧಗಳನ್ನು ತಿಳಿಯಬೇಕಾದರೆ ಅವರ ಪರಿಸರದಲ್ಲಿ ಜೀವ ಪಡೆದಿರುವ ಕಥೆಗಳನ್ನು ಅಧ್ಯಯನ ಮಾಡಬೇಕಾಗುತ್ತದೆ. ಮಾನವನ ಸಾಂಸ್ಕೃತಿಕ ಲೋಕದ ಪ್ರತಿ ಹಂತದಲ್ಲಿ ಕಲೆ ಪ್ರೇರಣೆಯ ವಸ್ತು ಆಗಿರುತ್ತದೆ. ಕಲಾವಿದನಿಗೆ ಪ್ರಕೃತಿಯ ಪ್ರೇರಣೆಯನ್ನು ನೀಡುತ್ತದೆ. ಅಲ್ಲದೇ ಒಂದೊಂದು ಸವಾಲನ್ನು ಎದುರಿಸುವ ಸಂದರ್ಭವನ್ನು ಸೃಷ್ಟಿಸುತ್ತದೆ.[2]

ರಾಮಚಂದ್ರನ್‌ರವರು ಚಿತ್ರಗಳನ್ನು ರಚಿಸಲು ಪ್ರೇರಣೆ ಕೊಟ್ಟದ್ದು ಇದೇ ಊರಿನ ಜನರು. ಈ ಊರಿನ ಗ್ರಾಮದೇವತೆಯ ಜಾತ್ರೆ ಸಮಯದಲ್ಲಿ ಅಡುಗೆ ಮಾಡಲು ಒಲೆಗಳನ್ನು ಹಚ್ಚುತ್ತಿದ್ದರು. ಅಡುಗೆ ಮುಗಿದ ಮೇಲೆ ಒಲೆಯಲ್ಲಿದ್ದ ಇದ್ದಿಲನ್ನು ತೆಗೆದುಕೊಂಡು ಹತ್ತಿರವಿದ್ದ ಯಾವುದಾದರೊಂದು ದೊಡ್ಡ ಗೋಡೆಯ ಮೇಲೆ ತಮಗೆ ಇಷ್ಟ ಬಂದ ರೀತಿಯಲ್ಲಿ ಚಿತ್ರಗಳನ್ನು ಬಿಡಿಸುತ್ತಿದ್ದರು ಆ ಚಿತ್ರ ತುಂಬಾ ಚೆನ್ನಾಗಿ ಮೂಡಿಬರುತ್ತಿತ್ತು. ಅದನ್ನು ನೋಡಿದ ಊರಿನ ಜನರು ಇವರನ್ನು "ಎಂಥಾ ಚಿತ್ರ ಬಿಡಿಸಿದ್ದೀಯಾ ತುಂಬಾ ಚನ್ನಾಗಿದೆ" ಎಂದು ಹೇಳುತ್ತ ನೀನು ಯಾಕೆ ಬೆಂಗಳೂರು ಕಡೆಗೆ ಹೋಗಿ ಇನ್ನೂ ಹೆಚ್ಚಿನದಾಗಿ ಚಿತ್ರಕಲೆ ಬಗ್ಗೆ ವಿಧ್ಯಾಭ್ಯಾಸ ಮಾಡಬಾರದೆಂದು ಕೇಳುತ್ತ ನೀನು ಇದನ್ನೆ ವಿಧ್ಯಾಭ್ಯಾಸ ಮಾಡಿದರೆ ಮುಂದೊಂದು ದಿನ ಒಬ್ಬ ದೊಡ್ಡ ಕಲಾವಿದನಾಗುತ್ತೀಯ ಎಂದು ಪ್ರೇರಣೆ ಕೊಟ್ಟರು.

ನಂತರದಲ್ಲಿ ಸ್ಕೂಲಿಗೆ ಸೇರಿದಾಗ ಅಲ್ಲಿನ ಗುರುಗಳಾದ ಧರ್ಮಲಿಂಗಂ ಪಿಳ್ಳೆ ಎಂಬುವರ ಬಳಿ ಕಲಿಯುತ್ತಿರುವಾಗ ಅವರು ನನ್ನಲ್ಲಿರುವ ಒಂದು ಚಿಕ್ಕ ಸಭೆಯ ಆಸಕ್ತಿಯನ್ನು ಗುರುತಿಸಿ ಇವನು ಉತ್ತಮ ಕಲಾವಿದನನ್ನಾಗಿ ಮಾಡಬೇಕೆಂಬ ಆಸೆಯಿತ್ತು. ಶಾಲೆಯಲ್ಲಿ ಅಭ್ಯಾಸ ಮಾಡುವಾಗ ಎಲ್ಲಾ

ತರಹದ ಮಾಧ್ಯಮದಲ್ಲಿ ಚಿತ್ರ ಬರೆಯುವಂತಹ ಸ್ಫೂರ್ತಿ, ಪ್ರೇರಣೆ ನೀಡಿದವರು ಗುರು ಧರ್ಮಲಿಂಗಂ ಪಿಳ್ಳೈಯವರು. ಶಾಲೆ ಮುಗಿದ ಮೇಲೂ ಅವರ ಮನೆಯಲ್ಲಿ ಗೃಹಪಾಠ ಕಲಿಯಲಿಕ್ಕೆ ಹೋಗುತ್ತಿದ್ದರು. ಅಲ್ಲಿಯ ಅಭ್ಯಾಸ ವಸ್ತುಚಿತ್ರ ಬರೆಯಲು ನೆರಳು ಬೆಳಕು ಪ್ರಸ್ಪೆಟ್ವೀವ್‌ಗಳನ್ನು ಬಳಸಿಕೊಂಡು ಚಿತ್ರ ಬರೆಯುವುದನ್ನು ಕಲಿಸಿದರು. ಜಲವರ್ಣದಲ್ಲಿ ಪ್ರಕೃತಿ ಚಿತ್ರಣಗಳನ್ನು ಸ್ಥಳಕ್ಕೆ ಹೋಗಿ ಅಲ್ಲಿ ನೋಡಿದ ಸುಂದರ ದೃಶ್ಯವನ್ನು ಆಯ್ಕೆ ಮಾಡಿಕೊಂಡು ನಂತರ ಬಣ್ಣಗಳ ಪ್ರಾಸ್‌ಪೇಕ್ಟ್ವೀವ್‌ನ್ನು ಇವರಿಗೆ ಹೇಳಿಕೊಡುತ್ತಿದ್ದರು. ಆದ್ದರಿಂದ ಜಲವರ್ಣದಲ್ಲಿ ಇವರ ಕಲಾಕೃತಿಗಳು ತುಂಬಾ ಮನಮೋಹಕರವಾಗಿ ರಚಿಸುತ್ತಿದ್ದರು. ಹೀಗೆ ರಚಿಸಿದ ಚಿತ್ರಗಳನ್ನು ಅವರ ಗುರುಗಳು ಇನ್ನೂ ಉತ್ತಮ ರೀತಿಯಲ್ಲಿ ಚಿತ್ರ ರಚಿಸು ಎಂದು ಪ್ರೇರಣೆ ನೀಡುತ್ತಿದ್ದರು.

ನಂತರದಲ್ಲಿ ಹಾಗೆಯೇ ಬ್ಯಾನರ್, ಪೋಸ್ಟರ್ ಕಲೆಯಲ್ಲಿ ತೊಡಗಿಕೊಂಡರು. ಚೆನ್ನೈಯಿಂದ ಬೆಂಗಳೂರಿಗೆ ಬಂದು ಇವರು ತಮ್ಮ ವೃತ್ತಿ ಬದುಕನ್ನು ನಡೆಸುವ ಸಮಯದಲ್ಲಿ ಮೊದಲು ಪರಿಚಯವಾದವರು ಲಿಂಗದೇವರು. ಇವರು ಸಿನಿಮಾಗಳಿಗೆ ಪೋಸ್ಟರ್ ವರ್ಕ್‌ನ್ನು ಹೊಸ ಹೊಸ ತಂತ್ರಗಳ ಮೂಲಕ ಚಿತ್ರಗಳನ್ನು ರಚಿಸುತ್ತಿರುವುದನ್ನು ಗಮನಿಸಿ ಇನ್ನೂ ಒಳ್ಳೆಯ ಉತ್ತಮ ಚಿತ್ರಗಳನ್ನು ರಚಿಸು ಎಂದು ಪ್ರೋತ್ಸಾಹ ನೀಡುತ್ತಿದ್ದರು. ನಂತರ ಎಸ್. ಜಿ. ವಾಸುದೇವನ್‌ರವರ ಒಂದು ಚಲನ ಚಿತ್ರಕ್ಕೆ ಪೋಸ್ಟರ್ ರಚನೆ ಮಾಡುವುದಕ್ಕೆ ಹೇಳಿದರು. ನಂತರ ಅವರು ಬರೆದುಕೊಂಡು ಹೋದಾಗ ಅದನ್ನು ನೋಡಿ ತುಂಬಾ ಚನ್ನಾಗಿದೆ ಎಂದು ಪ್ರಶಂಸೆ ಕೊಟ್ಟರು. ಅವರಿಗೆ ಇನ್ನೂ ಉತ್ತಮ ರೀತಿಯಲ್ಲಿ ಚಿತ್ರರಚಿಸಲು ಅವರಿಗೆ ಪ್ರೇರಣೆಯಾಯಿತು. ನಂತರ ಎಸ್. ಜಿ. ವಾಸುದೇವ್ ಒಂದು ಹೊಸ ರೀತಿಯ ತಂತ್ರಗಳನ್ನು ಪ್ರಯೋಗ ಮಾಡಿ ಹೊಸ ತರಹದ ಪೋಸ್ಟರ್‌ನ್ನು ರಚನೆಮಾಡಿಕೊಡಿ ಎಂದು ಹೇಳಿದರು ಅವರು ಸ್ಕೇಚ್‌ಪೆನ್ ಬಳಸಿಕೊಂಡು ಬಣ್ಣಗಳನ್ನು ನಿಧಾನವಾಗಿ ಪ್ರೆಸ್ ಮಾಡಿಕೊಂಡು ನಂತರ ಜೋರಾಗಿ ಪ್ರೆಸ್ ಮಾಡಿ ಎರಡು ಹೊತಗಳು ಹಾಕಿ ಹೊಸ ತರಹದ ಚಿತ್ರವನ್ನು ರಚನೆ ಮಾಡಿದರು. ಆಗ ವಾಸುದೇವ್ ರವರು ಪ್ರಶಂಸೆಯನ್ನು ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಹೀಗೇ ಅವರುಗಳ ಪ್ರೇರಣೆಯಿಂದಲೇ ನಾನು ಒಳ್ಳೆಯ ಚಿತ್ರಗಳನ್ನು ರಚನೆ ಮಾಡುತ್ತಾ ಬಂದಿದ್ದೇನೆಂದು ಹೇಳುತ್ತಾರೆ. ಹೀಗೆ ಅವರ ಚಿತ್ರಗಳನ್ನು ನೋಡುತ್ತಾ ಬೇರೆ ಕಲಾವಿದರು ಕಲಾವಿಮರ್ಶಕರು ಉತ್ತಮ ಅಭಿಪ್ರಾಯಗಳನ್ನು ನೀಡುತ್ತಾ ಬಂದರು.

ಬೆಂಗಳೂರಿನಲ್ಲಿ ನಡೆದ ಕಲಾಮೇಳವೊಂದರಲ್ಲಿ ಭಾಗವಹಿಸಿದ್ದರು. ಅಲ್ಲಿ ರಾಮಚಂದ್ರನ್‌ರವರಿಗೆ ಜಿ. ಎಸ್. ಮಣಿಯವರು, ಆರ್. ಎಂ. ಹಡಪದರವರು ಭೇಟಿಯಾಗಿದ್ದರು. ಇವರು ಬ್ಯಾನರ್ ಕಲಾವಿದರೆಂದು ಗೊತ್ತಾದಾಗ ಅವರು ಹೇಳಿದರು ನೀವು ಬ್ಯಾನರ್‌ನಲ್ಲಿ ಮಾಡುವಂತಹ ಚಿತ್ರಗಳನ್ನು ರಚಿಸಿ ಎಂದು ಇವರಿಗೆ ಕೇಳಿದಾಗ ರಾಜಕುಮಾರ್‌ರವರ ಚಿತ್ರ ಬರೆದಿದ್ದರು. ಮೇಳಕ್ಕೆ ಬಂದ ಜನರೆಲ್ಲರು ಒಳ್ಳೆಯ ಪ್ರತಿಕ್ರಿಯೆಯನ್ನು ಕೊಟ್ಟರು. ಅದರ ಪ್ರೇರಣೆಯಿಂದ ಇನ್ನೂ ಹೆಚ್ಚು ಚಿತ್ರಗಳನ್ನು ರಚಿಸಲು ಮುಂದಾದರು.

ಚೆನ್ನೈಯಲ್ಲಿ ಅವರಿಗೆ ಒಬ್ಬ ಅಣ್ಣ ಇದ್ದಾರೆ. ಅವರನ್ನು ತಂದೆಯಾಗಿ ಗುರವಾಗಿ ರಾಮಚಂದ್ರನ್‌ರವರು ಕಾಣುತ್ತಿದ್ದರು. ನಾನು ಸ್ಕೂಲ್ ಆಫ್‌ಗೆ ಸೇರಲು ಹಣ ವಿಲ್ಲದಿದ್ದಾಗ ಇವರು ಹಣಕೊಟ್ಟು ಓದಿಸಿದ್ದರು. ಆಗಿನಕಾಲದಲ್ಲಿ ಇವರು ನನ್ನ ಗುರುವಿನ ಸಮಾನ ಅವರು ನನ್ನ ಚಿತ್ರಗಳನ್ನು ನೋಡಿ ಪ್ರೇರಣೆ ಕೊಡುತ್ತಿದ್ದರು. ಇವರು ಒಬ್ಬ ದೊಡ್ಡ ಕವಿಯು ಆಗಿದ್ದಾರೆ. ಸಂಗೀತ ನಿರ್ದೇಶಕ ಇಳೆಯರಾಜರ, ಸಂಗೀತಕ್ಕೆ ಹಾಡುಗಳನ್ನು ಬರೆದಿದ್ದಾರೆ. ಈಗಲೂ ಆ ಹಾಡುಗಳು ಕೇಳಲು ಹಿಂಪಾಗಿವೆ.

ಹೀಗೆ ಅವರ ಚಿತ್ರಗಳನ್ನು ಸಾಕಷ್ಟು ಜನರು ನೋಡಿ ಇನ್ನೂ ಉತ್ತಮ ರೀತಯಲ್ಲಿ ಹೊಸ ತರಹದಲ್ಲಿ ಚಿತ್ರಗಳನ್ನು ರಚಿಸಿ ಎಂದು ಪ್ರೇರಣೆ ನೀಡುತ್ತಿದ್ದರು. ಹಲವಾರು ಪತ್ರಿಕೆಗಳಲ್ಲಿನ ಬರಹಗಾರರು ಸಿನಿಮಾ ರಂಗದ ಅನೇಕ ನಿರ್ದೇಶಕರು, ನಾಯಕ ನಟರುಗಳು ನನ್ನ ಚಿತ್ರಗಳನ್ನು ನೋಡಿ ಉತ್ತಮ ಪ್ರತಿಕ್ರಿಯೆ ನೀಡಿದ್ದಾರೆ. ಅವರೆಲ್ಲರ ಮೆಚ್ಚುಗೆಯೇ ನನಗೆ ಇನ್ನೂ ಚಿತ್ರ ರಚನೆಮಾಡಲು ಪ್ರೇರಣೆಯಾಯಿತು. ಎಚಿದು ಹ್ಲದಯ ತುಂಬಿ ಹೇಳುತ್ತಾರೆ.

ತಂತ್ರಗಾರಿಕೆ :

ಕಲಾವಿದನು ಯಾವುದೇ ಕಲಾಕೃತಿಯನ್ನು ರಚನೆ ಮಾಡಬೇಕಾದರೆ ವಿಭಿನ್ನವಾದ ತಂತ್ರಗಾರಿಕೆಯ ಮೂಲಕವೇ ರಚನೆ ಮಾಡುತ್ತಾನೆ. ತಂತ್ರ ಎನ್ನುವುದು ಕಲಾಕೃತಿಯ ನಿರ್ಮಾಣ ಹಂತದಲ್ಲಿ ಕೂಡಿದ್ದಿರುತ್ತದೆ. ಕಲಾವಿದನ ಮೂಲ ಆಶಯಗಳನ್ನು ಸಾಕ್ಷಾತಕರಿಸಿಕೊಳ್ಳಲು ಹಲವು ಮಾರ್ಗಗಳಲ್ಲಿ ತಂತ್ರಗಾರಿಕೆಯು ಒಂದಾಗಿದೆ. ಇದಕ್ಕೆ ನಿದರ್ಶನವಾಗಿ ಅನೇಕ ಕಲಾವಿದರು ನಾಡಿಗೆ ಕಲಾಕ್ಷೇತ್ರದ ಮೂಲಕ ತಮ್ಮ ತಂತ್ರಗಾರಿಕೆಯ ಮೂಲಕ ಕೊಡುಗೆಯನ್ನು ನೀಡಿದ್ದಾರೆ.

ಕೆ. ಎನ್. ರಾಮಚಂದ್ರನ್‌ರವರು ಕಲಾಕೃತಿಗಳಲ್ಲಾಗಲಿ ಬ್ಯಾನರ್ ಪೋಸ್ಟರ್‌ಗಳಲ್ಲಾಗಲಿ ಅವರ ತಂತ್ರಗಾರಿಕೆಯ ಹೊಸ ಹೊಸ ರೀತಿಯಲ್ಲಿ ಚಿತ್ರಗಳನ್ನು ರಚಿಸಿರುವುದು ಗಮನಿಸಬಹುದಾಗಿದೆ. ತಂತ್ರಗಾರಿಕೆಯನ್ನು ಬಾಲ್ಯದಲ್ಲಿರುವಾಗಲೇ ಇವರು ಮನೆ ಬಾಗಲಿನ ಅರಿಸಿನ ಕುಂಕುಮ ವರ್ಣಗಳನ್ನಾಗಿ ಮಾಡಿ, ಮರಗಳ ಗೋಂದುಗಳಲ್ಲಿ ಇದ್ದಿಲು ಪುಡಿಯನ್ನು ಮಿಶ್ರಣ ಮಾಡಿ, ಕಪ್ಪು ವರ್ಣ ತಯಾರಿಸಿ, ಅಜ್ಜಿಯ ಸುಣ್ಣದ ಡಬ್ಬಿಯಲ್ಲಿ ಸುಣ್ಣವನ್ನು ಕದ್ದು ತಂದು ಅರಿಶಿನ ಸುಣ್ಣ ಮಿಶ್ರಣಮಾಡಿದಾಗ ಕಿತ್ತಳೆ ಬಣ್ಣವನ್ನು ತಯಾರು ಮಾಡಿಕೊಳ್ಳುತ್ತಿದ್ದರು. ಮರಗಳ ಎಲೆ ಹೂಗಳಿಂದ ಹಸಿರು ಬಣ್ಣಗಳನ್ನು ತಯಾರಿಸಿಕೊಂಡು ಹೊಸ ತಂತ್ರಗಳುಳ್ಳ ಚಿತ್ರಗಳನ್ನು ತಯಾರು ಮಾಡಿಕೊಳ್ಳುತಿದ್ದರು. ನಂತರ ಇವರು ಕಲಾಭ್ಯಾಸವನ್ನು ಮುಗಿಸುವ ಸಮಯದಲ್ಲಿ ಪೆನ್ಸಿಲ್, ಕ್ರಿಯಾನ್ಸ್ ಜಲವರ್ಣಗಳನ್ನು ಬಳಸಿಕೊಂಡು ಹೊಸ ಹೊಸ ರೀತಿಯಲ್ಲಿ ಚಿತ್ರಗಳನ್ನು ರಚಿಸುತ್ತಿದ್ದರು.

ಇವರು ಬ್ಯಾನರ್ಸ್ ಬರೆಯುವುದಕ್ಕೆ ಬಂದಾಗ ನಾಲ್ಕು ಡ್ರಮ್‌ಗಳಲ್ಲಿ ಬಣ್ಣ ಕಲಸಿ ಒಂದು ದಿನ ಬಿಟ್ಟು ಅನಂತರ ಬಣ್ಣಗಳನ್ನು ಹಚ್ಚಲು ಹುಡುಗರಿಗೆ ಬಿಡುತ್ತಿದ್ದರು. ಬಾವಚಿತ್ರವನ್ನು ಇವರು ಪೂರ್ಣ ಪ್ರಮಾಣದಲ್ಲಿ ರಚಿಸುತ್ತಿದ್ದರು. 100 ಅಡಿ ಎತ್ತರದ ಕಟ್‌ಔಟ್‌ಗಳನ್ನು ನೋಡಿದಾಗ ಅದು ಒಂದೇ ತರಹದ ಬಣ್ಣದಲ್ಲಿ ಬರೆದಿರುವಂತೆ ಕಾಣುತ್ತದೆ. ಆದರೆ ಅದು ಹತ್ತಿರ ನಿಂತು ನೋಡಿದಾಗ ಬಣ್ಣಗಳನ್ನು ಬಳಕೆ ಮಾಡಿಕೊಂಡ ಚಿತ್ರದಂತೆ ಕಾಣುತ್ತದೆ. ದೂರದಿಂದ ನಿಂತು ನೋಡಿದಾಗ ಕಪ್ಪು ಬಿಳುಪಿನ ಬಣ್ಣದಂತೆ ಕಾಣುತ್ತದೆ ಎಂದು ಹೇಳುತ್ತಾರೆ.

ಇವರು ರಚನೆ ಮಾಡಿದ ಕಲಾಕೃತಿಗಳೆಲ್ಲವು ತೈಲವರ್ಣದಿಂದ ರಚನೆ ಮಾಡಿರುವುದು ಹೆಚ್ಚು ಕಂಡುಬರುತ್ತವೆ. ಹಲವಾರು ಕಲಾವಿದರು ತೈಲವರ್ಣದಲ್ಲಿ ರಚನೆ ಮಾಡುವಾಗ ಮೊದಲು ಡಾರ್ಕ್‌ನಿಂದ ಲೈಟ್ ಮಾಡಿಕೊಂಡು ಬರುತ್ತಾರೆ. ಆದರೆ ಇವರು ಜಲವರ್ಣದಿಂದ ಮಾಡಿದ ಚಿತ್ರ ರಚನೆಗಳು ಬೆಳಕಿನಿಂದ ಕತ್ತಲ ಕಡೆಗೆ (ಲೈಟ್‌ನಿಂದ ಡಾರ್ಕ್‌ವರೆಗೆ) ಮಾಡುವುದು ಇವರ ನವೀನ

ತಂತ್ರಗಾರಿಕೆ ಹಾಗೂ ಓವರ್ ಲ್ಯಾಪ್ ಸಹ ಮಾಡುತ್ತಾರೆ. ಬಣ್ಣಗಳ ಮೇಲೆ ಬಣ್ಣಗಳನ್ನು ಹಚ್ಚುತ್ತಾ ಬಂದು ಕಲಾಕೃತಿಯನ್ನು ಪೂರ್ಣಗೊಳಿಸುತ್ತಾರೆ ಎನ್ನಬಹುದು.

ಹೀಗೆ ಇವರು ರಚನೆ ಮಾಡಿದಂತಹ ಎಲ್ಲಾ ತರಹದ ಕಲಾಕೃತಿಗಳಲ್ಲಿಯೂ ಇವರದೇ ಆದ ಸ್ವಂತ ತಂತ್ರಗಾರಿಕೆಗಳನ್ನು ಬಳಸಿಕೊಂಡು ಚಿತ್ರಗಳನ್ನು ರಚನೆ ಮಾಡುವಲ್ಲಿ ಕಾರ್ಯಪ್ರವೃತ್ತರಾಗುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಅಮೂರ್ತ ಕಲೆಯನ್ನು ರಚನೆ ಮಾಡಲು ಮುಂದಾಗಿದ್ದರು. ಅದರಲ್ಲಿ ವರ್ಣಗಳ ಲೇಪನ ನೋಡಲು ಬಹಳ ಸುಂದರವಾಗಿ ಹೊಸ ಹೊಸ ತಂತ್ರಗಳನ್ನು ಇವರ ಚಿತ್ರಗಳಲ್ಲಿ ನಾವು ನೋಡಬಹುದಾಗಿದೆ.

ಅಧ್ಯಾಯ ನಾಲ್ಕರ ಕೊನೆ ಟಿಪ್ಪಣಿಗಳು

1) ಡಾ. ಎಸ್.ಸಿ. ಪಾಟೀಲ್; ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು; ಪುಟ-108
2) ಮಲ್ಲಿಕಾರ್ಜುನ ಬಾಗೋಡಿ; ಚಿತ್ರಕಲಾವಿದ ಜಿ.ಎಸ್. ಖಂಡೇರಾವ್; ಪುಟ-106

ಅಧ್ಯಾಯ – 5

ಕೆ. ಎನ್. ರಾಮಚಂದ್ರನ್ ಅವರಿಗೆ ಸಂದ ಪ್ರಶಸ್ತಿ ಪುರಸ್ಕಾರಗಳು

ಅಧ್ಯಾಯ : 5

ಕೆ.ಎನ್. ರಾಮಚಂದ್ರನ್‌ರವರಿಗೆ ಸಂದ ಪ್ರಶಸ್ತಿ ಪುರಸ್ಕಾರಗಳು

ಕೆ. ಎನ್. ರಾಮಚಂದ್ರನ್ ಅವರು ನಮ್ಮ ನಾಡಿನಲ್ಲಿ ಕಂಡ ಸಮಕಾಲಿನ ಅಗ್ರಗಣ್ಯ ಕಲಾವಿದರಲ್ಲಿ ಇವರು ಪ್ರಮುಖರಾಗಿ ಕಂಡುಬರುತ್ತಾರೆ. ಕಲೆಗೆ ತಮ್ಮ ಜೀವನವನ್ನೇ ಮುಡುಪಾಗಿಟ್ಟುಕೊಂಡವರು. ಕೆ. ಎನ್. ರಾಮಚಂದ್ರನ್ ಅವರು ಬಾಳಿನುದ್ದಕ್ಕೂ ಎಷ್ಟೇ ಕಷ್ಟಗಳು ಎದುರಾದರು ಅವನ್ನು ಲೆಕ್ಕಕಿಡದೆ ಕಲೆ, ಕಲಾದೇವಿಯ ಆರಾಧನೆಯಲ್ಲಿ ನನ್ನ ಉಸಿರಿರುವವರೆಗೂ ನಾನು ಕಲಾಕೃತಿಗಳನ್ನು ರಚನೆ ಮಾಡುವುದು ಬಿಡುವುದಿಲ್ಲ ಎಂದು ಹೇಳುತ್ತಾರೆ. ಕಲೆಗೆ ನನ್ನ ಜೀವನ ಮುಡುಪಾಗಿಡುತ್ತೇನೆ ಎನ್ನುತ್ತಾರೆ.

ಇವರು ಮೂಲತಃ ತಮಿಳುನಾಡಿನ ಪಟ್ಟುಕೊತ್ತಾಯ್‌ಯಿಂದ ಬಂದವರಾಗಿದ್ದು, ಅವರ ತಂದೆಯು ಉತ್ತಮ ಹಾಡುಗಾರರಾಗಿದ್ದರು. ಅಂತಹ ಕಲಾವಿದರ ಕುಟುಂಬದಿಂದ ಬಂದವರಾಗಿದ್ದ ಕೆ. ಎನ್. ರಾಮಚಂದ್ರನ್ ಅವರು ಚಿತ್ರಕಲೆಯು ಇವರನ್ನು ಕೈ ಬೀಸಿ ಕರೆಯಿತು. ಇವರು ಈ ಕ್ಷೇತ್ರಗಳಲ್ಲಿ ಒಂದೊಂದು ಹಂತದಲ್ಲಿ ಚಿತ್ರಕಲೆಗೆ ಆಸಕ್ತಿ ಇಷ್ಟಪಟ್ಟು ಶ್ರಮವಹಿಸಿ ಕಲಿತು ಈಗ ನಾಡಿನ ಕಲಾವಿದರುಗಳ ಹೆಸರುಗಳಲ್ಲಿ ಇವರ ಹೆಸರು ಪ್ರಮುಖವಾಗಿ ಕಂಡುಬರುತ್ತದೆ. ಇವರು ಇಷ್ಟು ದೊಡ್ಡ ಮಟ್ಟದಲ್ಲಿ ಹೆಸರು

ಮಾಡಲು ಕಾರಣ ಇವರು ಬೆಳೆದು ಬಂದಂತಹ ವಾತಾವರಣ, ಪರಿಸರ, ಕಡಲತೀರದ ದೃಶ್ಯಾವಳಿಗಳು, ದಿನನಿತ್ಯ ನೋಡುವಂತಹ ಸನ್ನಿವೇಶಗಳನ್ನು ದೇವಾಲಯದ ಗೋಡೆಗಳ ಮೇಲೆ ಇದ್ದಿನಿಲಿಂದ ಗೀಚಿ ಗೀಚಿ ಚಿತ್ರ ರಚನೆಯನ್ನು ಮಾಡುತ್ತಿದ್ದರು. ಅದನ್ನು ಗ್ರಾಮದ ಜನರು ಬೆನ್ನು ತಟ್ಟಿ ಪ್ರೋತ್ಸಾಹಿಸಿದ್ದಕ್ಕೆ ಕಲಾವಿದನಾಗಲು ಪ್ರಮುಖ ಕಾರಣವಾಗಿತ್ತು. ಇವರು ರಚಿಸಿದಂತಹ ಕಲಾಕೃತಿಗಳು ದೇಶ ವಿದೇಶಗಳಲ್ಲಿ ಇವರ ಚಿತ್ರಗಳು ಖ್ಯಾತಿವೆತ್ತಿ. ಮನೆಗೋಡೆಗಳ ಅಲಂಕೃತಗೊಂಡಿವೆ ಎಂದು ಹೇಳಬಹುದು.

ಕೆ. ಎನ್. ರಾಮಚಂದ್ರನ್ ಅವರು ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಕಲಾವಿದರ ಜೊತೆಗೆ ಕಲಾ ಪ್ರದರ್ಶನಗಳು ಮಾಡಿದ್ದು ಗಮನಿಸಬಹುದು. ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ ಕರ್ನಾಟಕ ಲಲಿತಕಲಾ ಅಕಾಡಮಿಯ ಉನ್ನತ ಕಲಾವಿದ ಪ್ರಶಸ್ತಿ ಪಡೆದಿದ್ದಾರೆ. ದೆಹಲಿಯಲ್ಲಿ ನೆಹರು ಸೆಂಟರ್‌ನಲ್ಲಿ ಪ್ರಶಸ್ತಿ, ತಮಿಳುನಾಡಿನ ಸಿ. ಎಂ. ಕೆ. ಎಂ. ರಂಗಸ್ವಾಮಿಯವರಿಂದ ಪಾಂಡಿಚರಿಯಲ್ಲಿ ಓಮ್ಮೆ ಮಹಾಮಣಿ, ಎಂಬ ಪ್ರಶಸ್ತಿ ಬಂದಿತಲಿಂಗಂ ತಿರುವಲ್ಲೂರು ನರ್ಸನಿ ಮಂದ್ರ, ಮೀಸ್ಟೊ ಇಳಿಯರಾಜ ಕಲಾ ಮಂದಿರಂ ಹಾಗೂ ಕವಿಗಳು, ಲೇಖಕರು, ಚಿತ್ರಕಾರರು ಸೇಲಂ 1997, ಜಿ. ಎಸ್. ಶೆಣೈ ಅವಾರ್ಡ್, ಸಂಯೋಜಿತ 2001, ವಿದ್ಯಾಸಾಗರ್ ಕಾಲೇಜು, ಬೆಂಗಳೂರು. ಹಾಸನ ಆರ್ಟಿಸ್ಟ್ ಪೊರಂ, ಉಡುಪಿ 2007. ಆರ್ಟಿಸ್ಟ್ ಹಾಗೂ ರೈಟರ್ಸ್ ಸಾಂಸ್ಕೃತಿಕ ವೇದಿಕೆ ಹಾಸನ. ಜೆ.ಸಿ.ಡಿ. ಹೊಸೂರು ಇಂಡಿಯಾ, ಭತ್ರಿ ಉಲಕಿಮ ಪರವಾಯ ಪೊಟ್ಟುಕೊತ್ತಾಯ್. ಕಲ್ಯಾಣ ಸುಂದರಂ, ಫೈನ್ ಆರ್ಟ್ ಸ್ಕೂಲ್ ಮೈಸೂರು, ವೈಜಯಂತಿ ಆರ್ಟ್ ಸ್ಕೂಲ್ ಮೈಸೂರು, ಕೆ. ಕೆ. ಹೆಬ್ಬಾರ್ ಮೆಮೊರಿಯಲ್ ಆರ್ಟಿಸ್ಟ್ ಕ್ಯಾಂಪ ಪ್ರಶಸ್ತಿಗಳ ಜೊತೆಗೆ ಹಲವಾರು ಕಲಾ ಪ್ರಾತ್ಯಕ್ಷತೆಗಳನ್ನು ನಾಡಿನಲ್ಲದೆ ಹೊರ ನಾಡಿನಲ್ಲಿ ಕೊಟ್ಟಿದ್ದಾರೆ. ಮತ್ತು ಹಲವು ಬಿರುದುಗಳು ಕಲಾಶ್ರೀ, ಸೇಲಂನಲ್ಲಿ ಕಲಾತಿಲಕ, ಬೆಂಗಳೂರಿನಲ್ಲಿ ಕೆಂಪೇಗೌಡ ಪ್ರಶಸ್ತಿ ಪುರಸ್ಕಾರಗಳು ವರಿಗೆ ದೊರೆತು ಸುಮಾರು 26 ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನಗಳು ಮಾಡಿರುವುದು ಕಂಡುಬರುವುದು. ಕೆ. ಎನ್. ರಾಮಚಂದ್ರನ್ ಅವರ ಮೂಲಕ ಕಲಾಕೃತಿಗಳಲ್ಲಿ ನಮ್ಮ ನಾಡಿನ ಸಂಸ್ಕೃತಿಯನ್ನು ಎತ್ತಿ ಹಿಡಿಯುವಂತಹ ಕೆಲಸ ಮಾಡಿದ್ದಾರೆ. ಇಂತಹ ವಿವರಗಳು ಹೀಗೆ ದಾಖಲೆಗೊಂಡಿವೆ ಎಂಬುದನ್ನು ಸಹ ಪ್ರಸ್ತುತ ಅಧ್ಯಾಯನದ ಮೂಲಕ ಕಂಡುಕೊಳ್ಳಲಾಗುವುದು. ಇಂದು ವಿವಿಧ ಕ್ಷೇತ್ರಗಳಲ್ಲಿ ವ್ಯಾಪಕವಾದ ಸಂಶೋದನೆ ನಡೆಯುತ್ತಿದ್ದರೂ ಚಿತ್ರಕಲಾ ಕ್ಷೇತ್ರದಲ್ಲಿ ಇನ್ನೂ ಕಡಿಮೆ. ಆದರೆ ಈ ಕ್ಷೇತ್ರದಲ್ಲಿ ಕೊಡುಗೆ ಮಾತ್ರ ಅಪಾರವಾದದ್ದು ಎಂಬುದರಲ್ಲಿ ಎರಡೂ ಮಾತಿಲ್ಲ. ಹಲವಾರು ಕಲಾವಿದರು ಉನ್ನತ ಶಿಕ್ಷಣ ಕೊರತೆಯಿಂದಾಗಿ ಈ ಕಲಾಕ್ಷೇತ್ರದ ಅಧ್ಯಾಯನ ಕುಂಠಿತಗೊಳ್ಳುತ್ತಾ ಬಂದಿರುವುದನ್ನು ಗಮನಿಸಬಹುದು.

ಪ್ರಶಸ್ತಿ ಪುರಸ್ಕಾರಗಳು

1. ಬೆಂಗಳೂರು ವಿಶ್ವವಿದ್ಯಾಲಯದ ಪ್ರಶಸ್ತಿ – 1980
2. ಒವಿಯಾ ತಿಲಕಂ – ಸೇಲಂ – 1980
3. ಹಾಸನ ಆರ್ಟ ಫಾರ್ಮ್ – 2002
4. ಜಿ. ಎಸ್. ಶಣೈ ಪ್ರಶಸ್ತಿ –2002
5. ಕರ್ನಾಟಕ ಲಲಿತಕಲಾ ಅಕಾಡೆಮಿ ಗೌರವ ಪ್ರಶಸ್ತಿ –2008
6. ಜೀವಮಾನ ಸಾಧನೆ ಪ್ರಶಸ್ತಿ ಹಾಸನ –2008
7. ಒವಿಯಾ ಮಹಾಮನಿ ಪ್ರಶಸ್ತಿ ಪಾಂಡಿಚರಿ – 2009
8. ಕರ್ನಾಟಕ ಚಿತ್ರಕಲಾ ಪರಿಷತ್ತು –2009
9. ಒವಿಯಾ ಕಲೈವಿತಗರ್ ಚನ್ನೈ ಪ್ರಶಸ್ತಿ – 2010
10. ಡಾ. ಸುಶೀಲಾರಾಣಿ ಪಾಟೀಲ ಟ್ರಸ್ಟ್ ಮುಂಬಯಿ – 2011
11. ಕಲಾಶ್ರೀ ಪ್ರಶಸ್ತಿ ಶಿವಾನಂದ ಆಶ್ರಮ ಬೆಂಗಳೂರು – 2011
12. ಕೆಂಪೇಗೌಡ ಪ್ರಶಸ್ತಿ – 2012
13. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ – 2012
14. ರವೀಂದ್ರ ಕಲಾನಿಕೇತನ ಗೌರವಾನ್ವಿತ ಪ್ರಶಸ್ತಿ ತುಮಕೂರು – 2012
15. ಪಟ್ಟುಕೊತ್ತಾಯ್ ಕಲ್ಯಾಣ ಸುಂದರಂ ಪ್ರಶಸ್ತಿ –2013

ಕಲಾ ಪ್ರಾತ್ಯಕ್ಷಿಕೆ

1. ಚಿತ್ರ ಪರಿಷೆ ಕರ್ನಾಟಕ ಲಲಿತಕಲಾ ಅಕಾಡೆಮಿ
2. ಕೆನ್ ಸ್ಕೂಲ್ ಆಫ್ ಆರ್ಟ
3. ಚಿತ್ರಕಲಾ ಪರಿಷತ್ತು ಬೆಂಗಳೂರು
4. ರವಿಂದ್ರ ಕಲಾನಿಕೇತನ ತುಮಕೂರು
5. ಕಲಾನಿಕೇತನ ಮೈಸೂರು
6. ವೈಜಯಂತಿ ಸ್ಕೂಲ್ ಆಫ್ ಆರ್ಟ ಮೈಸೂರು
7. ಚಿತ್ರಕಲಾ ಫೌಂಡೇಶನ ಹಾಸನ
8. ಲಲಿತಕಲಾ ಕೇಂದ್ರ ಕೊಯಿಮತ್ತೂರು
9. ದೆಹಲಿ ಕರ್ನಾಟಕ ಸಂಘ
10. ಶಾಂತನಿಕೇತನ ಚಿತ್ರಕಲಾ ಮಹಾವಿದ್ಯಾಲಯ ಚಿಕ್ಕಮಂಗಳೂರು
11. ಐಡಿಯಲ್ ಫೈನ್ ಆರ್ಟ ಕಾಲೇಜು ಗುಲಬುರ್ಗಾ
12. ಶರಣಬಸವೇಶ್ವರ ಮಹಾವಿದ್ಯಾಲಯ ಗುಲಬುರ್ಗಾ ಇತರ ದಕ್ಷಿಣ ಭಾರತೀಯ ಕಲಾ ಶಿಬಿರಗಳಲ್ಲಿ ಕೆ. ಎನ್. ರಾಮಚಂದ್ರನ್ ಅವರು ಬಾಗವಹಿಸಿದ್ದಾರೆ. ಅಲ್ಲದೆ ಅವರ ಕಲಾಕೃತಿಗಳು ಹಲವು ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಜಾಗತಿಕ ಕಲಾಕೇಂದ್ರಗಳಲ್ಲಿ

ಸಂಗ್ರಹಿಸಲಾಗಿದೆ. ಭಾರತದಲ್ಲಿ ನಡೆದಿರುವ ಪ್ರಮುಖ ಚಿತ್ರಕಲಾ ಚಟುವಟಿಕೆಗಳಲ್ಲಿ ಪಾಲ್ಗೊಂಡಿದ್ದಾರೆ ಎಂದು ಹೇಳಬಹುದು.

ಪ್ರಶಸ್ತಿ ಪತ್ರಗಳು


ಪ್ರಶಸ್ತಿ ಪತ್ರ


Puduvai Oviyakalai Panpattu Narsevai Iyakkam
4th ANNUAL DAY - 2009
OVIYA MAMANI AWARD
To
Thiru K.N. RAMACHANDRAN Artist
Thiru N. RANGASAMY


ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು
ಪ್ರಮಾಣ ಪತ್ರ
ರಾಜ್ಯ ಪ್ರಶಸ್ತಿ ಪ್ರದಾನ ಸಮಾರಂಭ - ೨೦೧೨
ಶ್ರೀ ಕೆ.ಎನ್. ರಾಮಚಂದ್ರನ್

ಪ್ರಶಸ್ತಿ ಹಾಗೂ ಪುರಸ್ಕಾರಗಳು









ಕಲಾವಿದರು ಪ್ರಾತ್ಯಕ್ಷತೆ ನೀಡುತ್ತಿರುವುದು







ಕಲಾವಿದರ ಕಲಾಕೃತಿಗಳ ಪ್ರದರ್ಶನ







ಅಧ್ಯಾಯ – 6

ಸಮಾರೋಪ

ಅಧ್ಯಾಯ : 6

ಸಮಾರೋಪ

ಕಲೆ ಮಾನವನ ಬದುಕಿನಲ್ಲಿ ಆದಿಮಾನವನಿಂದ ಹಿಡಿದು ಆಧುನಿಕ ಮಾನವನವರೆಗೆ ಹಾಸುಹೊಕ್ಕಾಗಿ ನಿರಂತರವಾಗಿ ಬೆಳೆಯುತ್ತಾ ಬಂದಿದೆ. ಕಲೆ ಸಂಸ್ಕೃತಿಯ ಅಂಗ. ಸಮುದಾಯದ ಜನಜೀವನಗಳು ಆ ನಾಡಿನ ಸಂಸ್ಕೃತಿಯನ್ನು ಎತ್ತಿ ಹಿಡಿಯುತ್ತವೆ. ಹೀಗೆ ಲಲಿತಕಲೆಗಳಿಲ್ಲದೇ ದೇಶವಿಲ್ಲ. ಒಂದು ದೇಶದ ಬೆಳವಣಿಗೆಯ ಹಿಂದೆ ಆ ದೇಶದ ಕಲೆ ಸಾಹಿತ್ಯ ಹಾಗೂ ಸಂಸ್ಕೃತಿಯ ಬೇರುಗಳ ತಳಹದಿಯನ್ನು ಅವಲಂಬಿಸಿರುತ್ತದೆ ಎಂಬುದು ಸತ್ಯ ಸಂಗತಿ. ನಮ್ಮ ದೇಶದಲ್ಲಿ ಅನಾಧಿಕಾಲದಿಂದಲೂ ನಮ್ಮ ಈ ನಾಡಿಗೆ ಅಮೂಲ್ಯವಾದ ಕೊಡುಗೆಗಳನ್ನು ನೀಡಿದ್ದಾರೆ. ಅವು ಸಾವಿರ ವರ್ಷಗಳ ಇತಿಹಾಸವನ್ನು ಸಾರಿ ಸಾರಿ ಹೇಳುತ್ತವೆ. ಮಾನವನ ಸಂಸ್ಕೃತಿಯಲ್ಲಿ ಅಗ್ರಸ್ಥಾನವಿದೆ. ಅದರಲ್ಲಿ ಕಲಾವಿದನ ಪಾತ್ರ ನಿರ್ಲಕ್ಷಿಸುವಂತಿಲ್ಲ. ಈ ನಿಟ್ಟಿನಲ್ಲಿ ಬದುಕನ್ನೇ ಕಲೆ ಸಂಸ್ಕೃತಿಗಾಗಿ ಮುಡುಪಾಗಿಟ್ಟು ಬೆಳಸಿಕೊಂಡು ಬಂದವರು. ಕೆ. ಎನ್. ರಾಮಚಂದ್ರನ್ ಅವರು. ಅದಲ್ಲದೆ ಅವರು ಹುಟ್ಟಿ ಬೆಳೆದು ಬಂದ ಪರಿಸರ ಪ್ರಜ್ಞೆಯ ಮೂಲಕ ಸಾಮಾಜಿಕ ಬದಲಾವಣೆಯ ಕಡೆಗೆ ಹೆಜ್ಜೆ ಹಾಕಿದ್ದಾರೆ. ಅಂದರೇ ನಮ್ಮ ನಾಡು ಸಂಸ್ಕೃತಿಯನ್ನು ಬಿಂಬಿಸುವಂತಹ ಕಲಾಕೃತಿಗಳ ಮೂಲಕ ಸಾಂಸ್ಕೃತಿಕ ಸಾಮರಸ್ಯವನ್ನು ಸಾರಿ ಹೇಳುವಂತಹ ಪ್ರಯತ್ನ ಮಾಡಿದ್ದಾರೆ

ಮಾಡುತ್ತಲೂ ಇದ್ದಾರೆ. ಈ ಅಧ್ಯಾಯನದ ಮುಖೇನವಾಗಿ ಕಲಾವಿದರಾಗಿ ಅವರು ಮಾಡಿದ ಜೀವನ ಸಾಧನೆಯನ್ನು ಪರಿಚಯಿಸುವ ಪ್ರಯತ್ನವನ್ನಿಲ್ಲಿ ಮಾಡಲಾಗಿದೆ. ನಮ್ಮ ಭವ್ಯ ಪರಂಪರೆ ಸಂಸ್ಕೃತಿಯು ಅವರ ದೃಷ್ಟಿಕೋನದಲ್ಲಿ ಹೀಗೆ ವಿಭಿನ್ನ ನೆಲೆಗಳಲ್ಲಿ ಬಿಂಬಿಸಿದ್ದಾರೆ. ಅವರ ಆಶಯ ಆ ಮೂಲಕ ಅವರು ರಚಿಸಿದ ಕಲಾಕೃತಿಗಳ ಮುಖೇನ ನಮ್ಮ ತನವನ್ನು ಉಳಿಸುವ ಪ್ರಯತ್ನ ಮಾಡಿರುವರು ಎಂಬಿತ್ಯಾದಿ ವಸ್ತು ವಿಷಯಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲು ಹೊರಟಾಗ ನನಗೆ ಪ್ರಾಥಮಿಕ ಆಕಾರಗಳು, ಅವರು ರಚಿಸಿದ ಕಲಾಕೃತಿಗಳು ಪ್ರಮುಖವಾಗುತ್ತದೆ. ಅವು ಕಲಾವಿದರನ್ನಲ್ಲದೇ, ಕಲಾವೀಕ್ಷಕರು, ಕಲಾರಾಧಕರ ಕಲಾಕೃತಿಗಳು ಮನಸ್ಸನ್ನು ಹೇಗೆ ಸಂತೋಷ ಪಡಿಸುತ್ತದೆ. ಅವರ ವಿವಿಧ ಮಾಧ್ಯಮಗಳಲ್ಲಿ ಹೇಗೆ ನೆಲೆಗೊಂಡಿವೆ. ಅವರು ರಚಿಸಿದ ರೇಖಾ ಚಿತ್ರ, ಭಾವಚಿತ್ರ, ಸಂಯೋಜನ ಚಿತ್ರ ಮುಂತಾದ ಭಿತ್ತಿ ನೆಲೆಯ ಕಲಾಕೃತಿಗಳನ್ನು ವಿಮರ್ಶಾತ್ಮಕವಾಗಿ ವಿವೇಚಿಸುವ ಮೂಲಕ ಮುನ್ನೆಲೆಗೆ ತರುವಂತಹ ಪ್ರಯತ್ನ ಈ ಪ್ರಬಂಧದ ಆಶಯ.

ಕೆ. ಎನ್. ರಾಮಚಂದ್ರನ್ ಅವರು ತಮ್ಮ ಚಿತ್ರಕಲಾ ಬದುಕಿನಲ್ಲಿ ಎಲ್ಲ ಮಾಧ್ಯಮಗಳಲ್ಲೂ ಚಿತ್ರಗಳನ್ನು ರಚಿಸುವ ಮೂಲಕ ತಮ್ಮ ರಚನಾ ಶಕ್ತಿಯನ್ನು ಪ್ರದರ್ಶಿಸಿದ್ದಾರೆ. ಇವರು ಪರಿಸರದಲ್ಲಿರುವ ನೆಲ, ಜಲ, ಗಿಡ, ಮರ, ಪ್ರಾಣಿ ಪಕ್ಷಿಗಳನ್ನು ಗಾಢವಾಗಿ ಪ್ರೀತಿಸುತ್ತಾ ಅದರ ಬಗ್ಗೆ ತಮ್ಮ ಅಂತರಾಳದಲ್ಲಿರುವ ತುಮುಲಗಳನ್ನು ಕಲಾಕೃತಿಗಳ ಮುಖೇನ ಬಿಂಬಿಸುತ್ತಾ ತಮ್ಮ ವೃತ್ತಿ ಜೀವನದಲ್ಲಿ ಸಾರ್ಥಕತೆಯನ್ನು ಅನುಭವಿಸಿದ್ದಾರೆ. ಅವರ ಕಲಾಕೃತಿಗಳಲ್ಲಿ ಪರಿಸರ ಸಮುದ್ರದಲ್ಲಿನ ಬೋಟಗಳು ದಿನ ನಿತ್ಯ ಜೀವನದಲ್ಲಿ ನೋಡುವಂತಹ ವಿಸ್ಮಯವಾದ ದೃಶ್ಯಗಳು ನಮ್ಮ ಸಂಸ್ಕತಿಯನ್ನು ಬಿಂಬಿಸುವ ಸ್ತ್ರೀಯರ ಚಿತ್ರಗಳು ಅವರ ಆಪ್ತ ಮಾಧ್ಯಮದಲ್ಲಿ ರಚಿಸಿದ ಕಲಾಕೃತಿಗಳಲ್ಲಿ ನೈಜ ಸೌಂದರ್ಯವನ್ನು ಕಾಣಿಸುತ್ತಾರೆ. ಸೌಂದರ್ಯವನ್ನು ತುಂಬುವ ಶಕ್ತಿ ಚಿತ್ರ ಕಲಾವಿದನಿಗೆ ಸಾಧ್ಯ. ಇಂಥ ನಿರ್ಮಲ ಮನಸ್ಸಿನವರು ನಾಡಿನ ಅಮೂಲ್ಯವಾದ ಆಸ್ತಿ, ಅವರ ಚಿತ್ರಕಲೆಯ ಆಳವನ್ನು ವ್ಯಾಪ್ತಿಯನ್ನು ತಿಳಿಯಬೇಕಾದರೆ ನಾವು ಲಲಿತಕಲೆ ಮತ್ತು ಕಲೆಗಾರರ ಇತಿಹಾಸವನ್ನು ಅಧ್ಯಾಯನ ಮಾಡುತ್ತಾ ಕೆ. ಎನ್. ರಾಮಚಂದ್ರನ್ ಅವರೊಂದಿಗೆ ಇತರ ಕಲಾವಿದರ ಬದುಕು ಮತ್ತು ಕಲಾ ಜೀವನವನ್ನು ತೌಲನಿಕವಾಗಿ ನೋಡುವ ದೃಷ್ಠಿಕೋನವನ್ನು ಇಟ್ಟುಕೊಳ್ಳಲಾಗಿದೆ. ಆ ಮೂಲಕ ಅದರ ಕಲಾ ಜೀವನವನ್ನು ನೋಡಲಾಗಿದೆ.

ನಮ್ಮ ಪರಂಪರೆ, ಸಂಸ್ಕೃತಿ, ಕಲೆ, ಸಾಹಿತ್ಯ ಮುಂತಾದವು ಇಂದು ನಮ್ಮ ತನವನ್ನು ಅನ್ಯತೆಗಳು ಅವುಗಳ ದೃಷ್ಠಿಯಿಂದ ಲಲಿತಕಲೆಗಳ ಉಳಿವಿಗಾಗಿ ಸಾಕಷ್ಟು ಪ್ರಯತ್ನಗಳು ನಡೆಯುತ್ತಲೆ ಬಂದಿವೆ, ಬರುತ್ತಲಿವೆ. ಅದೇ ರೀತಿಯಲ್ಲಿ ಕಲೆಗಳಲ್ಲಿ ವಸ್ತು ವಿಷಯಗಳ ಕುರಿತಾಗಿಯೂ ನಡೆಯಬೇಕಾದ ಜರೂರತ್ತು ಹೆಚ್ಚಾಗಿದೆ. ಏಕೆಂದರೆ ಇತರ ಶಾಸ್ತ್ರಗಳನ್ನು ಗಮನಿಸಿದಾಗ ನಮಗೆ ಸಿಗುವ ಅಂಕೆ, ಅಂಶಗಳಲ್ಲಿ ಕಲೆಯ ಕುರಿತಾಗಿ ಸಿಗುವ ಆಕಾರಗಳು ಕೇವಲ ಬೆರಳೆಣಿಕೆಯಷ್ಟು ಮಾತ್ರ.

ಈ ಸದುದ್ದೇಶಗಳನ್ನು ಮನದಟ್ಟು ಮಾಡಿಕೊಂಡು ಚಿತ್ರಕಲೆಯಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿದ ಮಹನೀಯರು ಸಾಕಷ್ಟು ಮಂದಿ. ಅವರ ಕುರಿತಾಗಿ ಅರ ಕಲಾಕೃತಿಗಳ ಕುರಿತಾಗಿ ಬಂದಿರುವ ಕೆಲಸಗಳು ತುಂಬಾ ಕಡಿಮೆ. ಇಂತಹ ಸಂದರ್ಭದಲ್ಲಿ ಇತ್ತೀಚಿನ ದಿನಮಾನಗಳಲ್ಲಿ ಸಂಶೋದನಾ ಕೃತಿಗಳು ಹೊರಬರುತ್ತಲಿವೆ. ನಾನು ನನ್ನ ಅಧ್ಯಾಯನಕ್ಕಾಗಿ ತನ್ನ ಜೀವಿತಾವಧಿಯನ್ನು ಕಲಾ ಪ್ರಪಂಚಕ್ಕೆ

ಮುಡುಪಾಗಿಟ್ಟು ಕೆ. ಎನ್. ರಾಮಚಂದ್ರನ್ ಅವರನ್ನು ಅಧ್ಯಯನಕ್ಕೆ ಒಳಪಡಿಸಿ ಅವರ ಕಲಾಕೃತಿಗಳನ್ನು ವಿಭಾಗಗಳಾಗಿ ವಿಂಗಡಿಸಿಕೊಂಡು ಅವುಗಳ ಆಂತರ್ಯದ ಸಾರ, ಅವುಗಳು ಸಮಾಜಕ್ಕೆ ಹೇಗೆ ಮುಖಾಮುಖಿಯಾಗಿವೆ ಎಂಬುದನ್ನು ಕುರಿತಂತೆ ಚರ್ಚಿಸಲಾಗಿದೆ.

- ಮೊದಲನೆಯ ಅಧ್ಯಾಯದಲ್ಲಿ ಅಧ್ಯಾಯನದ ಉದ್ದೇಶ, ಸ್ವರೂಪ, ವ್ಯಾಪ್ತಿಗಳನ್ನು ಹೇಳಲಾಗಿದೆ.

- ಎರಡನೆಯ ಅಧ್ಯಾಯದಲ್ಲಿ ಚಿತ್ರಕಲಾ ಪ್ರಪಂಚಕ್ಕೆ ಮುಡುಪಾಗಿಟ್ಟುಕೊಂಡ ಕಲಾವಿದ ಕೆ. ಎನ್. ರಾಮಚಂದ್ರನ್ ಅವರ ಜೀವನ ಮತ್ತು ಸಾಂಸ್ಕೃತಿಕ ಪರಿಸರದಲ್ಲಿನ ಕಡಲತೀರದ ದೃಶ್ಯಾವಳಿಗಳು, ಅವರ ಜನನ, ಬಾಲ್ಯ, ಪ್ರಾಥಮಿಕ ಶಿಕ್ಷಣದಲ್ಲಿ ಕಲಿತ ಆಗಿನ ಕಾಲದಲ್ಲಿನ ಗುರುಕುಲ ಪದ್ಧತಿಯಲ್ಲಿ ಕಲಿತಿದ್ದು, ಅವರ ಗುರುವೃಂದ, ಅವರೊಂದಿಗಿದ್ದ ಗೆಳೆಯರು, ಅವರ ತಂದೆ ತಾಯಿ ಜೊತೆಯಲ್ಲಿ ಬೆಳೆದು ಬಂದ ಕುಟುಂಬದ ಹಿನ್ನೆಲೆ, ಕಲೆಗೆ ಮನೆಯವರ ಪ್ರೋತ್ಸಾಹ ಅಲ್ಲದೇ ಇವರು ಕಲಾವಿದರಾಗಿ ರೂಪುಗೊಳ್ಳುವಲ್ಲಿ ಅದೇ ಗ್ರಾಮದ ಜನರ ಪ್ರೋತ್ಸಾಹ, ಶಿಕ್ಷಣಕ್ಕೆ ಬಂದಾಗ ಅಲ್ಲಿಯ ಗುರುಗಳಾದ ಧರ್ಮಲಿಂಗಂ ಪಿಳ್ಳೆಯವರ ಚಿತ್ರಕಲೆ, ಕಲಿಕಾ ಬೋಧನಾ ವಿಧಾನಗಳು, ಶಾಲೆ ಮುಗಿದ ನಂತರ ಗುರುಗಳ ಮನೆಯಲ್ಲಿ ಹೆಚ್ಚಿನದಾಗಿ ಅಭ್ಯಾಸ ಮಾಡಿದ್ದು, ರಚನಾ ತಂತ್ರದ ಎಲ್ಲಾ ಮಾಧ್ಯಮಗಳಲ್ಲಿ ಚಿತ್ರ ಬರೆಯುವುದನ್ನು ಕಲಿತಿದ್ದು, ನಂತರದ ದಿನಗಳಲ್ಲಿ ಮದ್ರಾಸನ ಫೈನ್ ಆರ್ಟ್ ಕಾಲೇಜಿನಲ್ಲಿ ಕೇವಲ ಒಂದೇ ವರ್ಷ ಕಲಾ ಶಿಕ್ಷಣ ಪಡೆದಿದ್ದು, ಅವರಿಗೆ ಅಣ್ಣಾ ಅವರ ಮಾರ್ಗದರ್ಶನ ಮತ್ತು ಅವರು ಸಹಾಯ ಮಾಡುತ್ತಿದ್ದರು. ಮುಂದಿನ ಅಭ್ಯಾಸ ಮಾಡಲು ಕಷ್ಟವಾದಾಗ ಅಷ್ಟಕ್ಕೆ ನಿಲ್ಲಿಸಿದರು. ಅವರು ಸಿನಿಮಾ ರಂಗದಲ್ಲಿ ಪೋಸ್ಟರ್ ಬರೆಯುವುದನ್ನು ಪ್ರಾರಂಭಿಸಿದರು. ನಂತರ ವೃತ್ತಿ ಜೀವನದಲ್ಲಿ ಜಯಲಕ್ಷ್ಮೀಯವರನ್ನು ಮದುವೆಯಾದರು. ನಂತರದಲ್ಲಿ ಬೆಂಗಳೂರಿಗೆ ಬಂದು ವೃತ್ತಿ ಜೀವನವನ್ನು ಪ್ರಾರಂಭ ಮಾಡಿದ್ದು, ವೃತ್ತಿ ಬದುಕಿನಲ್ಲಿ ವಿಶ್ಲೇಷಿಸಲಾಗಿದೆ. ಮಿತ್ರ ಬಳಗದಲ್ಲಿ ಸಾಕಷ್ಟು ಮಂದಿ ಇದ್ದಾರೆ. ಅದರಲ್ಲಿ ಅವರ ಊರಿನವರಾದ ವಾಯ್. ಎನ್. ರಾಮಚಂದ್ರನ್ ಅವರು ಬಾಲ್ಯದಲ್ಲಿ ಮಿತ್ರ ರಾಗಿದ್ದು ಚಿತ್ರಕಲೆಗೆ ಬೇಕಾದ ಬಣ್ಣ ತೆಗೆದುಕೊಳ್ಳಲು ಹಣವನ್ನು ನೀಡುತ್ತಿದ್ದರ. ಅವರಿಂದ ನಾನು ಚಿತ್ರಕಲೆಗೆ ಬರಲು ಕಾರಣ ಎಂದು ಹೇಳುತ್ತಾರೆ. ನಂತರ ಬೆಂಗಳೂರಿನಲ್ಲಿ ಲಿಂಗದೇವರು, ಜೆ. ಎಸ್. ಮಣಿ, ಎಸ್. ಜಿ. ವಾಸುದೇವ. ಆರ್. ಎಂ. ಹಡಪದ ಇನ್ನು ಮುಂತಾದ ಮಿತ್ರ ಬಳಗವನ್ನು ಈ ಅಧ್ಯಾಯನದಲ್ಲಿ ಹೇಳಲಾಗಿದೆ.

- ಅಧ್ಯಾಯ ಮೂರರಲ್ಲಿ ಕಲಾವಿದ ಕೆ. ಎನ್. ರಾಮಚಂದ್ರನ್ ಅವರ ಕಲಾಕೃತಿಗಳನ್ನು ಅಧ್ಯಾಯನ ಮಾಡಲಾಗಿದೆ. ಇದರಲ್ಲಿ ಪ್ರಮುಖವಾಗಿ ರೇಖಾ ಚಿತ್ರಗಳು, ಭಾವಚಿತ್ರಗಳು, ಸಂಯೋಜನಾ ಚಿತ್ರಗಳು ಎಂದು ವಿಂಗಡಿಸಲಾಗಿ ಅದರಲ್ಲಿ ನಾಡಿನ ಸಂಸ್ಕೃತಿಯನ್ನು ಸಾರುವಂತಹ ಸ್ತ್ರೀಯರ ಚಿತ್ರಗಳು, ದೈನಂದಿನ ಜೀವನದಲ್ಲಿ ನೋಡುವಂತಹ ದೃಶ್ಯಗಳು, ಮಾರುಕಟ್ಟೆ, ಕಡಲತೀರದ ದೃಶ್ಯಗಳು, ಅಧ್ಯಾಯನದಲ್ಲಿ ಚರ್ಚಿಸಲಾಗಿದೆ. ಜೊತೆಗೆ ಸಿನಿಮಾ ರಂಗದಲ್ಲಿ ರಚಿಸಿದಂತಹ ಪೋಸ್ಟರ್‌ಗಳ ಬಗ್ಗೆ ವಿಸ್ತರಿಸಲಾಗಿದೆ. ರೇಖೆ, ವರ್ಣಗಳಲ್ಲಿ ಅವರ ಭಾವಾಭಿವ್ಯಕ್ತತೆ, ಸನ್ನಿವೇಶದ ಪರಿಣಾಮ, ಲಯ, ಆನಂದ, ಅನುಕಂಪ, ಕನಸು, ಕಾಲ್ಪನಿಕ ಭಾವಸಂಚಾರ ಜೀವನೋಲ್ಲಾಸ, ಮುಗ್ಧತೆ ಇಂತವೆಲ್ಲದರ ಭಾವಗಳು ಸಹಜವೆನಿಸುವ ರೀತಿಯಲ್ಲಿ ಅಭಿವ್ಯಕ್ತಿಸಿರುವುದರ ಬಗ್ಗೆ ಅಧ್ಯಾಯನ ಮಾಡಲಾಗಿದೆ.

- ಅಧ್ಯಾಯ ನಾಲ್ಕರಲ್ಲಿ ಕಲಾವಿದ ಕೆ. ಎನ್. ರಾಮಚಂದ್ರನ್ ಅವರ ವಿಶಿಷ್ಟ ರಚನಾ ವಿಧಾನಗಳಲ್ಲಿ ಇರುವಂತಹ ಕಲಾಕೃತಿಗಳನ್ನು ರಚಿಸಲು ಅವರು ಹುಟ್ಟಿ ಬೆಳೆದಂತಹ ತಮಿಳುನಾಡಿನ ಪಟ್ಟುಕೊತ್ತಾಯ್ ಎಂಬ ಗ್ರಾಮದ ಪರಿಸರದಲ್ಲಿಯ ದೃಶ್ಯಗಳುಅವರಿಗೆ ಪ್ರಭಾವಗೊಂಡು ಕಲಾಕೃತಿಗಳನ್ನು ರಚಿಸಿದ್ದಾರೆ.

ಕುಟುಂಬದ ತಂದೆ ತಾಯಿಯ ಮತ್ತು ಗ್ರಾಮಸ್ಥರು ಗುರುಗಳು ಇವರ ಕಲೆಯನ್ನೆ ಗುರುತಿಸಿ ಪ್ರೇರಣೆಯನ್ನು ಕೊಟ್ಟಿದ್ದು ಇಲ್ಲಿ ವಿಂಗಡಿಸಲಾಗಿದೆ ಹಾಗೂ ಅವರ ಕಲಾಕೃತಿಗಳಲ್ಲಿ ಹೊಸ ಬಗೆಯ ತಂತ್ರಗಾರಿಕೆಯನ್ನು ಕಾಣಬಹುದಾಗಿದೆ. ಕಪ್ಪು ಬಿಳುಪಿನ ಕಟೌಟಗಳಲ್ಲಿ ಹತ್ತಿರದಿಂದ ನೋಡಿದರೆ ನೇರಳೆ ಮಿಶ್ರಿತ ಬಣ್ಣ ಕಂಡುಬರುವುದು. ದೂರದಿಂದ ನೋಡಿದರೆ ಕಪ್ಪು ಬಿಳುಪಿನ ತರಹ ಗೋಚರಿಸುವಂತೆ ತಂತ್ರಗಾರಿಕೆಯಿಂದ ರಚಿಸಿದ್ದಾರೆ. ಈ ಕಲಾಕೃತಿಗಳನ್ನು ರಚಿಸಲು ಸಂದರ್ಭಕ್ಕನುಸಾರವಾಗಿ ಬೀರಿದ ಪ್ರಭಾವ, ಪ್ರೇರಣೆ ಮತ್ತು ತಂತ್ರಗಾರಿಕೆಯ ಬಗ್ಗೆ ಸಮಗ್ರವಾಗಿ ಚರ್ಚಿಸಲಾಗಿದೆ.

- ಅಧ್ಯಾಯ ಐದರಲ್ಲಿ ರಾಮಚಂದ್ರನ್ ಅವರಿಗೆ ಸಿಕ್ಕಂತಹ ಪ್ರಶಸ್ತಿ ಪುರಸ್ಕಾರಗಳ ಬಗ್ಗೆ ಅಧ್ಯಾಯನ ಮಾಡಲಾಗಿದೆ. ಅವರು ಬೆಳೆದು ಬಂದ ಪರಿಸರದಲ್ಲಿ ದಿನ ನಿತ್ಯ ನೋಡಿದಂತ ದೃಶ್ಯಗಳನ್ನು ಕಲ್ಪನಾ ಮುಖಾಂತರ ರಚಿಸಿದ ಚಿತ್ರಗಳಿಗೆ ಪ್ರಶಸ್ತಿ, ಪುರಸ್ಕಾರಗಳು ಹುಡುಕಿಕೊಂಡು ಬಂದಿರುವ ಬಗ್ಗೆ ಹೇಳಲಾಗಿದೆ. ಅದರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಲಲಿತಕಲಾ ಆಕಾಡೆಮಿ ಪ್ರಶಸ್ತಿ, ದೆಹಲಿಯ ನೆಹರು ಸೆಂಟರನಲ್ಲಿ ಇನ್ನೂ ಅನೇಕ ಕಡೆಗಳಲ್ಲಿ ಪ್ರಶಸ್ತಿಗಳು ಲಭಿಸಿವೆ. ಜೊತೆಗೆ ಕಲಾಪ್ರದರ್ಶನಗಳು, ಕಲಾ ಪ್ರಾತ್ಯಕ್ಷತೆಗಳನ್ನು ಹಲವಾರು ಕಡೆಗಳಲ್ಲಿ ಕೊಟ್ಟಿರುವ ಬಗ್ಗೆ ಅವರಿಗೆ ಸಂದ 'ಕೆಂಪೆಗೌಡ' 'ಕಲಾಶ್ರೀ' ಸೇಲಂನಲ್ಲ, 'ಕಲಾತಿಲಕ' ಬಿರುದುಗಳು ದೊರೆತಿರುವುದನ್ನು ಈ ಅಧ್ಯಾಯನಕ್ಕೆ ಒಳಪಡಿಸಲಾಗಿದೆ.
- ಅಧ್ಯಾಯ ಆರರಲ್ಲಿ ಪ್ರಸ್ತುತ ಪ್ರಬಂಧದಲ್ಲಿ ಎಲ್ಲಾ ಅಧ್ಯಾಯಗಳ ಸಮೀಕ್ಷೆಯನ್ನು ಸ್ಥೂಲವಾಗಿ ವಿವರಿಸಲಾಗಿದೆ.

ಕೆ. ಎನ್. ರಾಮಚಂದ್ರನ್ ಅವರ ಕಲಾಕೃತಿಗಳಲ್ಲಿ ನಾಡಿನ ಸಂಸ್ಕೃತಿಯನ್ನು ಉಳಿಸುವ ಬೆಳೆಸುವ ಪ್ರಯತ್ನ ಅದಮ್ಯವಾಗಿದೆ. ಅವರ ಕಲಾಕೃತಿಗಳ ಅಧ್ಯಯನವೆಂದರೆ ಸಮಕಾಲಿನ ಸಂಸ್ಕೃತಿಯ ಅಧ್ಯಯನವಿದ್ದಂತೆ. ಸಮಕಾಲಿನ ಸಾಂಸ್ಕೃತಿಕ ವಿವರಗಳು ಅವರ ಚಿತ್ರಗಳಲ್ಲಿ ಆಯಾ ಸನ್ನಿವೇಶಕ್ಕೆ ಹೊಂದಿಕೊಳ್ಳುವಂತೆ ಕಲಾಕೃತಿಗಳು ಹಿಡಿದಿಟ್ಟಿವೆ. ಹೆಚ್ಚಿನ ಅಧ್ಯಯನವನ್ನು ಬಯಸುವ ಅವರ ಕಲಾಕೃತಿಗಳು ಮುಂದೆ ಯಾರಾದರೂ ಅಧ್ಯಯನ ಆಸಕ್ತರು ಅವರ ಕಲಾಕೃತಿಗಳ ಬಗ್ಗೆ ಅಧ್ಯಯನಕ್ಕೆ ಮನಸ್ಸು ಮಾಡಿದರೆ, ಇನ್ನೂ ಹೆಚ್ಚಿನದಾಗಿ ಅವರ ಕಲಾಕೃತಿಗಳ ಸಾಮಗ್ರಿಗಳನ್ನು ಅಧ್ಯಯನಕ್ಕೆ ಅಳವಡಿಸಲು ಅವಕಾಶಗಳಿವೆ. ಆ ಮೂಲಕ ಮತ್ತೊಂದು ಹೊಸದಿಕ್ಕೊಂದನ್ನು ಕಲೆ, ಸಾಂಸ್ಕೃತಿಕ ಲೋಕದಲ್ಲಿ ಸೃಜಿಸಬಹುದು ಎಂದು ಹೇಳಬಹುದು. ನನ್ನ ಅಧ್ಯಾಯನದ ಮಿತಿಯೊಳಗೆ ಬೇಕಾಗಿರುವ ಕೆಲವೊಂದು ಕಲಾಕೃತಿಗಳನ್ನು ಮಾತ್ರವೇ ತೆಗೆದುಕೊಂಡು ಈ ಅಧ್ಯಯನ ಮಾಡಿರುತ್ತೇನೆ. ಹಾಗಾಗಿ ಇದು ಅಖಂಡವಾಗಿ ಅವರ ಕುರಿತಾಗಿ ಅವರು ಹೇಳಿರುವಂತಹದ್ದೆಲ್ಲ ಸಂಶೋಧನೆ ಎನ್ನುವುದು ನಿರಂತರ ಪರಿವರ್ತನೆಗೆ ಒಳಪಡುವ ಪ್ರಕ್ರಿಯೆವಾಗಿದ್ದು, ಇಂದಿನ ಸತ್ಯಗಳು ನಾಳೆ ತಪ್ಪಾಗಬಹುದು. ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ನಾನು ಪ್ರಾಮಾಣೀಕವಾಗಿ ಅವರ ಕಲಾಕೃತಿಗಳ ಸ್ಥೂಲ ಪರಿಚಯವನ್ನು ಈ ಸಂಪ್ರಬಂಧದ ಮೂಲಕ ಕಟ್ಟಿಕೊಡಲಾಗಿದೆ.

ಫಲಿತಗಳು

- ಕೆ. ಎನ್. ರಾಮಚಂದ್ರನ್ ಅವರು ಚಿಕ್ಕಂದಿನಿಂದಲೂ ಕಲಾಕೃತಿಗಳನ್ನು ರಚಿಸಿದ್ದು ಅದಕ್ಕೆ ಪ್ರೇರಕವಾದ ಗುರುಗಳು ಪರಿಸರದ ಪ್ರಭಾವ ಮುಖ್ಯವಾದುದು ಅದನ್ನು ಬಿಂಬಿಸಲಾಗಿದೆ.
- ಕೆ. ಎನ್. ರಾಮಚಂದ್ರನ್ ಅವರು ತೈಲವರ್ಣ, ಜಲವರ್ಣ, ಪೆನ್ಸಿಲ್, ಇಂಕ್, ಚಾರಕೋಲ್, ಅಕ್ರಾಲಿಕ್ ಮುಂತಾದ ಮಾಧ್ಯಮಗಳಲ್ಲಿ ತಮ್ಮದೇ ಆದ ಪ್ರಭುತ್ವವನ್ನು ಸಾಧಿಸಿದ್ದನ್ನು ಗುರುತಿಸಲಾಗಿದೆ.
- ತಂದೆ ಸಂಗೀತಗಾರರು, ಕೆ. ಎನ್. ರಾಮಚಂದ್ರನ್‌ರು ಚಿತ್ರಕಲೆಯ ಜೊತೆ ಸಿನಿಮಾ ನಟರಾಗಿಯೂ ಬೆಳೆದ ಸಂಕ್ಷಿಪ್ತ ಇತಿಹಾಸ ಅದಕ್ಕೆ ಅವರು ಮಾಡಿಕೊಂಡ ಸ್ಥಿರತೆಯನ್ನು ವಿವೇಚಿಸಲಾಗಿದೆ.

ಪ್ರಮುಖವಾಗಿ ಸಿನಿಮಾ ಪೋಸ್ಟರ್, ಕಟೌಟಗಳನ್ನು ಚಿತ್ರಮಂದಿರದ ಮುಂದೆ ರಾರಾಜಿಸುವಂತೆ ಮಾಡಿದ್ದಾರೆ. ಅವರ ಕಲಾಕೃತಿಗಳು ಸಾಕಷ್ಟು ಪುಸ್ತಕಗಳ ಮುಖಪುಟಗಳಾಗಿ ಬಳಕೆಯಾಗಿವೆ. ಆ ಮೂಲಕ ತಮ್ಮತನವನ್ನು ಕಾಪಾಡಿಕೊಂಡು ಬಂದಿದ್ದಾರೆ, ಬರುತ್ತಲಿದ್ದಾರೆ.

☆ ☆ ☆

ಅನುಬಂಧ – 1

ಗ್ರಂಥ ಋಣ

ಕ್ರ.ಸಂ	ಗ್ರಂಥದ ಹೆಸರು	ಲೇಖಕರು
01	ಚಿತ್ರಕಲಾ ಪ್ರಪಂಚ ಕರ್ನಾಟಕ ಲಲಿತಕಲಾ ಅಕಾಡಮಿ ಬೆಂಗಳೂರು	: (ಸಂ) ಅ.ಲಿ. ನರಸಿಂಹನ್ : ಎನ್. ಮರಿಶಾಮಾಚಾರ್
02	ಕರ್ನಾಟಕ ಜನಪದ ಚಿತ್ರಕಲೆ ವೀರಶೈವ ಸಂಸ್ಥೆ, ಗದಗ. 1993	: ಡಾ. ಎಸ್.ಸಿ. ಪಾಟೀಲ್
03	ಕಲಾನುಭವ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 1976	: ವಿ. ಸೀತಾರಾಮಯ್ಯ
04	ಕಲಾ ಪ್ರಪಂಚ ವ್ಯಾಸಂಗ ವಿಸ್ತರಣ ಪ್ರಕಟಣ ವಿಭಾಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ 1978	: ಶಿವರಾಮ ಕಾರಂತ
05	ಕಲಾಕೋಶ ಕರ್ನಾಟಕ ಲಲಿತಕಲಾ ಅಕಾಡಮಿ, ಬೆಂಗಳೂರು. 1994	: ಪಿ.ಆರ್. ತಿಪ್ಪೇಸ್ವಾಮಿ
06	ಆರ್.ಎಂ. ಹಡಪದ ಕರ್ನಾಟಕ ಲಲಿತಕಲಾ ಅಕಾಡಮಿ, ಬೆಂಗಳೂರು. 2000	: ಎಂ.ಎಚ್. ಕೃಷ್ಣಯ್ಯ
07	ಡಿ.ವಿ. ಹಾಲಭಾವಿ ಕರ್ನಾಟಕ ಲಲಿತಕಲಾ ಅಕಾಡಮಿ, ಬೆಂಗಳೂರು. 1987	: ಎಸ್.ಕೆ. ಹೂಗಾರ
08	ಕಲೆ ಮತ್ತು ನಾನು ಆಚಾರ್ಯ ಚಿತ್ರ ಕಲಾನುಭವ ಬೆಂಗಳೂರು. 1985	: ಎಂ.ಟಿ.ವಿ. ಆಚಾರ್ಯ
09	ದೃಶ್ಯಾನುಭವ	
10	ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು ಸ್ಕೂಲ್ ಆಫ್ ಆರ್ಟ ಧಾರವಾಡ 1976	: ಡಾ. ಎಸ್.ಸಿ. ಪಾಟೀಲ್
11	ಭಾರತೀಯ ಚಿತ್ರಕಲೆ ಶಿವರಾಮ ಕಾರಂತ ಪುತ್ತೂರು. (ದಕ್ಷಿಣ ಕ.ಜಿಲ್ಲೆ). 1930	: ಶಿವರಾಮ ಕಾರಂತ

12	ಭಾರತದ ದೃಶ್ಯಕಲಾವಿದರು ಕರ್ನಾಟಕ ಲಲಿತಕಲಾ ಅಕಾಡಮಿ, ಬೆಂಗಳೂರು. 1992	: ಎನ್. ಮರಿಶಾಮಾಚಾರ್
13	ಕರ್ನಾಟಕ ಸಂಸ್ಕೃತಿ ಸಮೀಕ್ಷೆ ಕೃಷ್ಣಮೂರ್ತಿ ಪುರಂ. ಮೈಸೂರು. (1ನೇ ಮುದ್ರಣ 1968, 2ನೇ ಮುದ್ರಣ 1974)	: ಎಚ್. ತಿಪ್ಪೇರುದ್ರಸ್ವಾಮಿ
14	ಎಂ.ವಿ. ಮಿಣಜಗಿ ಕರ್ನಾಟಕ ಲಲಿತಕಲಾ ಅಕಾಡಮಿ, ಬೆಂಗಳೂರು. 1983	: ಗವೀಶ ಹಿರೇಮಠ
15	ಕಲಾ ಚರಿತ್ರೆ ಎಂ.ಎಸ್. ಶಾಬಾದಿಮಠ, ಗದಗ. 1998 (5ನೆ ಮುದ್ರಣ)	: ಅಶೋಕ ಅಕ್ಕಿ
16	ಕಲೆಗಳಲ್ಲಿ ಸಂಸ್ಕೃತಿ ಸಂಸ್ಕೃತಿ ಹಾಗೂ ಪರಂಪರೆ ಸ್ಪಂದನ ಚಿತ್ರಕಲಾವಿದರ ಯುವ ಬಳಗ ಬೆಂಗಳೂರು. 1995	: (ಸಂ) ಆರ್.ವಿ. ಶಾಂತರಾಜ
17	ದೃಶ್ಯಕಲೆ ವಿಮರ್ಶೆ ಕರ್ನಾಟಕ ಲಲಿತಕಲಾ ಅಕಾಡಮಿ, ಬೆಂಗಳೂರು. 2000	: ವಿ.ಜಿ. ಅಂದಾನಿ
18	ದೃಶ್ಯಕಲಾ ಲಕ್ಷ್ಮಿ ಮುದ್ರಣಾಲಯ ಬೆಂಗಳೂರು. 2001	: ಎನ್ ಮರಿಶಾಮಾಚಾರ್
19	ಸೌಂದರ್ಯ ಸಮೀಕ್ಷೆ ಸತ್ವಶ್ರೀ ಪ್ರಿಂಟರ್ಸ್, ಬೆಂಗಳೂರು. 1965	: ಜಿ.ಎಸ್. ಶಿವರುದ್ರಪ್ಪ

ಪತ್ರಿಕಾ ಪ್ರಕಟಣೆಗಳು





ART

Exhibition

Rural scenes

Rustic Hues

A painting from Insights of Artist

Gallery walk

'Emerging Lines'

'Akanksha'

For a cause

You are holding an event and want the City to know about it? Send us the details of the event, venue, date and time, along with a photo to get it listed in our In the City column.

From Akanksha

Nostalgia



எண்ணறிவை ஒன்றிணைத்து
வண்ணங்களை கலந்தளித்து
எழில்நிறைந்த சித்திரத்தை
வடிவமைக்கும் கலைப்பணியில்
எண்ணற்ற சித்திரங்கள்
உயிர்பெற்று எழுந்ததுபோல்
உன்பெயரைச் சொல்லுதையா...

கலைகளிலே பலகலைகள்
கற்கண்டாய சிலகலைகள்
கைகளிலே தவழ்கின்ற
[illegible]
எண்ணத் தூரிகையால்
எழில்கொஞ்சும் ஓவியங்கள்
உயிர்த்தெழுந்து நடக்குதைய்யா...

மங்களமாய் மஞ்சள்நிறம்
எச்சரிக்கும் சிவப்புநிறம்
கண்கவரும் பச்சைநிறம்
எனைக்கவர்ந்த ஊதாநிறம்
தூய்மையான வெள்ளைநிறம்
தூரிகையில் பலநிறங்கள்
துடிதடிக்கும் ஓவியங்கள்
உன்பெயரைச் சொல்லுதையா

பழனிவேல்அமுதா
தாமரங்கோட்டை



Entertainment | 15

EXHIBITION

COLOURS OF LIFE

K N Ramachandran, an acclaimed Indian artist is showcasing his new series of oil paintings. Shirley Mistry tells you more

K N Ramachandran, a creative genius, is showcasing a fresh series of oil paintings with lively visuals of colourful South Indian life titled Colours of Life. The marketplace is an important part of South India along with their temples and music. Ramachandran's main focus is on the amalgamated glorification of not only South Indian royals but also the colourful common folk at the roadside markets.

Ramachandran started his career as a film hoarding painter in Bangalore back in 1961 and has held 26 solo shows in the last 40 years. He has been part of several artist camps and Kala Melas which include [illegible] Memorial Artist camps. With over 25 state and national awards, his work is collected in several parts of the nation and is displayed in many global art centers. He is the founder of [illegible] Sangam in Chennai and Bangalore after having participated in almost all major visual mediums. Exhibiting for over ten decades, he is an abode of creativity with his work also been commercially adapted in various marketing campaigns for movies such as *Luck By Chance* and *ABCD* posters, making him an artist to have on your must-see list.

When Up to January 23
Where Jehangir Art Gallery, Kala Ghoda, Fort



Art


Solo Photography Exhibition
Fine Art Photographic works by Hitendra Sinkar comprises of a collection of select digital work since 2004.
WHEN: 11 am to 7 pm
WHERE: Hirji Jehangir Art Gallery, Kala Ghoda

Colour of Life
KN Ramachandran, one of India's most prolific and distinguished artists, will display his creative works. His theme 'Color of Life' a fresh series of oil paintings with lively visuals of colourful South Indian life. Market is a major life source of South India along with temples and music. Ramachandran's main focus is upon amalgamated glorification of not only South Indian royals but also roadside market's colourful common folks.
WHEN: 11 am to 7 pm
WHERE: Hirji Jehangir Art Gallery, Kala Ghoda

Solo art exhibition
Sold Out Skyline is a solo exhibition by Nanda Das. For his second solo exhibition, photo realist painter Nanda Das returns back to Bombay and Sky.
WHEN: 11 am to 7 pm, on till January 28
WHERE: Tao Art Gallery, Worli

Artwork by KN Ramachandran

A painting by Nanda Das



Riot of colours

K N Ramachandran, one of India's most prolific and distinguished artists, is back with his display of works. *Colour of Life* is a fresh series of oil paintings with lively visuals of colourful South Indian life. Market is a major life source of South India along with temples and music. Ramachandran's main focus is upon amalgamated glorification of not only South Indian royals but also roadside market's colourful common folks. Exhibiting for over two decades, Ramachandran's work has been commercially adapted in various marketing campaigns such as *Luck By Chance* and *ABCD* posters.

Starts from today at Jehangir Art Gallery from 11am to 7pm

